(ಇ) 2006-07ನೇ ಸಾಲಿನ ಅನುದಾನ ಬೇಡಿಕೆಗಳ ಮೇಲೆ ಚರ್ಚೆ

ಶ್ರೀ ಕೆ. ಶ್ರೀನಿವಾಸಗೌಡ (ಕೋಲಾರ) ಮಾನ್ಯ ಅಧ್ಯಕ್ಷರೆ, ಕೃಷಿ ವಿಷಯದಲ್ಲಿ ಈ ದೇಶದಲ್ಲಾಗಬಹುದು, ಈ ರಾಜ್ಯದಲ್ಲಾಗಬಹುದು ಒಂದು ರೀತಿಯ ಮಲತಾಯಿ ಧೋರಣೆ ಇದೆ. ಏಕೆ ನಾನು ಈ ಮಾತನ್ನು ಹೇಳಲು ಇಚ್ಛೆಪಡುತ್ತೇನೆಂದರೆ, ಜನಸಂಖ್ಯೆ ಆಧಾರದ ಮೇಲೆ ಏನು ನಮ್ಮ ಬಜೆಟ್‌ನ್ನು ಹಂಚಬೇಕಾಗಿತ್ತು ಆ ರೀತಿ ಹಂಚದೆ ಕೃಷಿಗೆ ಏನೋ ಮಾಡಿದ್ದೇವೆ ಎನ್ನುವುದನ್ನು ಬಿಟ್ಟರೆ ಹೆಚ್ಚು ಆದ್ಯತೆಯನ್ನು ಸ್ವಾತಂತ್ರ್ಯ ಬಂದು 60 ವರ್ಷಗಳಾದರೂ ಕೊಟ್ಟಿಲ್ಲ. 2006-07ರಲ್ಲಿ 41,850.66 ಕೋಟಿ ರೂಗಳನ್ನು ವೆಚ್ಚಗಳಿಗೆ ಇಟ್ಟಿದ್ದಾರೆ. ಇದರಲ್ಲಿ ಕೃಷಿಗೆ 352.20ಕೋಟಿ ರೂ ಮಾತ್ರ ಇಟ್ಟಿದ್ದಾರೆ. ಅದರ ಹಿಂದಿನ ವರ್ಷ, 2005-06ರಲ್ಲಿ 35,940.98 ಕೋಟಿ ರೂ.ನಲ್ಲಿ..

ಶ್ರೀ ಎನ್. ಧರ್ಮ್‌ಸಿಂಗ್: ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಕೃಷಿ ಇಲಾಖೆ ಬಗ್ಗೆ ಭಾಷಣ ಪ್ರಾರಂಭ ಮಾಡಿದ್ದಾರೆ. ಆದರೆ ಸಚಿವರೇ ಇಲ್ಲ

ಅಧ್ಯಕ್ಷರು: ನನಗೆ ಅವರು ಒಂದು ಪತ್ರವನ್ನು ಬರೆದಿದ್ದಾರೆ. ಬಹಳ ಹಿಂದೆಯೇ ಉದಯ ಟಿ.ವಿ.ಯಲ್ಲಿ ಇದೇ ಸಮಯಕ್ಕೆ ಸಂದರ್ಶನ ನಿಗದಿಯಾಗಿದೆ. ಅದಕೋಸ್ಕರ ಅವರಲ್ಲಿ ಭಾಗವಹಿಸಬೇಕಾಗಿರುವುದರಿಂದ..

ಶ್ರೀ ಎನ್. ಧರ್ಮ್‌ಸಿಂಗ್: ಉದಯ ಟಿ.ವಿ.ಯಲ್ಲಿ ಎಲ್ಲಾ ಕಡೆಗೆ ಫಿಕ್ಸ್ ಆಗುತ್ತಿರುತ್ತದೆ. ಅದೊಂದು ನೆಪ, ಈವತ್ತು ಒಂದು ವರ್ಷದ ಬೇಡಿಕೆ ಇರತಕ್ಕ ಸಮಯದಲ್ಲಿ ಅವರು ಇರಲೇ ಬೇಕು.

ಶ್ರೀ ಎಂ.ಪಿ. ಪ್ರಕಾಶ್: ಈಗಾಗಲೇ ಅವರು ತಮಗೆ ಅರಿಕೆ ಮಾಡಿಕೊಂಡಿದ್ದಾರೆ. ಬೇರೆಯವರನ್ನು ಕೂಡ ಪ್ಯಾನಲ್ ಡಿಸ್‌ಕಷನ್ ಎಂದು ಕರೆದಿದ್ದು ಅದು ಮೊದಲೇ ಪೂರ್ವನಿರ್ಧಾರಿತವಾಗಿರತಕ್ಕ ಕಾರ್ಯಕ್ರಮ. ಕೇವಲ ಒಂದು ಗಂಟೆ ಇದೆ ಎನ್ನತಕ್ಕದ್ದಿದೆ. ಪ್ರಾಯಶ: ನಾಲ್ಕು ಮೂವತ್ತರೊಳಗೆ ಬಂದುಬಿಡುತ್ತೇನೆಂದು ಹೇಳಿದ್ದಾರೆ. ಮಾನ್ಯ ಶ್ರೀನಿವಾಸಗೌಡರು ಕೊಡತಕ್ಕ ಎಲ್ಲಾ ಸಲಹೆಗಳನ್ನು ಮಾನ್ಯ ಕಾರಜೋಳರವರು ಗುರುತು ಮಾಡಿಕೊಳ್ಳುತ್ತಾರೆ. ದಯವಿಟ್ಟು ಅಷ್ಟರಮಟ್ಟಿಗೆ ತಾವು ಕ್ಷಮಾ ತೋರಿಸಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಕೆ. ಶ್ರೀನಿವಾಸಗೌಡ: ಮಾನ್ಯ ಪ್ರಕಾಶ್‌ರವರು ಕ್ಷಮೆ ಕೇಳುವುದೇ ಆಗಿ ಹೋಯಿತು. 2005-06ನೇ ವರ್ಷದಲ್ಲಿ 35,094.98 ಕೋಟಿ ರೂಪಾಯಿಗಳನ್ನು ವೆಚ್ಚ ಮಾಡಿದ್ದಾರೆ. ಆಗ ಕೃಷಿಗೆ 403.56 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದರು. ನಾನು ಏಕೆ ಇದನ್ನು ಹೇಳುತ್ತಿದ್ದೇನೆ ಎಂದರೆ, ಇವತ್ತು ನಮ್ಮ ರಾಜ್ಯದಲ್ಲಿ ಸುಮಾರು geographical area 190.5 ಲಕ್ಷ ಹೆಕ್ಟೇರ್‌ಗಳಷ್ಟು ಜಮೀನು ನಮ್ಮ ರಾಜ್ಯದಲ್ಲಿದೆ. ನಮ್ಮ ಬಿತ್ತನೆ ಮಾಡುವಂತಹ ಏರಿಯಾ 104.1 ಲಕ್ಷ ಹೆಕ್ಟೇರ್ ಇದೆ. ಈ gross crop area 122.8 ಲಕ್ಷ ಹೆಕ್ಟೇರ್ ಇದೆ. Cultivators 71 ಲಕ್ಷ ರೈತರಿದ್ದಾರೆ. Agriculture labourers 62.1 ಲಕ್ಷ ಜನರಿದ್ದಾರೆ. ನೀವು ಕೃಷಿಗೆ ಕೇವಲ 352 ಕೋಟಿ ರೂಪಾಯಿಗಳನ್ನು ಮಾತ್ರ ಇಟ್ಟಿದ್ದೀರಿ. ಈಗ ಶೇಕಡ 4ರಷ್ಟು ಬಡ್ಡಿ ದರದಲ್ಲಿ ಸಾಲ ಕೊಡುತ್ತಿರುವುದರಿಂದ ಇನ್ನೂ 200 ಕೋಟಿ ರೂಪಾಯಿಗಳು ಹೆಚ್ಚಾಗಿ ಒಟ್ಟಾರೆಯಾಗಿ ಅದು 500

ಕೋಟಿ ರೂಪಾಯಿಗಳಾಗಬಹುದು. ಈ ರಾಜ್ಯದ total population 528.51 ಲಕ್ಷ ಇದೆ. ಅದರಲ್ಲಿ ಹಳ್ಳಿಗಾಡಿನ ಜನ 348.89 ಲಕ್ಷ ಜನರಿದ್ದಾರೆ Urban population 179.62 ಲಕ್ಷ ಇದ್ದಾರೆ. ಇವತ್ತು ರಾಜ್ಯದ ಜನಸಂಖ್ಯೆಯಲ್ಲಿ ಮೂರನೇ ಎರಡು ಭಾಗ ಇರುವಂತಹ ಜನಸಂಖ್ಯೆಗೆ ಬಡ್ಡಿ ಮನ್ನಾ ಮತ್ತು ಇನ್ನಿತರ ಎಲ್ಲಾ ಸೇರಿ ಒಟ್ಟು 1200 ರಿಂದ 1500 ಕೋಟಿ ರೂಪಾಯಿಗಳನ್ನು ಮಾತ್ರ ಮೀಸಲಿಡಲಾಗಿದೆ. ನಾವು ರಾಜಕಾರಣಿಗಳು ಇರಬಹುದು ಅಥವಾ ಇನ್ಯಾರೇ ಇರಬಹುದು, ನಾವು ಎಲ್ಲಿ ನೋಡಿದರೂ ಸಹಿತ, ನಾವೆಲ್ಲರೂ ಹೇಳುವುದೇನೆಂದರೆ, ನಾವೆಲ್ಲಾ ಕೃಷಿಗೆ ಆದ್ಯತೆಯನ್ನು ಕೊಡುತ್ತಿದ್ದೇವೆ. ಕೃಷಿ ಮುಂದೆ ಬಂದರೆ ನಾವೆಲ್ಲಾ ಮೇಲೆ ಹೋಗುತ್ತೇವೆ, GDP ಜಾಸ್ತಿಯಾಗುತ್ತದೆ ಎಂದೆಲ್ಲಾ ನಾವು ಹೇಳುತ್ತೇವೆ. ಸ್ವಾತಂತ್ರ್ಯ ಬಂದು 60 ವರ್ಷಗಳಾದರೂ ಕೂಡ ಇವೆಲ್ಲಾ ಕೇವಲ ಭಾಷಣಗಳಲ್ಲೇ ಉಳಿದಿದೆ. ಇವತ್ತು ಅದೆಲ್ಲ ಬರೇ ಭಾಷಣಕ್ಕೆ ಸೀಮಿತವಾಯಿತೇ ವಿನ: ಈ ಜನಸಂಖ್ಯೆ ಆಧಾರದ ಮೇಲೆ ಬಜೆಟ್ ಅನ್ನು ಎಲ್ಲಿಯವರೆಗೆ ನಾವು ಮಾಡುವುದಿಲ್ಲವೋ, ಎಲ್ಲಿಯವರೆಗೆ ವ್ಯಕ್ತಿಗತವಾಗಿ ಒಬ್ಬ ವ್ಯಕ್ತಿಗೆ ಇಷ್ಟು ಹಣ ಸೇರಬೇಕು ಎಂದು ನಿಗದಿ ಪಡಿಸುವಂತಹ ರಾಜಕೀಯ ಇಚ್ಛಾಶಕ್ತಿ ಸರ್ಕಾರಗಳಿಗೆ ಬರುವುದಿಲ್ಲವೋ, ಅಲ್ಲಿಯವರೆಗೂ ಕೂಡ ಕೃಷಿ ಅಥವಾ ಕೃಷಿಕ ಮೇಲೆ ಬರಲಿಕ್ಕೆ ಸಾಧ್ಯವಿಲ್ಲ. ಇವತ್ತು ನಾನೇನು ಹೇಳಲಿಕ್ಕೆ ಹೊರಟಿದ್ದೇನೆ ಎಂದರೆ, ಇವತ್ತು ಕೃಷಿಗೆ ಹೋಲಿಸಿದರೆ ಕೈಗಾರಿಕಾ ವಲಯಕ್ಕೆ ನೀಡಿರುವ ಹಣ ಶೇಕಡ 50ಕ್ಕಿಂತಲೂ ಹೆಚ್ಚಾಗಿದೆ. ನಿಜ, ಎರಡೂ ಕೂಡ ಸಮನಾಗಿ ಓಡಿದರೆ ದೇಶದ ಪ್ರಗತಿ ಚೆನ್ನಾಗಿ ಆಗುತ್ತದೆ, ಅದನ್ನು ನಾನು ಇಲ್ಲವೆಂದು ಹೇಳುವುದಿಲ್ಲ. ಒಂದು ಕಡೆ ಕೃಷಿಯೂ ಅಭಿವೃದ್ದಿಯಾಗಬೇಕು, ಕೈಗಾರಿಕೆಗಳೂ ಕೂಡ ಅಭಿವೃದ್ಧಿಯಾಗಬೇಕು, ಆಗ ಮಾತ್ರ ನಮ್ಮ economy ಬೆಳೆಯುತ್ತದೆ. ಇವತ್ತು ರಾಜ್ಯದಲ್ಲಿ total holdings 70.79 ಲಕ್ಷ ಹೆಕ್ಟೇರುಗಳು ಇವೆ. Marginal farmers 32.50 ಲಕ್ಷ ಇದ್ದಾರೆ, Small farmers 19.09 ಲಕ್ಷ ಇದ್ದಾರೆ Semi medium farmers 12.59 ಲಕ್ಷ ಜನರಿದ್ದಾರೆ, Medium farmers 5.69 ಲಕ್ಷ ಜನರಿದ್ದಾರೆ. ಮಾನ್ಯ ದೇವರಾಜ್‌ಅರಸ್‌ರವರು land ceiling ತಂದ ಮೇಲೆ ದೊಡ್ಡ ರೈತರ ಸಂಖ್ಯೆ ಕಡಿಮೆಯಾಗಿದೆ. ರಾಜ್ಯದಲ್ಲಿ ದೊಡ್ಡ ರೈತರು 0.9 ಲಕ್ಷ ಇದ್ದಾರೆ. ಅವರ Average size of holding 1.74 ಹೆಕ್ಟೇರ್ಸ್ ಇದೆ. ಅವರ್‍ಯಾರೋ ನಿನ್ನೆ ಹೇಳಿದ್ದು ಅದೇ. ಸಬ್ಸಿಡಿಯಲ್ಲಿ ಬಿತ್ತನೆ ಬೀಜ ಕೊಡುತ್ತಿದ್ದಾರೆ ಎಂದರೆ, ಅವಿಭಾಜ್ಯ ಕುಟುಂಬ ಅಪ್ಪನ ಹೆಸರಿನಲ್ಲಿ ಇರುತ್ತದೆ, ಅವರಿಗೆ ಐದು ಎಕರೆ ಇರುತ್ತದೆ. ಅವರ ಮನೆಯಲ್ಲಿ 10 ಜನರಿರುತ್ತಾರೆ. ಅವನು ತಾನು ಸಣ್ಣ ರೈತನಲ್ಲ, ದೊಡ್ಡ ರೈತ ಎಂದು ಹೇಳಿಕೊಳ್ಳುತ್ತಾನೆ. ಇದಕ್ಕೆ ನೀವು holding certificate ಮಾಡಿ ಎಂದರೆ, ಇಷ್ಟು marginal farmers, small farmers, ಇರುವಂತಾದ್ದರಲ್ಲಿ 75 ಪರ್ಸೆಂಟ್ ಸೀಡ್ ಸಬ್ಸಿಡಿ ಡಿಕ್ಲೇರ್ ಮಾಡಿ. ಕೇವಲ 1–2–3 ಲಕ್ಷ ಜನರಿಗೆ ಕೊಟ್ಟು ಅಥವಾ ಒಂದತ್ತು ಲಕ್ಷ ಜನರಿಗೆ ಕೊಟ್ಟು, ನಾವು ಮಾಡಿದ್ದೇವೆ ಎಂದು ಹೇಳಿಕೊಂಡು ಕನ್ವೊರೆಸುವಂತಹ ತಂತ್ರ ಇದಾಗಿದೆ ಎಂದು ನಾನಂತೂ ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಮಾನ್ಯ ಅಧ್ಯಕ್ಷರೆ, ಇವರಲ್ಲಿ ನಮ್ಮ ರಾಜ್ಯದಲ್ಲಿ net irrigated area 23.84 ಲಕ್ಷ ಹೆಕ್ಟೇರ್‌ಗಳು. Gross

irrigated area 27.02 ಲಕ್ಷ ಹೆಕ್ಟೇರ್‌ಗಳು. ಶೇಕಡ 76ರಷ್ಟು gross cultivated area is under rain bed. ಅಂದರೆ ಮಳೆ ಆಧಾರಿತ ಜಮೀನು ಇವತ್ತು ನಮ್ಮ ರಾಜ್ಯದಲ್ಲಿ ಶೇಕಡ 76ರಷ್ಟು ಇದೆ. ಇದರಲ್ಲಿ ಶೇಕಡ 24 gross cultivated area under irrigation. After Rajasthan, Karnataka is the second large state in terms of the region. ಅಂದರೆ ಈ rain bedಗೆ ರಾಜಾಸ್ಥಾನ್ ಬಿಟ್ಟರೆ, ಎರಡನೇ ಸ್ಥಾನದಲ್ಲಿ ನಾವಿದ್ದೇವೆ. ಮೊನ್ನೆ ಪತ್ರಿಕೆಯೊಂದರಲ್ಲಿ ಬಂದಿತ್ತು. ಮುಂದಿನ ದಿನಗಳಲ್ಲಿ ನಾವು ಮರುಭೂಮಿ ಆಗುವುದನ್ನು ತಡೆಗಟ್ಟಬೇಕು. ಅದರಲ್ಲೂ ಬಯಲು ಸೀಮೆಗಳಲ್ಲಿ ಮುಖ್ಯವಾಗಿ ತಡೆಗಟ್ಟಬೇಕಾಗಿದೆ. ದಿನೇದಿನೇ rainfall ಕಡಿಮೆಯಾಗುತ್ತಿರುವ ಈ ರಾಜ್ಯವನ್ನು ಮರುಭೂಮಿ ಆಗುವುದನ್ನು ನಾವು ನಿಲ್ಲಿಸದಿದ್ದರೆ ಮುಂದಿನ 20 ವರ್ಷಗಳಲ್ಲಿ ಇಡೀ ರಾಜ್ಯದಲ್ಲಿ ಕೆಲವೊಂದು ಜಿಲ್ಲೆಗಳ ಏರಿಯಾಗಳನ್ನು ಬಿಟ್ಟು ಮಿಕ್ಕೆಲ್ಲಾ ಏರಿಯಾ ಮರುಭೂಮಿ ಆಗುವುದರಲ್ಲಿ ಎರಡನೇ ಮಾತಿಲ್ಲ. ಇದಕ್ಕೆ ಆದ್ಯತೆಗಳನ್ನು ಕೊಡುವಂತಹ ಕೆಲಸ ಸರ್ಕಾರಗಳು ಮಾಡುತ್ತಿಲ್ಲ. ಅವರು ಮಾಡಿದರು, ಇವರು ಮಾಡಿದರು ಎನ್ನುವಂತಹ ವಿಚಾರಕ್ಕೆ ನಾನು ಹೋಗುವುದಿಲ್ಲ. ಇಲ್ಲಿರುವ 224 ಜನ ಶಾಸಕರಲ್ಲಿ 24 ಜನರನ್ನು ಬಿಟ್ಟರೆ ಉಳಿದ 200 ಜನರೆಲ್ಲರೂ ಕೃಷಿಕರ ಹಿನ್ನೆಲೆಯಿಂದ ಬಂದವರೇ ಆಗಿದ್ದೇವೆ. ಏಕೆ ಈ ರೀತಿ ತಾರತಮ್ಯಗಳಾಗುತ್ತಿದೆ? ಅಥವಾ ವ್ಯತ್ಯಾಸಗಳಾಗುತ್ತಿದೆ? ಇಷ್ಟು ಅಂತರ ಉಂಟಾಗಲು ಕಾರಣವೇನು ಎನ್ನುವುದನ್ನು ನಾವೆಲ್ಲರೂ ಇವತ್ತು ಯೋಚಿಸಬೇಕಾಗಿದೆ. ಬಜೆಟ್ ಅನ್ನು ಮಂಡಿಸುವಾಗ ನಾವು ಅದರ ಬಗ್ಗೆ ಇಲ್ಲಿ ಯೋಚನೆ ಮಾಡಬೇಕಾಗುತ್ತದೆ. ಮಾನ್ಯ ಯಡಿಯೂರಪ್ಪನವರು ಇದನ್ನು ಯೋಚನೆ ಮಾಡಬೇಕಾಗಿತ್ತು. Population ಪ್ರಕಾರ ನೀವು ಯಾವುದನ್ನು ಹಳ್ಳಿಗಾಡಿನಲ್ಲಿ ರೈತ ನಿಮ್ಮ ಬಜೆಟ್‌ನಲ್ಲಿ ರೈತನ ತಲೆಗೆ ಎಷ್ಟು ಸಿಗುತ್ತದೆ? ಒಬ್ಬ individual ಒಬ್ಬ ರೈತನಿಗೆ ಅವನ ತಲೆಗೆ ನಮ್ಮ ಬಜೆಟ್ಟಿನಿಂದ ಎಷ್ಟು ಹಣ ಹೋಗುತ್ತದೆ ಎನ್ನುವಂತಹ ಭಾವನೆಯನ್ನು ಕಲ್ಪಿಸಿಕೊಂಡಾಗ, ಅವತ್ತು ರಾಜ್ಯದ ಕೃಷಿ ಅಭಿವೃದ್ಧಿ ಜಾಸ್ತಿಯಾಗುತ್ತದೆ. ಇವತ್ತು ಏನು ಮಳೆ ಆಧಾರಿತ ಪ್ರದೇಶ ನಮ್ಮಲ್ಲಿ ದಿನೇದಿನೇ ಕಡಿಮೆಯಾಗುತ್ತಿದೆ. ಅದರಲ್ಲಿ agricultural crops ಕೂಡ ಖಾರೀಫ್‌ನಲ್ಲಿ ನಮ್ಮಲ್ಲಿ ಏಪ್ರಿಲ್-ಸೆಪ್ಟೆಂಬರ್‌ನಲ್ಲಿ 68,14 ಲಕ್ಷ ಹೆಕ್ಟೇರ್‌ಗಳಲ್ಲಿ ಬಿತ್ತನೆಯಾಗುತ್ತದೆ. Rabi ನಲ್ಲಿ ಅಕ್ಟೋಬರ್‌ನಿಂದ ಡಿಸೆಂಬರ್‌ವರೆಗೆ 31.95 ಲಕ್ಷ ಹೆಕ್ಟೇರ್ ಆಗುತ್ತದೆ. ಜನವರಿಯಿಂದ ಮಾರ್ಚ್‌ವರೆಗಿನ summer ನಲ್ಲಿ 6.23 ಲಕ್ಷ ಹೆಕ್ಟೇರ್ ಬಿತ್ತನೆ ಆಗುತ್ತದೆ. Total normal area 106.32 lakh hectares ಇದೆ. ಇದು ರೈತನ ಬೆನ್ನೆಲುಬು. ನಾವು ಭಾಷಣಗಳಲ್ಲಿ ರೈತನೇ ಈ ದೇಶದ ಬೆನ್ನೆಲುಬು ಎಂದು ಹೇಳುತ್ತೇವೆ. ಅವನ ಬೆನ್ನೆಲುಬಿಗೆ ಕ್ಯಾನ್ಸರ್ ಬಂದು ಬಹಳ ವರ್ಷಗಳಾಗಿದೆ. ಆದರೂ ಅವನು ನಡೆಮುಕೊಂಡು ಓಡಾಡುತ್ತಿದ್ದಾನೆ. ಮಾನ್ಯ ಅಧ್ಯಕ್ಷರು ನನ್ನ ಮಾತಿಗೆ ನಗುತ್ತಿದ್ದೀರಿ. ಏಕೆಂದರೆ, ನೀವು ಕಷ್ಟವನ್ನು ಅನುಭವಿಸಿದ್ದೀರಿ. ಅವನಿಗೆ ಬಂದಿರುವ ಕ್ಯಾನ್ಸರ್ ಅವನ ಎಲುಬನ್ನೇ ತಿಂದು ಹಾಕಿದೆ.

ಶ್ರೀ ಆರಗ ಜ್ಞಾನೇಂದ್ರ: ಕ್ಯಾನ್ಸರ್ ಯಾವ ವರ್ಷದಿಂದ ಆರಂಭವಾಯಿತು ಎಂಬುದನ್ನು ದಯವಿಟ್ಟು ತಾವು ಹೇಳುತ್ತೀರಾ?

ಶ್ರೀ ಕೆ. ಶ್ರೀನಿವಾಸಗೌಡ: ಕಳೆದ 60 ವರ್ಷಗಳಿಂದ ಈ ದೇಶದಲ್ಲಿ ಯಾರೇ ಅಧಿಕಾರ ಮಾಡಿರಲಿ, ನಾನು, ನೀವು ನಮ್ಮ ಪಕ್ಷ ನಿಮ್ಮ ಪಕ್ಷ ಎಂಬುದನ್ನು ಬದಿಗೊತ್ತಿ. ಇವತ್ತು ಜಪಾನ್ ದೇಶದಲ್ಲಿ, ಸರ್ಕಾರ ಬೇಡ ಎಂದು ಹೇಳಿದರೆ agriculturists ನಾಳೆ ಆ ಸರ್ಕಾರವನ್ನು ತೆಗೆದು ಹಾಕುತ್ತಾರೆ. ಇವತ್ತು ಈ ದೇಶದಲ್ಲಿ ಇಷ್ಟೊಂದು ಜನಸಂಖ್ಯೆ ಇದೆ. ಈ ಸರ್ಕಾರಗಳ ಮೇಲೆ ನೀವೇನು hold ಇಟ್ಟಿದ್ದೀರಿ? ಜಪಾನ್ ದೇಶದಲ್ಲಿ ರೈತರ ಹೋರಾಟ ಎಂಟು ದಿವಸ ನಡೆದದ್ದೇ ಆದರೆ ಅಲ್ಲಿಯ ಸರ್ಕಾರ ಇಳಿಯುತ್ತದೆ. ಇಷ್ಟೊಂದು ಜನಸಂಖ್ಯೆ ಇರುವಂತಹ ಹಳ್ಳಿಗಾಡಿನ ಜನ, ನಾವು ಎಷ್ಟರಮಟ್ಟಿಗೆ ಒಗ್ಗಟ್ಟಾಗಿದ್ದೇವೆ ಎಂಬುದನ್ನೂ ಸಹ ಇಲ್ಲಿ ನೋಡಬೇಕಾಗುತ್ತೆ. ನಮ್ಮಲ್ಲಿ ನಾವು ಕಿತ್ತಾಡುತ್ತೇವೆ. ನೀವು ಅಧಿಕಾರದಲ್ಲಿ ಇದ್ದಾಗ ಏನು ಮಾಡಿದಿರಿ? ನಾವು ಅಧಿಕಾರದಲ್ಲಿ ಇದ್ದಾಗ ಏನು ಮಾಡಿದ್ದೇವೆ ಎನ್ನುವುದು ಇಲ್ಲಿ ಮುಖ್ಯವಲ್ಲ. ಮೂಲತ: ಈ ವ್ಯವಸ್ಥೆಗೆ ಕಳಂಕ ತರುವಂತಹ ರೀತಿಯಲ್ಲಿ ನಾವು ನಡೆದುಕೊಂಡು ಬಂದಿದ್ದೇವೆ. ಸ್ವಾತಂತ್ರ್ಯ ಬಂದು 60 ವರ್ಷಗಳಾದ ಮೇಲೂ ಕೂಡ...

ಶ್ರೀ ಡಿ.ಆರ್.ಪಾಟೀಲ್: ಸಾಹೇಬರೇ ನೋಡಿ, ಒಂದು ಇದ್ದುದ್ದನ್ನು ಹತ್ತು ಮಾಡುವುದು, ಹತ್ತು ಇದ್ದುದ್ದನ್ನು ನೂರು ಮಾಡುವುದು, ನೂರು ಇದ್ದುದ್ದನ್ನು ಸಾವಿರ ಮಾಡುವ ಶಕ್ತಿ ಇರುವುದು ರೈತನಿಗೆ ಮಾತ್ರ. ಯಾರೇ ವ್ಯಾಪಾರಸ್ಥರು ಆಗಲಿ, Industrialists ಆಗಲಿ ಒಂದು ಇದ್ದುದ್ದನ್ನು ಒಂದೂವರೆ ಸಹಿತ ಅವರು ಮಾಡುವುದಿಲ್ಲ. ಒಂದು ಇದ್ದುದ್ದನ್ನು ಕಡಿಮೆ ಮಾಡುವವರು ಅವರಾಗಿದ್ದಾರೆ. ಆದರೆ ಅವರ ಅನುಕೂಲತೆ ಹೇಗಿದೆ? ನಮ್ಮ ಅನುಕೂಲತೆ ಹೇಗಿದೆ? ಒಟ್ಟಾರೆ ಈ ಪರಿಸ್ಥಿತಿಯನ್ನು ನೀವು ನೋಡಿ.

ಅಧ್ಯಕ್ಷರು: ಒಂದು ಇದ್ದುದ್ದನ್ನು ನೂರು ಮಾಡುವುದು, ಸಾವಿರ ಮಾಡುವುದು ಎಂದರೆ ಏನು ಎಂಬುದು ನನಗೆ ಅರ್ಥವಾಗಲಿಲ್ಲ.

ಶ್ರೀ ಡಿ.ಆರ್.ಪಾಟೀಲ್: ಒಂದು ಬೀಜ ಹಾಕಿ ಹತ್ತು ಬೀಜ ತೆಗೆಯುತ್ತೇವೆ, ನೂರು ಬೀಜ ತೆಗೆಯುತ್ತೇವೆ, ಸಾವಿರ ಬೀಜ ತೆಗೆಯುತ್ತೇವೆ, ಉತ್ಪಾದನೆ ಸಾಕಷ್ಟು ಹೆಚ್ಚು ಮಾಡುವಂತಹ ಶಕ್ತಿ ಇರುವುದು ನಮಗಷ್ಟೇ. ಅವರು ಸಂಸ್ಕರಣೆ ಮಾಡುವವರು ಅಥವಾ ಮಾರಾಟ ಮಾಡುವವರು, ಒಬ್ಬರ ಕಡೆಯಿಂದ ಇನ್ನೊಬ್ಬರ ಕಡೆಗೆ ಮಾರಾಟ ಮಾಡುವವರು. ವ್ಯಾಪಾರಸ್ಥರು ಮತ್ತು ಉದ್ದಿಮೆದಾರರು ಎಷ್ಟು ಸುಖವಾಗಿ ಈ ದೇಶದಲ್ಲಿ ಬದುಕುತ್ತಿದ್ದಾರೋ, ಅಷ್ಟು ಸುಖವಾಗಿ ಬದುಕುವಂತಹ ಅವಕಾಶ ನಮಗೆ ಇಲ್ಲವೇ ಇಲ್ಲ. ಅದನ್ನು ಮಾನ್ಯ ಉದಾಸಿಯವರು ಒಪ್ಪುತ್ತಾರಲ್ಲವೇ? ನಾವು ಮತ್ತು ನೀವು ಸೇರಿ, subject committee ಯಲ್ಲಿ ಠರಾವು ಮಾಡಿ, ದಲ್ಲಾಲರು ದಲ್ಲಾಳಿ ತೆಗೆದುಕೊಳ್ಳುವುದನ್ನು ನಿಲ್ಲಿಸಬೇಕು, through APMC payment ಮಾಡಬೇಕು ಎಂದು ಒಂದು Act ಮಾಡಿದ್ದೆವು. ಆ ಆಕ್ಟ್ ಮಾಡಿದ್ದನ್ನು ಇಂಪ್ಲಿಮೆಂಟ್ ಮಾಡುವುದಕ್ಕೆ ನೋಟಿಫೈ ಆಗಿಲ್ಲ 8 ವರ್ಷವಾಯಿತು. ಮೊದಲನೆ ವರ್ಷ ನೀವು ಬಂದಾಗ ಸಿಟ್ಟಿಗೆದ್ದು, 6 ವರ್ಷವಾದರೂ ಇನ್ನೂ ನೋಟಿಫೈ ಆಗಿಲ್ಲವೆಂದರೆ ಹೇಗೆ ಎಂದು ಹೇಳಿದಿರಿ. ಈಗ 8ನೇ ವರ್ಷ ಇನ್ನೂ ನೋಟಿಫೈ ಆಗಿಲ್ಲ. ಇದೇನೂ ಮಹಾರಾಜರ ರಾಜಕೀಯವಲ್ಲ, ವ್ಯವಸ್ಥೆ ನೋಡಿ ಹೇಗಿದೆ.

ಅಧ್ಯಕ್ಷರು: ಅಧಿಕಾರಿಗಳು ಮಲಗಿದ್ದಾರೆ ಯಾರೂ ಏಳಿಸುವುದಕ್ಕಾಗುವುದಿಲ್ಲ, ಈಗ ನಮ್ಮ ಅಧಿಕಾರಿಗಳು ಎಷ್ಟಿದ್ದಾರೆ ಎಂದರೆ, ಸರ್ಕಾರದ ಬಗ್ಗೆಯೂ ಗೌರವವಿಲ್ಲ, ಭಯವಿಲ್ಲ, ಈ ಸದನದ ಬಗ್ಗೆಯೂ ಗೌರವವಿಲ್ಲ, ಭಯವಿಲ್ಲ, ಅದನ್ನು ಆ ಕಡೆ ಈ ಕಡೆ ಇರುವವರೆಲ್ಲಾ ಕುಳಿತು ಯೋಚನೆ ಮಾಡಿ, ಅವರಿಗೆ ಮೂಗುದಾರ ಹಾಕುವ ಶಕ್ತಿ ಇದೆಯೋ ಏನೋ ನೋಡಿಕೊಳ್ಳಿ.

ಶ್ರೀ ಡಿ.ಆರ್.ಪಾಟೀಲ್: ಮಾನ್ಯ ಅಧ್ಯಕ್ಷರೆ, ರಾಜ ಮಹಾರಾಜರಿದ್ದಾಗ ಇದನ್ನು ಒಪ್ಪೋಣ, ಪ್ರಜಾಪ್ರಭುತ್ವದೊಳಗೆ, ಬಹುತೇಹ ಶೇಕಡ 75 ಮೇಲೆ ಅಂಕಿಸಂಖ್ಯೆಯಲ್ಲಿ ನಾವೇ, ಆದರೆ ದುರ್ದೈವ ನಾವು ಬಹಳ ದಡ್ಡರು, ಬುದ್ಧಿವಂತರೆಲ್ಲಾ ವ್ಯಾಪಾರ ಮಾಡುವುದರಲ್ಲಿ, ಉದ್ಯಮ ಮಾಡುವುದರಲ್ಲಿ ಇದ್ದಾರೆ, ವ್ಯವಸ್ಥೆ ಇಲ್ಲಾ ಈ ಬುದ್ಧಿವಂತರ ಪರವಾಗಯೇ ಇದೆ, ದಡ್ಡರ ಪರವಾಗಿಲ್ಲ.

ಅಧ್ಯಕ್ಷರು: ಏನಾಗಿದೆ ಎಂದರೆ, ಅಧಿಕಾರಿಗಳಿದ್ದಾರಲ್ಲಾ, ನೌಕರರು, ಅವರೆಲ್ಲಾ ನಿಮ್ಮ ಮಕ್ಕಳೇ ಬಹಳ ಜನ. ಅವರೇನೂ ಕೈಗಾರಿಕೋದ್ಯಮಿಗಳ ಮಕ್ಕಳು ಅಲ್ಲ ಸ್ವಾಮಿ.

ಶ್ರೀ ಡಿ.ಆರ್.ಪಾಟೀಲ್: ದುರ್ದೈವ ಏನಿಸುವುದೇ ಅದು ಸರ್, ಅವರು ಬೇಡ, ನಮ್ಮ ಮಾನ್ಯ ಯಡಿಯೂರಪ್ಪನವರು ಯಾರು ನಮ್ಮ ಕಾರಜೋಳರವರು ಯಾರು, ಉದಾಸಿಯವರೂ ಕೂಡ ಯಾರು, ಬಿ.ಆರ್.ಪಾಟೀಲರು ಯಾರು, ಈ ಅಧಿಕಾರದ ಚುಕ್ಕಾಣಿಯನ್ನು ಹಿಡಿದಿರುತ್ತಾರಲ್ಲಾ, ಎಲ್ಲಾ ಮುಖ್ಯ ಮಂತ್ರಿಗಳೂ ನಮ್ಮವರೇ ಎಲ್ಲಾ ಪ್ರಧಾನಮಂತ್ರಿಗಳು ನಮ್ಮವರೇ ಆದರೆ ಅವರಿಗೆ ಕಿವಿ ತಿನ್ನುವವರು ಇರುತ್ತಾರಲ್ಲಾ, ಅವರು ನಗರಪ್ರದೇಶದಲ್ಲಿರುವವರು, ಅವರು ಹಳ್ಳಿಯಲ್ಲಿರುವುದಿಲ್ಲ; ನಮ್ಮ ಅಣ್ಣ ತಮ್ಮಂದಿರಾದರೂ ಕೂಡ ತಮ್ಮ ಪತ್ನಿ ಮಕ್ಕಳನ್ನು ಕರೆದುಕೊಂಡು ಪೇಟೆಯಲ್ಲಿರುತ್ತಾರೆ, ಪೇಟೆ ಜನಕ್ಕೆ ಏನೇನು ಅನುಕೂಲಬೇಕೋ ಅದನ್ನು ಮಾಡುತ್ತಾರೆ. ತಮ್ಮ ಅಣ್ಣತಮ್ಮಂದಿರಿಗೆ, ಮದುವೆಗೋ ಮಸಣಕ್ಕೆ ಮಣ್ಣಿಗೆ ಹೋದಾಗ, ಹೋಗಿರುತ್ತಾರಲ್ಲಾ ಆವಾಗ ಸ್ವಲ್ಪ ತಾಪತ್ರಯ ಇದೆ ಎಂದು ಹೇಳಿ, ಮತ್ತೆ ಇಲ್ಲಿ ವ್ಯವಸ್ಥೆಯಲ್ಲಿ ಏನು ಮಾಡಬೇಕೋ ಅದನ್ನು ಮಾಡುತ್ತಾರೆ, ಇದು ಬದಲಾಗಬೇಕಾದರೆ, ಯಡಿಯೂರಪ್ಪನವರೇ, ದಯವಿಟ್ಟು, ನಾವು ಪಕ್ಷಬೇಧ ಮರೆತು ಈ ವ್ಯವಸ್ಥೆಯನ್ನು ಬದಲು ಮಾಡುವುದಕ್ಕೆ ಪ್ರತಿಜ್ಞಾಬದ್ಧರಾಗಬೇಕು. ಏನೋ ಸ್ವಲ್ಪ ಪುಣ್ಯ ನೀವು ಬಿಜೆಪಿಯವರಿಗೆ ಸ್ವಲ್ಪ ಹಳ್ಳಿಗಾಡಿನ ದಾರಿಯನ್ನು ತೋರಿಸಿದಿರಿ. ಇಲ್ಲವೆಂದರೆ, ಇಲ್ಲವೆಂದರೆ ನಿಮ್ಮವರಂತೂ ಹಳ್ಳಿ ಕಡೆ ದರ್ಶನ ಮಾಡುತ್ತಿರಲಿಲ್ಲ, ಬರೀ ನಗರಪ್ರದೇಶಕ್ಕೆ ಸೀಮಿತವಾಗಿತ್ತು. ನೀವು ಬಂದ ಮೇಲೆ ಸ್ವಲ್ಪ ಅವರಿಗೆ ಹಳ್ಳಿದಾರಿ ಕಂಡಿದೆ, ಆದರೆ ಕೆಲಸ ಮಾತ್ರ ನಿಮ್ಮದಾಗಲಿ, ನಮ್ಮದಾಗಲಿ ಯಾರದೇ ಆಗಲಿ, ನಾವೆಲ್ಲರೂ ಕೂಡಿ ಒಂದು ನಿರ್ಣಯಕ್ಕೆ ಬರಬೇಕಲ್ಲಾ ಒಟ್ಟಾರೆ ಈ ವ್ಯವಸ್ಥೆಯಲ್ಲಿ ಏನಿದೆ ಎಂದರೆ ಶ್ರೀಮಂತರಿಗೆ ಅನುಕೂಲ ಬಡವರಿಗೆ ತೊಂದರೆ. ರೈತರಲ್ಲೂ ಕೂಡ ಶ್ರೀಮಂತ ರೈತರಿಗೆ ಅನುಕೂಲ, ಬಡ ರೈತರಿಗೆ ತೊಂದರೆ, ಶ್ರೀನಿವಾಸಗೌಡರು ನೀರಾವರಿ ಬಗ್ಗೆ ಹೇಳಿದರು, ಶೇಕಡ 27ರಷ್ಟು ನೀರಾವರಿಯಾಗುತ್ತದೆ. ನೀರಾವರಿ ಸಲುವಾಗಿ, ಕಳೆದ ಮೂರು ವರ್ಷಗಳಲ್ಲಿ 12,000 ಕೋಟಿ ರೂಪಾಯಿಗಳನ್ನು ನಾವು ಖರ್ಚು ಮಾಡುತ್ತೇವೆ.

ಅಧ್ಯಕ್ಷರು: 27 ಪರ್ಸೆಂಟ್ ನಿಮ್ಮ ಕಾಗದದಲ್ಲಿರತಕ್ಕಂಥದ್ದು, ಏತಕ್ಕೆ ನಾನು ಈ ಮಾತನ್ನು ಹೇಳುತ್ತಿದ್ದೇನೆಂದರೆ, ನಾನು ಶಾಸಕನಾಗಿ ಲಿಫ್ಟ್ ಇರಿಗೇಷನ್‌ನಲ್ಲಿ ಇಷ್ಟು ಎಕರೆ ಇದೆ, ಅಚ್ಚುಕಟ್ಟು ಕೆರೆ ಇಷ್ಟಿದೆ ಎಂದು ರಿವ್ಯೂ ಮಾಡಿದ್ದೇನೆ, ಅದರ ಅರ್ಥ ಇಲ್ಲ, ತಪ್ಪು ಲೆಕ್ಕದ ಮೇಲೆ ಶೇ. 27, ನಿಜವಾಗಿ 17 ಪರ್ಸೆಂಟ್ ಇರಬಹುದು.

ಶ್ರೀ ಡಿ.ಆರ್.ಪಾಟೀಲ್: 12,000 ಕೋಟಿ ರೂಪಾಯಿಗಳನ್ನು 3 ವರ್ಷದೊಳಗೆ ನೀರಾವರಿ ಸಲುವಾಗಿ ಖರ್ಚು ಮಾಡಿದ್ದೇವೆ, ನಮ್ಮ ವಾಟರ್ ಅಂಡ್ ಸಾಯಿಲ್ ಕನ್ಸರ್ವೇಷನ್‌ಗೆ ವರ್ಷಕ್ಕೆ 300 ಕೋಟಿ ಕೊಡಲಾಗಿದೆ, 72 ಪರ್ಸೆಂಟ್ ಏರಿಯಾವನ್ನೇನು ನಾವು ಕನ್ವರ್ಟ್ ಮಾಡಬೇಕಲ್ಲಾ, ಅದಕ್ಕೆ ಒಟ್ಟು ಬೇಕಾದುದು ಎಂಟು ಸಾವಿರ ಕೋಟಿ ರೂ. ಮಾನ್ಯ ಯಡಿಯೂರಪ್ಪನವರೇ ದಯವಿಟ್ಟು ಈ ನೀರಾವರಿ ಕೆಲಸವನ್ನೆಲ್ಲಾ ಒಂದು ವರ್ಷ ಬದಿಗಿಟ್ಟು ಅದನೆಲ್ಲಾ ಸಾಯಿಲ್ ಅಂಡ್ ವಾಟರ್ ಕನ್ಸರ್ವೇಷನ್‌ಗೆ ಪೂರ್ತಿ ಕೊಟ್ಟರೆಂದರೆ ಸುಮಾರು ಶೇಕಡ 75 ರಷ್ಟು ಜನ ಬದುಕಿರುವಂತಹ ಮಳೆ ಆಶ್ರಯಿತ ಕೃಷಿಗೆ ಅನುಕೂಲವಾಗುತ್ತದೆ, ದಯವಿಟ್ಟು ಅದನ್ನು ವಿಚಾರ ಮಾಡಿ.

ಶ್ರೀ ಎಸ್.ಎಸ್.ಪಾಟೀಲ್: ಮಾನ್ಯ ಅಧ್ಯಕ್ಷರೆ, ಮಾನ್ಯ ಯಡಿಯೂರಪ್ಪನವರು, ರೈತರ ಪರ ರೈತರ ಪರವೆಂದು ಮಾತನಾಡುತ್ತಾರೆ, ಆಯವ್ಯಯದ್ದೆ ಹೇಳುತ್ತೇನೆ ಉಳಿದದ್ದು ಅವರು ಮಾತನಾಡುತ್ತಾರೆ ಕಳೆದ ಸಾರಿ ಬಜೆಟ್‌ನಲ್ಲಿ ಎಷ್ಟಿತ್ತು, ಕೃಷಿಗೆ 6.33 ಇತ್ತು ನೀವು ಎಷ್ಟಕ್ಕೆ ಇಳಿಸಿದಿರಿ 5.79, ಕಡಿಮೆ ಮಾಡಿದಿರಿ ಸುಮ್ಮನೆ ಲೆಕ್ಕಾ ತೋರಿಸುತ್ತೀರಿ. ಸುಮ್ಮನೆ ಮಾತನಾಡುತ್ತಿದ್ದಾರೆ, ಬಜೆಟ್ ಪುಸ್ತಕ ಎಲ್ಲಿದೆ?

ಶ್ರೀ ಕೆ. ಶ್ರೀನಿವಾಸಗೌಡ: ಮಾನ್ಯ ಅಧ್ಯಕ್ಷರೆ, ಆಗಲೇ ಮಾನ್ಯ ಡಿ.ಆರ್.ಪಾಟೀಲರು ಹೇಳಿದರು, ಸೀಸನ್‌ವೈಸ್ ಪ್ರಮುಖ ಕ್ರಾಪ್ ಹೋದ ವರ್ಷ ನಾನು ಮಂತ್ರಿಯಾಗಿದ್ದೆ, ನಮ್ಮ ಜಿಲ್ಲೆಗೆ ಜಿಲ್ಲಾಧಿಕಾರಿಗಳನ್ನು ಕರೆಯಿಸಿ, ಜಿಲ್ಲಾಧಿಕಾರಿಗಳಿಗೆ ಒಂದು ಸೂಚನೆ ಕೊಟ್ಟೆ, ಎಲ್ಲಾ ರೈತರಿಗೆ ಒಪ್ಪಿಸಿ ತೂಬುಗಳನ್ನು ನಿಲ್ಲಿಸಿಬಿಡೋಣ, ನಮ್ಮಲ್ಲಿ 1100 ಅಡಿ ಬೋರ್‌ವೆಲ್ ಅನ್ನು ನಾನೇ ಹಾಕಿಸಿದ್ದೇನೆ, ಸ್ವಲ್ಪ ವಾಟರ್ ಟೇಬಲ್ ಬರುತ್ತದೆ, ಅದಕ್ಕೆ ಹಿಂದಿನ ವರ್ಷ ಕುಡಿಯುವ ನೀರಿಗಾಗಿ 52 ಕೋಟಿ ರೂಪಾಯಿಗಳನ್ನು ನಮ್ಮ ಒಂದೇ ಒಂದು ಜಿಲ್ಲೆಗೆ ಖರ್ಚು ಮಾಡಿದ್ದೆವು. ನೋಡೋಣವೆಂದು ಟ್ರಯಲ್ ಬೇಸಿಸ್‌ನಲ್ಲಿ, ನಾನೇ ಸೂಚನೆ ಕೊಟ್ಟು ನಿಲ್ಲಿಸಿದ್ದೇನೆ, ಕೋಲಾರ ಜಿಲ್ಲೆಯಲ್ಲಿ ಇವತ್ತು 300–350 ಅಡಿಯಲ್ಲಿ ನೀರಿದೆ ಕುಡಿಯುವ ನೀರಿಗೆ ಹಣ ಖರ್ಚಾಗಲಿಲ್ಲ, ಹಿಂದಿನ ವರ್ಷ 52 ಕೋಟಿ ರೂಪಾಯಿಗಳು ಅದಕ್ಕಿಂತ ಹಿಂದಿನ ವರ್ಷ ಕುಡಿಯುವ ನೀರಿಗೆ ಎಷ್ಟು ಖರ್ಚಾಗಿತ್ತು ಎಂಬುದನ್ನು ನೋಡಿದರೆ ಈ ಸಾರಿ 5 ಕೋಟಿ ರೂಪಾಯಿಗಳು ಖರ್ಚಾಗಲಿಲ್ಲ ಪೊಲಿಟಿಕಲ್ ವಿಲ್ ಇರಬೇಕು, ರೈತನ ಮುನ್ನಡೆಗೆ ರೈತನ ಅಭಿವೃದ್ಧಿಗೆ, ರಾಜಕೀಯ ಇಚ್ಛಾಶಕ್ತಿ ಬಂದರೆ ಏನಾಗುತ್ತದೆ ಎಂಬುದಕ್ಕೆ ಉದಾಹರಣೆ ನಮ್ಮ ಕೋಲಾರ ಜಿಲ್ಲೆಗಳ ಕೆರೆಗಳಲ್ಲಿ ನೀರನ್ನು ನಿಲ್ಲಿಸಿದ್ದೇವೆ, ಬನ್ನಿ ಇವತ್ತು ಕೆರೆಗಳಲ್ಲಿ ನೀರಿದೆ. ಸ್ವಲ್ಪ ನಾಲ್ಕೈದು ಹದ ಮಳೆ ಬಂದರೆ ಈ ಸಾರಿಯೂ ನಮ್ಮ ಕೆರೆಗಳಲ್ಲಿ ಕೋಡಿ ಹೋಗುತ್ತದೆ. ಆದರೆ ನಾನು ನಮ್ಮ ರೈತರಲ್ಲಿ ನಾನೊಂದು ಪ್ರಾರ್ಥನೆ ಮಾಡಿಕೊಂಡೆ, ಎಲ್ಲಾಲೆಕ್ಕಾ ಹಾಕಿದೆ.

ಉಳುವುದರಿಂದ ಹಿಡಿದುಕೊಂಡು, ಗೊಬ್ಬರ ಹಾಕುವುದರಿಂದ ಹಿಡಿದುಕೊಂಡು ನಾಟಿ ಮಾಡುವುದರಿಂದ ಹಿಡಿದುಕೊಂಡು, ಎಲ್ಲಾ ಮಾಡಿ ಲೆಕ್ಕಾ ತೋರಿಸಿದೆ. ಕೊಂಡುಕೊಂಡರೆ ಚೀಪ್ ಆಗುತ್ತದೆಂಬುದನ್ನು ನಮ್ಮ ಜಿಲ್ಲೆಯ ರೈತರ ಗಮನಕ್ಕೆ ತಂದೆ. ಎಲ್ಲಾ ನಮ್ಮ ರೈತರೇ ಹೋಗಿ ಸ್ಲೂಯೀಸ್‌ಗೆ ಕಾಂಕ್ರೀಟ್ ಹಾಕಿದರು, ಇವತ್ತು ನಮ್ಮ ಜಿಲ್ಲೆಗೆ ಬಂದರೆ ಕಣ್ಣಿಗೆ ಆನಂದವಾಗುತ್ತದೆ ಕೆರೆಗಳಲ್ಲಿ ನೀರಿದೆ. ಇದು, ರಾಜಕೀಯ ಇಚ್ಛಾಶಕ್ತಿ ಬೇಕೆಂಬುದಕ್ಕೆ ಉದಾಹರಣೆ, ಅದರಲ್ಲೂ ಬಯಲುಸೀಮೆ ಪ್ರದೇಶಗಳಲ್ಲಿ ಎಲ್ಲಿ ಮಳೆ ಜಾಸ್ತಿಯಾಗುತ್ತದೆ. ನಾವು ಕೃಷಿ ಇಲಾಖೆಯಿಂದ ಚೆಕ್‌ಡ್ಯಾಂಗಳನ್ನು ಕಟ್ಟುತ್ತೇವೆ, 50 ಲಕ್ಷ ಹೊಂಡಗಳನ್ನು ತೆಗೆಸುತ್ತೇವೆಂದು ಮಾನ್ಯ ಯಡಿಯೂರಪ್ಪನವರು ಆಯವ್ಯಯದಲ್ಲಿ ಹೇಳಿದ್ದಾರೆ. ಇವತ್ತು ಆ ಹೊಂಡಗಳನ್ನು ತೆಗೆಸುವುದಕ್ಕಿಂತ ನಿಮ್ಮ ಕೈಯಲ್ಲಿರುವ ಅಧಿಕಾರವನ್ನು ಸರಿಯಾಗಿ ಉಪಯೋಗಿಸಿದರೆ, ನೀರನ್ನು ಇಂಗಿಸುವಂತಹ ಪದ್ಧತಿಗಳಿವೆ. ಇವತ್ತೆ ನೀವು ವೇಸ್ಟ್ ಮಾಡುವುದಕ್ಕೆ ಕಡಿವಾಣ ಹಾಕಬಹುದು. ಇದನ್ನು ನಾನು ಬಹಳ ಸಾರಿ ಹೇಳಿದ್ದೇನೆ, ನೀರನ್ನು ಸಮರ್ಪಕವಾಗಿ ಬಳಸದೇ ಇದ್ದರೆ. ಇವತ್ತು ನಿಮ್ಮ ಜಿಲ್ಲೆಯಲ್ಲಿ. ನೀರೆಲ್ಲಾ ಗದ್ದೆಗಳ ಮೂಲಕ ತಮಿಳುನಾಡಿಗೆ ಹೋಗುತ್ತಿರಬೇಕು. ಅಲ್ಲಿ ಯಾರೂ ನೀರುಗಂಟಿ ಇರುವುದಿಲ್ಲ. ನೋಡುವವರಿಲ್ಲ, ತೂಬನ್ನು ಎತ್ತಿದರೆ ನೀರು ಅದರಷ್ಟಕ್ಕೆ ಅದೇ ಹೋಗುತ್ತಿರುತ್ತದೆ. ಭೂಮಿಯೂ ಕೂಡ ಸವಕಲಾಗುತ್ತಿರುತ್ತದೆ, ಹಾಕಿದ ಬಲುಮಿ ಕೂಡ ಕಾವೇರಿ ನದಿಗೆ ಹೋಗಿ ಸೇರುತ್ತದೆ. ಇದು ಇರುವ ವ್ಯವಸ್ಥೆ. ಅದಕ್ಕೆ ಇಚ್ಛಾಶಕ್ತಿ ಇದ್ದಿದ್ದರಿಂದ ಹೋದ ವರ್ಷ ಕೋಲಾರ ಜಿಲ್ಲೆಯಲ್ಲಿ ಕುಡಿಯುವ ನೀರಿಗೆ ಎಲ್ಲೂ ಕೂಡ ತೊಂದರೆಯಾಗಿಲ್ಲ, ಇದನ್ನು ನಾವು ಮಾಡಬೇಕಾದುದು ಆಹಾರ ಮಂತ್ರಿಗಳಾದ ಕಾರಜೋಳರವರು ಇಲ್ಲೇ ಇದ್ದೀರಿ ಯೋಚನೆ ಮಾಡಿ, ಇದನ್ನು ಗಮನಿಸಿ. ಸರ್ಕಾರದ ಹಣವನ್ನು ನಾವು ಉಳಿಸಬಹುದು. ಇವತ್ತು ನಮ್ಮ ರಾಜ್ಯದಲ್ಲಿ ಸೀಸನ್‌ವೈಸ್ ಕ್ರಾಪ್ಸ್, ಫ್ಯಾಡಿ, ರಾಗಿ, ಮೈಜ್, ಬಾಂಜ್ರ, ರೆಡ್‌ಗ್ರಾಂ, ಗ್ರಾಂಡ್‌ನೆಟ್, ಸನ್‌ಫ್ಲವರ್, ಕಾಟನ್ ಟೊಬ್ಯಾಕೋ ಬೆಳೆಯುತ್ತೇವೆ. ನಾನು ಹೋದ ಸಾರಿ ಹೇಳಿದೆ, ಹೆಗ್ಗಡದೇವನಕೋಟೆಯಿಂದ ಹಾವೇರಿಯವರೆವಿಗೂ ಒಂದು ರೀಜ್ ಇದೆ. ಸುಮಾರು 260 ಕಿಲೋಮೀಟರ್ ಇರಬಹುದು. 40 ಕಿಲೋಮೀಟರ್ ಅಡ್ಡಗಲ, ಬೆಳೆಯುವಂತಹ ಹೊಗೆಸೊಪ್ಪಿಗೆ ನಿಕೋಟಿನ್ ಕಡಿಮೆ ಇದೆ. ಜಿರೋ ಪಾಯಿಂಟ್, ಜಿರೋ ಪಾಯಿಂಟ್ ಒಂದು ಪರ್ಸೆಂಟ್ ಇರುವುದರಿಂದ ಪ್ರಪಂಚದಲ್ಲೇ ಅತೀ ಹೆಚ್ಚು ಬೇಡಿಕೆ ಇರುವಂತಹ ಟೊಬ್ಯಾಕೋವನ್ನು ನಮ್ಮ ರಾಜ್ಯದಲ್ಲಿ ಬೆಳೆಯುತ್ತಿದ್ದೇವೆ. ಆದರೆ ಅದಕ್ಕೆ ಒಂದು ಕಾಟ, ಆಂಧ್ರಪ್ರದೇಶದವರು, ಬೋರ್ಡ್‌ನಲ್ಲಿ ಎಲ್ಲಾ ಅವರು ಇಟ್ಟುಕೊಂಡು, ಕೇವಲ ನಮಗೆ ಇಬ್ಬರು ಸದಸ್ಯರನ್ನು ಕೊಟ್ಟಿದ್ದಾರೆ, ಇವರು ಅಲ್ಲಿ ಹೋಗಿ ಏನೂ ಮಾಡುವುದಕ್ಕಾಗುವುದಿಲ್ಲ, ಅವರ ಬೇಡಿಕೆ ಇಲ್ಲದೆ ಇರುವ ಟೊಬ್ಯಾಕೋ ಹೋಗುತ್ತದೆ, ಬೇಡಿಕೆ ಇರುವ ನಮ್ಮ ಟೊಬ್ಯಾಕೋಗೆ ಲೈಸನ್ಸ್ ಇಲ್ಲ. ಮಾನ್ಯ ಎ.ಟಿ. ರಾಮಸ್ವಾಮಿಯವರ ಭಾಗದಲ್ಲಿ ಬೆಳೆಯುವಂತಹ ಹೊಗೆಸೊಪ್ಪಿಗೆ ಇಡೀ ಪ್ರಪಂಚದಲ್ಲೇ ಸಿಕ್ಕಾಪಟ್ಟೆ ಬೇಡಿಕೆ ಇದೆ. ಇವು ನಾವು ನೀಡಬೇಕಾದ ಆದ್ಯತೆಗಳು. ಇವತ್ತೇನು ಅಗ್ರಿಕಲ್ಚರ್ ಸೆಕ್ಟಾರ್‌ನಲ್ಲಿ ಗ್ರೋತ್‌ರೇಟ್ ಏನಿದೆ, ಆಲ್ ಇಂಡಿಯಾ ಅವರೇಜ್ ಗ್ರೋತ್‌ರೇಟ್ 1980–96 ರವರೆಗೆ ಕೇವಲ 3.2,

9ನೇ ಪಂಚವಾರ್ಷಿಕ ಅವಧಿಯಲ್ಲಿ ಅದು 2 ಪರ್ಸೆಂಟ್‌ಗೆ ಇಳಿಯಿತು, ಕರ್ನಾಟಕ ಸ್ಟೇಟ್‌ನಲ್ಲಿ ಅದು ಎಷ್ಟಿದೆ ಎಂದರೆ 2005 ಜಿಡಿಪಿ, ಗ್ರಾಸ್ ಡೊಮೆಸ್ಟಿಕ್ ಪ್ರಾಡಕ್ಟ್ ಜಿಡಿಪಿನಲ್ಲೂ ಕೂಡ ನಾವು ಈ ದಿಕ್ಕಿನಲ್ಲಿದ್ದೇವೆ, ಅನೇಕ ಮಂತ್ರಿಗಳಾದ ಹಿಂದಿನವರು, ಕೆಲವು ಕಮಿಟಿಗಳನ್ನು ಮಾಡಿದರು. ಇವತ್ತು ಕಮಿಟಿಗಳು ಮಾಡಿದರು. ಸತೀಶ್‌ಚಂದ್ರ ಅಧ್ಯಕ್ಷತೆಯಲ್ಲಿ ಒಂದು ಕಮಿಟಿ ಮಾಡಿದರು ದ್ವಾರಕನಾಥ್ ಕಮಿಟಿ ಒಂದು ಮಾಡಿದರು, Development of Agriculture in the State. ಜೆ.ಕೆ. ಆರೋರ ಕಮಿಟಿ ಮಾಡಿದರು, ಎಸ್.ಎ. ಪಾಟೀಲ್ ಅಧ್ಯಕ್ಷತೆಯಲ್ಲಿ ಒಂದು ಕಮಿಟಿ ಮಾಡಿದ್ದಾರೆ. ಕಮಿಟಿಗಳು ಕೊಟ್ಟಂತಹ ರಿಪೋರ್ಟ್‌ಗಳು ಕೋಲ್ಡ್ ಸ್ಟೋರೇಜ್‌ನಲ್ಲಿ ಇವೆ. ನಾನು ಅರೋರಾ ಕೊಟ್ಟಂತಹ ರಿಪೋರ್ಟನ್ನು ಇಂಪ್ಲಿಮೆಂಟ್ ಮಾಡಬೇಕೆಂದು ಮಾಡುವಷ್ಟರೊಳಗಾಗಿ ಅನೇಕ ಕಾರಣಗಳನ್ನು ಅಧಿಕಾರಿಗಳು ನನ್ನ ಮುಂದೆ ಇಟ್ಟರು. ಕೃಷಿ ಯೂನಿವರ್ಸಿಟಿಗಳಲ್ಲಿ ಲ್ಯಾಬ್‌ಟು ಲ್ಯಾಂಡ್ ಎನ್ನುವಂಥದ್ದನ್ನು ತಂದಿದ್ದಾರೆ. ಬಹಳ ಒಳ್ಳೆಯ ವಿಷಯಗಳನ್ನು ತಂದಂಥದ್ದನ್ನು ಇವತ್ತು ಅವರು ಅಳವಡಿಸಿಕೊಂಡಿದ್ದರು. ಅದನ್ನು ನಾವು ಇವತ್ತು ಇಂಪ್ಲಿಮೆಂಟ್ ಮಾಡಿದರೆ ನಮ್ಮ ಅಗ್ರಿಕಲ್ಚರ್ ಕೂಡ ಡೆವಲಪ್ ಆಗುತ್ತದೆ ಎನ್ನುವುದನ್ನು ನಾನು ಈ ಸಮಯದಲ್ಲಿ ಹೇಳುವುದಕ್ಕೆ ಇಚ್ಛೆ ಪಡುತ್ತೇನೆ. Change of Agriculture development activities ನಲ್ಲಿ ನಮಗೆ ಬೇಕಾಗಿರುವುದು ಇನ್‌ಪುಟ್ಸ್, ಅಗ್ರಿಕಲ್ಚರ್, ಸೀಡ್, ಗೊಬ್ಬರ, ಇಂಪ್ಲಿಮೆಂಟ್ಸ್, ಇಷ್ಟು ದಿನ ಸ್ವಾತಂತ್ರ್ಯ ಬಂದಾಗಿನಿಂದ ಇವತ್ತು ಇದರ ಮೇಲೆ ಕಾನ್‌ಸೆಂಟ್ರೇಟ್ ಮಾಡಿದ್ದೇವೆ. ಇತ್ತೀಚೆಗೆ ನಾವು ಔಟ್‌ಪುಟ್ ಮೇಲೆ ಕೂಡ ಹೋದ ವರ್ಷ 200 ಕೋಟಿ ರೂ, ಮೈಜ್, ತೊಗರಿ ಇಂಥವನ್ನು ನಾವು ಕೊಟ್ಟಿದ್ದೇವೆ. ಇದನ್ನು ಆವರ್ತ ನಿಧಿ ಮಾಡಿ ನಾವು ಪೀಕ್ ಸೀಸನ್‌ನಲ್ಲಿ ಕಡಿಮೆ ಮಾಡಿ ಹೆಚ್ಚಿಗೆ ಬೆಲೆ ಬಂದಾಗ ಮಾರುತ್ತಿದ್ದೇವೆ. ಇವತ್ತು ರೈತರಿಗೆ ಅಲ್ಲಿಯೂ ಕೂಡ ಮೋಸವಾಗುತ್ತಿದೆ. ಅದನ್ನೂ ಕೂಡ ನಾವು ಕಂಟ್ರೋಲ್ ಮಾಡಬೇಕು. ನಮ್ಮ ದುರ್ದೈವ ಎಂದರೆ, ಫಕ್ರುದ್ದೀನ್ ಆಲಿ ಅಹಮದ್ ಅವರು ಮತ್ತು ಜಗಜೀವನರಾಮ್‌ರವರು ಅಗ್ರಿಕಲ್ಚರ್ ಮಿನಿಸ್ಟರ್‌ಗಳಾಗಿದ್ದಾಗ ಗ್ರೀನ್ ರೆವಲ್ಯೂಷನ್ ಬಂದಿತು. ಅದುವರೆಗೂ ನಮ್ಮ ದೇಶದಲ್ಲಿ ಆಹಾರದ ಕೊರತೆ ಇತ್ತು. ಗ್ರೀನ್ ರೆವಲ್ಯೂಷನ್ ಆದ ಮೇಲೆ ಆಹಾರದ ಕೊರತೆ ನೀಗಿತು. ಈ ಸಾರಿ ಗೋಧಿಯನ್ನು ಶುಗರನ್ನು ಇಂಪೋರ್ಟ್ ಮಾಡಿಕೊಳ್ಳುವ ಪರಿಸ್ಥಿತಿಗೆ ನಾವು ಬಂದಿದ್ದೇವೆ ಎಂದರೆ, ಯಾವ ರೀತಿಯಲ್ಲಿ ನಮ್ಮ ಕೃಷಿಕನ ಹಿನ್ನೆಲೆ ಹೇಗೆ ನಡೆಯುತ್ತಿದೆ ಎನ್ನುವುದನ್ನು ನಾವು ಚಿಂತನೆ ಮಾಡಬೇಕಾಗಿದೆ.

ಶ್ರೀ ಎಂ.ಪಿ.ಪ್ರಕಾಶ್: ಮಾನ್ಯ ಅಧ್ಯಕ್ಷರೆ ಈಗಾಗಲೇ ಹಿಂದೂ ಪತ್ರಿಕೆಯಲ್ಲಿ ತಾವೂ ಸಹ ನೋಡಿರಬಹುದು. ಸಕ್ಕರೆಯ ದಾಸ್ತಾನು ಬೇಕಾದಷ್ಟು ಇದೆ. ಆದರೂ ಕೂಡ ಆಮದು ಮಾಡಿಕೊಳ್ಳತಕ್ಕಂತಹ ಆಜ್ಞೆ ಮಾಡಿರತಕ್ಕಂಥದ್ದು ಸರಿಯಾದುದು ಅಲ್ಲ ಎನ್ನುವಂಥ ಒಂದು ಲೇಖನ ಕೂಡ ಬಂದಿದೆ. ಉಳಿದ ವಿಚಾರ ಗೊತ್ತಿಲ್ಲ, ಆದರೆ ಸಕ್ಕರೆ ವಿಚಾರದಲ್ಲಿ ಮಾತ್ರ ನಾನು ಓದಿದ್ದೇನೆ. ಬೇಕಾದಷ್ಟು ದಾಸ್ತಾನು ಇದ್ದಂಥದ್ದು 18 ರೂಪಾಯಿ ಕಿಲೋ ಇಟ್ಟುಕೊಂಡಿರುವ ಕಾರಣದಿಂದ ಅಥವಾ ಅನ್ಯ ಕಾರಣಗಳಿಗಾಗಿಯೋ ಆಮದು ಮಾಡಿಕೊಳ್ಳತಕ್ಕಂಥದ್ದು ಇದು tariff reaction of the

Government of India ಹಣದುಬ್ಬರವಾಗಿರತಕ್ಕಂಥದ್ದು ಒಂದೇ ಒಂದು ಕಾರಣಕ್ಕಾಗಿ ಅಲ್ಲ. Inflationary ರೇಟ್ ಹೆಚ್ಚಾಗಿರತಕ್ಕಂಥದ್ದು. ಇದೆ. ಇದರ ಕೆಳಗೆ ಅದೂ ಕೂಡ ಶ್ರೀಮತಿ ಶೀಲಾ ದೀಕ್ಷಿತ್ ರವರು ಬಹಳ ಖಾರವಾಗಿ ಪ್ರತಿಕ್ರಿಯೆ ಮಾಡಿದರು. ಈರುಳ್ಳಿ ಬೆಲೆ ಹೆಚ್ಚಾಯಿತು ಎನ್ನುವ ಕಾರಣಕ್ಕಾಗಿ, ಶ್ರೀಮತಿ ಸುಷ್ಮಾ ಸ್ವರಾಜ್‌ರವರು ಸೋತು ಹೋಗಿದ್ದು ಅದೆಲ್ಲಾ ಗೊತ್ತಿರುವಂಥ ವಿಚಾರ. ಇದರ ಹಿನ್ನೆಲೆಯಲ್ಲಿ ತಾವು ಗೋಧಿ ಸಕ್ಕರೆ, ಮತ್ತು ಎಣ್ಣೆ ಇವುಗಳ ಬೆಲೆ ಬಹಳ ದೊಡ್ಡ ಪ್ರಮಾಣದಲ್ಲಿ ಏರಿರತಕ್ಕಂತಹ ಕಾರಣಕ್ಕಾಗಿ, ಇದರ ಬಗ್ಗೆ ತಕ್ಷಣ ನಿಯಂತ್ರಣ ಕ್ರಮಗಳನ್ನು ಕೈಗೊಳ್ಳಬೇಕೆಂದು ದೆಹಲಿ ಮುಖ್ಯ ಮಂತ್ರಿಗಳು ಸರ್ಕಾರ ಗಮನವನ್ನು ಸೆಳೆದಾಗ, ಮಾನ್ಯ ಪ್ರಧಾನ ಮಂತ್ರಿಗಳೇ, ಚಿದಂಬರಂರವರಿಗೆ ಈ ವಿಚಾರವನ್ನು ತಿಳಿಸಿದರು. ಇಲ್ಲಿ ಕೂಡ ಅವರು ಮಾತನಾಡಿದ್ದಾರೆ, ಸಕ್ಕರೆ ಮಾತ್ರ ನಮ್ಮಲ್ಲಿ ಬೇಕಾದಷ್ಟು ಸ್ಟಾಕ್ ಇದೆ.

ಶ್ರೀ ಎಸ್.ಎಸ್.ಪಾಟೀಲ್: ಮಾನ್ಯ ಅಧ್ಯಕ್ಷರೆ, ರೈತರು ಈರುಳ್ಳಿಯನ್ನು ಗಟಾರ್‌ಗೆ ಚೆಲ್ಲಿ ಹೋದರು. ಆಗ ಯಾವ ಪತ್ರಿಕೆಯವರೂ ಬರೆಯಲಿಲ್ಲ, ಯಾರೂ ಮಾತನಾಡಲಿಲ್ಲ. ಅಲ್ಲಿ 25 ರೂಪಾಯಿ ಕೇಜಿ ಈರುಳ್ಳಿ ಆದಾಗ ಪತ್ರಿಕೆಗಳಲ್ಲಿ ಬರೆದು ಬರೆದು ಆ ಸರ್ಕಾರವೇ ಹೋಯಿತು. ರೈತರು ಸತ್ತರೆ ಯಾರೂ ಬರೆಯುವುದಿಲ್ಲ. ಪರಿಸ್ಥಿತಿ ಹೀಗಿದೆ.

ಶ್ರೀ ಕೆ. ಶ್ರೀನಿವಾಸಗೌಡ: ಮಾನ್ಯ ಅಧ್ಯಕ್ಷರೆ, ಹೋದ ಬಾರಿ ಅದಾಗಿತ್ತು, ಅದನ್ನು ಪತ್ರಿಕೆಗಳವರು ಬರೆದಿದ್ದರೂ, ನಾನೂ ಕೂಡ ಹುಬ್ಬಳ್ಳಿ ಎಪಿಎಂಸಿ ಯಾರ್ಡ್‌ಗೆ ಹೋಗಿ ಬಂದೆ, ಪತ್ರಿಕೆಗಳವರು ಬಹಳ ಖಾರವಾಗಿಯೇ ಬರೆದಿದ್ದರು. ಅದಕ್ಕೇ ನಾನೇ ಸ್ಪಂದಿಸಿದ್ದೇನೆ. ಈಡಿಪಿ ಕೃಷಿ ಮೂಲ ಒಂದರಿಂದಲೇ..

ಶ್ರೀ ಸಿ.ಎಂ.ಉದಾಸಿ: ಮಾನ್ಯ ಅಧ್ಯಕ್ಷರೆ, ನಾನು ಹೇಳುವುದು ಇಷ್ಟೆ. ಮಾನ್ಯ ಸದಸ್ಯರು ಕೃಷಿ ಸಚಿವರಾಗಿ ಕೆಲಸ ಮಾಡಿದವರು. ಸಮಸ್ಯೆ ಏನೆಂದು ಅವರಿಗೆ ಸಂಪೂರ್ಣ ಅರಿವು ಬಂದಿರಬಹುದು ಎಂದು ನಾನು ಭಾವಿಸಿಕೊಂಡಿದ್ದೇನೆ. ಪತ್ರಿಕೆಯಲ್ಲಿ ಬರುವುದಾಗಲಿ, ನೀತಿ ನಿರೂಪಣೆ ಮಾಡುವುದಾಗಲಿ, ಬೆಲೆ ಏರಿಕೆ ಆದಾಗ ಏನು ಪ್ರತಿಕ್ರಿಯೆ ಬರುತ್ತದೆ, ಬಳಕೆದಾರರನ್ನು ಗಮನದಲ್ಲಿಟ್ಟುಕೊಂಡು ಒಂದು ಪ್ರತಿಕ್ರಿಯೆ ವ್ಯಕ್ತಪಡಿಸುತ್ತಾರೆ ಹೊರತು, ಉತ್ಪಾದಕರನ್ನು ಗಮನದಲ್ಲಿಟ್ಟುಕೊಳ್ಳುವುದೇ ಇಲ್ಲ. ಒಂದು ಕನಿಷ್ಟ ಬೆಲೆ ಮತ್ತು ಒಂದು ಗರಿಷ್ಠ ಬೆಲೆ ಇರಬೇಕು. ಈ ಮಧ್ಯದಲ್ಲಿಯೇ ಬೆಲೆ ಇರಬೇಕು ಅಷ್ಟೇ ಹೊರತು, ಇದಕ್ಕಿಂತ ಹೆಚ್ಚಿಗೆ ಇರಬಾರದು. ಬೆಲೆ ಹೆಚ್ಚಿಗೆ ಆದಾಗ ಸರ್ಕಾರ ಇಂಟರ್ವೀನ್ ಆಗಬೇಕು. ಕಡಿಮೆ ಆದಾಗ ಇರ್ವೀನ್ ಆಗಬೇಕು ಎನ್ನುವುದು ಇರಬೇಕೇ ಹೊರತು, ಅದಕ್ಕೆ ಪೂರಕವಾಗಿ ಚಿಂತನೆ ಮಾಡಬೇಕಾದ ವ್ಯವಸ್ಥೆ ಬಗ್ಗೆ ಆಲೋಚನೆ ಮಾಡಬೇಕಾದುದು ಕೇಂದ್ರ ಸರ್ಕಾರದ ಆರ್ಥಿಕ ನೀತಿ ಮೇಲೆ ಅವಲಂಭಿಸಿಕೊಂಡಿದೆ. ಇವತ್ತು ಏನಾದರೂ ಒಂದು ವಸ್ತುವಿನ ಬೆಲೆ ಗೊತ್ತುಪಡಿಸಬೇಕಾದ ಸಂದರ್ಭ ಬಂದಾಗ, ಉತ್ಪಾದನಾ, ಬೇಡಿಕೆ ಮತ್ತು ಆಯಾತ, ನಿರ್ಯಾತ ಮತ್ತು ಸಪ್ಲೈ ಮಾಡಬೇಕಾದ ವ್ಯವಸ್ಥೆ ಇವೆಲ್ಲದರ ಮೇಲೆ inter-related – ಇರುವುದರಿಂದ, ಈ ವ್ಯವಸ್ಥೆಯನ್ನು ಕಂಟ್ರೋಲ್ ಮಾಡುವಂತಹ ಶಕ್ತಿ

ಇರಬೇಕಾದುದು ಕೇಂದ್ರದಲ್ಲಿ ನೀತಿ ನಿರೂಪಣೆ ಮಾಡಬೇಕಾದ ವ್ಯವಸ್ಥೆಯಲ್ಲಿ ಪ್ರಮುಖವಾದ ದೋಷ ಇದೆ ಎನ್ನುವುದನ್ನು ಮಾನ್ಯ ಶ್ರೀನಿವಾಸಗೌಡರು ಅರಿತಿರಬೇಕೆಂದು ನಾನು ಭಾವಿಸಿಕೊಂಡಿದ್ದೇನೆ. ಅದಕ್ಕೆ ಪೂರಕವಾಗಿ ಚಿಂತನೆ ಮಾಡಬೇಕಾದ ವ್ಯವಸ್ಥೆಗೆ ಮಾರ್ಗ ಸೂಚಿಗಳನ್ನು ತಾವು ಹೇಳಿದರೆ ಚೆನ್ನಾಗಿರುತ್ತದೆ ಎಂದು ನನ್ನ ಭಾವನೆ.

ಶ್ರೀ ಕೆ. ಶ್ರೀನಿವಾಸಗೌಡ: ಮಾನ್ಯ ಅಧ್ಯಕ್ಷರೆ, ನಾನು ಒಪ್ಪುತ್ತೇನೆ. ಮಾನ್ಯ ಉದಾಸಿಯವರು ಹೇಳಿದ ಹಾಗೆ ನಾನು ಒಬ್ಬ ಮಾಜಿ ಕೃಷಿ ವಿಶ್ವವಿದ್ಯಾನಿಲಯಗಳ ಉಪಕುಲಪತಿಗಳ ಅಧ್ಯಕ್ಷತೆಯಲ್ಲಿ ಒಂದು ಕಮಿಟಿ ಮಾಡಿದೆ. ಅವರು ರಿಪೋರ್ಟ್ ಕೊಟ್ಟರು. ಆ ರಿಪೋರ್ಟ್‌ನಲ್ಲಿ ಪ್ರತಿ ಗ್ರಾಫ್‌ಗೂ ಕಲ್ಟಿವೇಷನ್‌ಗೆ ಎಷ್ಟೆಷ್ಟು ಖರ್ಚು ಬೀಳುತ್ತದೆ ಎಂದು ರಿಪೋರ್ಟ್ ಕೊಟ್ಟಿದ್ದಾರೆ. ಅದನ್ನು ಕೇಂದ್ರ ಸರ್ಕಾರದ ಮಾನ್ಯ ಶರದ್ ಪವಾರ್‌ರವರ ಮುಂದೆ ತೆಗೆದುಕೊಂಡು ಹೋಗಿ ನಾನೆಲ್ಲ ರೆಪ್ರಸೆಂಟ್ ಮಾಡಿದೆ. ಸ್ವಾಮಿ ಮೈಜ್‌ಗೆ ಇಷ್ಟು ಖರ್ಚಾಗುತ್ತದೆ, ಜವಾರ್‌ಗೆ ಇಷ್ಟು ಖರ್ಚಾಗುತ್ತದೆ, ರಾಗಿಗೆ ಇಷ್ಟು ಖರ್ಚಾಗುತ್ತದೆ, ತೊಗರಿಗೆ ಇಷ್ಟು ಖರ್ಚಾಗುತ್ತದೆ, ನೀವು ಸಪೋರ್ಟ್ ಪ್ರೈಸ್ ಇಷ್ಟು ಕೊಡುತ್ತಿದ್ದೀರಿ, ಇದು ಏನೇನೂ ಸಾಲದು. ಇದೆಲ್ಲವನ್ನೂ ಕೂಡ ನಾನು ಮಂತ್ರಿಯಾಗಿದ್ದಾಗ, ಆ ಕಮಿಟಿ ಮಾಡಿ ಆ ಕಮಿಟಿ ರಿಪೋರ್ಟ್‌ಗಳನ್ನು ಕೇಂದ್ರ ಸರ್ಕಾರದ ಮುಂದಿಟ್ಟಿದ್ದೇನೆ. ಇಷ್ಟೆಲ್ಲಾ ಭಾಷಣ ಮಾಡುವವನು ನಾನೇನೂ ಸುಮ್ಮನೆ ಇರಲಿಲ್ಲ. ನಾನು ಕೆಲಸ ಮಾಡಿದ್ದೇನೆ. ಎಲ್ಲಾ ಮಾಡಿದ್ದೇನೆಂದು ಹೇಳುವುದಕ್ಕಾಗುವುದಿಲ್ಲ. ನನ್ನ ಕೈಲಾದಷ್ಟು ಕೆಲಸ ಮಾಡಿದ್ದೇನೆ. ನೀವು ಹೇಳಿದ್ದರಿಂದ ನಾನು ಅದಕ್ಕೆ ಸ್ಪಂದಿಸಲಿಕ್ಕೆ ಪ್ರಯತ್ನ ಮಾಡಿದೆ. ಇವತ್ತು 33 ಪರ್ಸೆಂಟ್‌ನಷ್ಟು ಕೃಷಿ, ಜಿಡಿಪಿ ಬರುವುದು 33 ಪರ್ಸೆಂಟ್‌ಕೃಷಿ ತಡೆ ಬರುತ್ತದೆ. ಈ 33 ಪರ್ಸೆಂಟ್‌ನಿಂದ 66.6 ನಿರುದ್ಯೋಗಿಗಳಿಗೆ ಕೃಷಿಯಿಂದ ಉದ್ಯೋಗ ಸಿಗುತ್ತಿದೆ. ದುರಾದೃಷ್ಟವೆಂದರೆ, ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಕಾಳಜಿ ಇಲ್ಲದೆ, – unproductivity – ಕಡೆ ಯೋಚನೆ ಮಾಡುತ್ತಾರೆ ವಿನ: ' productivity ಕಡೆ ಇಲ್ಲ. ಏನು ಬಹುತೇಕ ಕಾರ್ಯಕ್ರಮಗಳು target – oriented approach ಇರುತ್ತದೆ. ಮತ್ತು result-oriented approach-ಆಗಿಲ್ಲ. ನಮ್ಮ ಹಳ್ಳಿ ಭಾಷೆಯಲ್ಲಿ ಹೇಳುವುದಾದರೆ, ' ಕುರುಡ ಹಗ್ಗ ಎಸೆದ ಹಾಗೆ. ಕುರುಡ ಬೆಳ್ಳಿಗ್ಗೆ ಹಸುವನ್ನು ಹಿಡಿದುಕೊಂಡು ಹೋಗಿ ಹಗ್ಗ ಎಸೆಯುತ್ತಿದ್ದರೆ ಅದು ಅಷ್ಟು ದೂರ ಹೋಗಿ ಮೇಯ್ದುಕೊಂಡು ಬರಬೇಕು. ಏಕೆಂದರೆ ಹಸು ಓಡಿ ಹೋಗುತ್ತದೆ. ಅವನು ಹಗ್ಗ ಎಸೆಯುವುದಕ್ಕೆ ಪ್ರಾರಂಭ ಮಾಡುತ್ತಾನೆ. ಅವನು ನಾನು ಹಗ್ಗ ಬಹಳ ದೂರ ಎಸೆದು ದೂರ ಎಸೆದು ಬಿಟ್ಟಿದ್ದೇನೆಂದು ಅಂದುಕೊಳ್ಳುತ್ತಾನೆ. ಹಸು ಮೇಯ್ದುಕೊಂಡು ಬಂದು ಬಿಡುತ್ತದೆ ಎಂದು ಹೇಳಿದರೆ, ಸಾಯಂಕಾಲ ನೋಡಿದರೆ ಬರೀ ಮಾರುದ್ದ ಮಾತ್ರ ಹಗ್ಗ ಎಸೆದಿದ್ದಾನೆ. ಇದು ನಮ್ಮ ಕೃಷಿಗೆ ಆಧಾರಿತವಾದ ಹಿನ್ನೆಲೆ ಕುರುಡ ಹಗ್ಗ ಎಸೆದ ಹಾಗೆ ಇದೆಯೇ ವಿನ: ಬೇರೇನೂ ಇಲ್ಲ. ನಾವು ರೂಪಿಸುವ ಕಾರ್ಯಕ್ರಮಗಳು ಏನು ಇರಬೇಕು, ಬೇಡಿಕೆಗಳಿಗೆ ಅನುಗುಣವಾಗಿ ಇಲ್ಲದೆ ಬೇಡಿಕೆ ಮತ್ತು ಅವಶ್ಯಕತೆಗಳಿಗೆ ಅನುಗುಣವಾಗಿರಬೇಕು. ಇದು ನಮ್ಮ ರೈತರಿಗೆ ಬೇಕಾದ ಅದ್ಯತೆಗಳಲ್ಲಿ ಮೊದಲನೆಯದು. ಉತ್ಪಾದನೆ ದೇಶದಲ್ಲಿ 20.3ರಷ್ಟು ಮಾತ್ರ ಕೃಷಿ ನೀಡುತ್ತದೆ. ನಾವು ಈ 20.3 ರಷ್ಟು

ಮಾತ್ರ ಉತ್ಪಾದನೆಯಲ್ಲಿ 66.6 ಜನರಿಗೆ ಉದ್ಯೋಗವನ್ನು ನೀಡುತ್ತಿದ್ದೇವೆ. ಆರ್ಥಿಕ ನೀತಿಯಲ್ಲಿ ಇವತ್ತು ಕರ್ನಾಟಕ ರಾಜ್ಯವು ನೈಸರ್ಗಿಕವಾಗಿ ಸುಮಾರು 118.28 ಲಕ್ಷ ಹೆಕ್ಟೇರ್‌ನಷ್ಟು ಕೃಷಿ ಹಾಗು ತೋಟಗಾರಿಕೆ ಯೋಗ್ಯ ಭೂಮಿಯನ್ನು ಹೊಂದಿದೆ. ಕೃಷಿ ಹಾಗೂ ಅಂತರಾಷ್ಟ್ರೀಯ ಬೇಡಿಕೆಯನ್ನು ಪೂರೈಸುವ ಸಾಮರ್ಥ್ಯ ನಮ್ಮ ರಾಜ್ಯ ಹೊಂದಿರುತ್ತದೆ. ಕರ್ನಾಟಕ ರಾಜ್ಯ ಸುಮಾರು 97 ಲಕ್ಷ ಮೆಟ್ರಿಕ್ ಟನ್‌ನಷ್ಟು ಕೃಷಿ ಬೆಳೆಯನ್ನು ಹಾಗೂ 115; ಮೆಟ್ರಿಕ್‌ಟನ್‌ನಷ್ಟು ತೋಟಗಾರಿಕೆ ಬೆಳೆಯನ್ನು ಉತ್ಪಾದಿಸುತ್ತಿದೆ. ಇದು ಏಕೆ ಹೇಳುತ್ತಿದ್ದೇನೆಂದರೆ, ಇವತ್ತು ಈ ಅಂಕಿ ಸಂಖ್ಯೆಗಳ ಸಮೇತ ನಾವು ಬೆಳೆದಂತಹ ಬೆಳ್ಳಿಗೆ ಯೋಗ್ಯ ಬೆಲೆ ಸಿಗುತ್ತಿಲ್ಲ. ಉದಾಹರಣೆಗೆ ನಾನು ನಮ್ಮ ಮಾನ್ಯ ಭೈರೇಗೌಡರಿಗೆ ನೆನೆಸಿಕೊಳ್ಳಬೇಕು. ಮಾನ್ಯ ಬೈರೇಗೌಡರು ಇದ್ದಾಗ ಈ ಫ್ಲಾರಿಕಲ್ಚರ್‌ಗೆ ಕಟ್ಟಡ ಕಟ್ಟಸಲಿಕ್ಕೆ ಅಪೆಡಾದಿಂದ ದುಡ್ಡು ತಂದರು. ನಾನು ಮಂತ್ರಿಯಾಗಿ ಒಂದೂವರೆ ವರ್ಷ ಅವರ ಹಿಂದೆ ಬಿದ್ದರೂಕೂಡ ಅದನ್ನು ಮಾಡಲಿಕ್ಕೆ ತಯಾರಾಗಲಿಲ್ಲ. ಒಬ್ಬ ಮ್ಯಾನೇಜಿಂಗ್ ಡೈರೆಕ್ಟರ್‌ಗೆ ಛೇಂಜ್ ಮಾಡಿ ಎಂದರೆ ಮಾಡುವುದಕ್ಕಾಗಲಿಲ್ಲ. ನಾನು ಏಕೆ ಹೇಳುತ್ತಿದ್ದೇನೆಂದರೆ, ನನಗೆ ಮಾನ್ಯ ಭೈರೇಗೌಡರು ಮಾಡಿದಂತಹ ಅಂತಹ ಒಳ್ಳೆಯ ಕಾರ್ಯಕ್ರಮವನ್ನು ಅನುಷ್ಠಾನಕ್ಕೆ ತರಬೇಕು, ಅದನ್ನು ಇಲ್ಲಿ ಇಂಪ್ಲಿಮೆಂಟ್ ಮಾಡಬೇಕೆಂದರೆ, ಆ ಅಧಿಕಾರಿ ಮಾಡುವುದಕ್ಕೆ ಬಿಡಲಿಲ್ಲ. ಇವತ್ತೂ ಕೂಡ ಅದೇ ಅಧಿಕಾರಿ ಇದ್ದಾನೆ. ಏಕೋ ಏನೋ ಗೊತ್ತಿಲ್ಲ. ಆಗ್ರೋ ಇಂಡಸ್ಟ್ರೀಸ್ ಎಲ್ಲಾ ಲಿಕ್ವಿಡೇಟ್ ಪೋಸಿಷನ್‌ಗೆ ಬಂದಿವೆ. ಕೋಟ್ಯಾಂತರ ರೂಪಾಯಿ ನಷ್ಟವಾಗುತ್ತಿದೆ. ಅನೇಕ ಬುಲ್ಡೋಜರ್‌ಗಳು, ಟ್ರ್ಯಾಕ್ಟರ್‌ಗಳು ಮತ್ತು ಜೀಪ್‌ಗಳು ಎಲ್ಲವೂ ಕೂಡ ತುಕ್ಕು ಹಿಡಿದು ಹೋಗುತ್ತಿವೆ. ಆದರೆ ಅದರ ಮೇಲೆ ನಾವು ಬೆಳಕು ಚೆಲ್ಲುವುದಕ್ಕಾಗಲಿಲ್ಲ. ಏಕೆಂದರೆ, ಆ ಅಧಿಕಾರಿ ಅಂತಹ ಪಟ್ಟಭದ್ರ ಹಿತಾಸಕ್ತಿ ಇರುವಂತಹ ಅಧಿಕಾರಿಯನ್ನು ಅಲ್ಲಿ ಹಾಕಿದ್ದೀರಿ. ಮೊದಲು ಅವರನ್ನು ಬದಲಾವಣೆ ಮಾಡುವ ಕೆಲಸ ಸರ್ಕಾರ ಬೇಗನೆ ಮಾಡಲಿ. ಇಲ್ಲದಿದ್ದರೆ ಇದು ಬಹಳ ತೊಂದರೆಯಾಗುತ್ತದೆ. ಕೃಷಿಕರಿಗೆ ಅನ್ಯಾಯವಾಗುತ್ತದೆ. ಇವೊತ್ತು ರೈತ ಬೆಳೆದಂಥ ಬೆಳೆಗೆ ಒಳ್ಳೆಯ ಬೆಲೆ ಬಾರದೆ, ರೈತನಿಗೆ ಪ್ರತಿಕೂಲವಾಗಿದೆ. ಉದಾಹರಣೆಗೆ ನಮ್ಮ ಜಿಲ್ಲೆಯಲ್ಲಿ ರೈತ ರೇಷ್ಮೆ ಬೆಳೆಯುತ್ತಾನೆ. ಇತ್ತೀಚಿನ ದಿನಗಳಲ್ಲಿ ರೇಷ್ಮೆಗೆ ಒಳ್ಳೆಯ ರೇಟ್ ಇದೆ. ನಾವೂ ಕೂಡ ಬೆಳ್ಳಗೆ ಬಟ್ಟೆ ಹಾಕಬೇಕೆಂದರೆ ರೇಷ್ಮೆ ಮತ್ತು ಹಾಲು ಉತ್ಪಾದನೆ ಚೆನ್ನಾಗಿ ಆಗುತ್ತಿರುವುದರಿಂದ ಒಂದು ವಾರದಲ್ಲಿ ಒಂದು ದಿನ ಹಾಲು ಬೇಡ ಎಂದು ತೆಗೆದುಕೊಳ್ಳದಿರುವ ವ್ಯವಸ್ಥೆ ಹಿಂದಿನ ದಿನಗಳಲ್ಲಿ ಇತ್ತು. ಆದರೆ ನಾನು ಹಿಂದೆ ಮಂತ್ರಿಯಾಗಿದ್ದಾಗ ಹೇಳಿದೆ ಸಮುದ್ರದಲ್ಲಿ ಹಾಕುತ್ತೀರೋ ಏನೋ ನನಗೆ ಗೊತ್ತಿಲ್ಲ. ಪ್ರತಿ ದಿನ ಹಾಲನ್ನು ಪ್ರತಿ ಸಹಕಾರ ಸಂಸ್ಥೆಯಿಂದ ಕೊಂಡುಕೊಳ್ಳಬೇಕೆಂದು ಹೇಳಿದೆ. ಇವೊತ್ತು ಅದೇ ರೀತಿ ಹಾಲನ್ನು ಕೊಳ್ಳುತ್ತಿದ್ದಾರೆ. ಇವೊತ್ತು ಈ ಎರಡೂ ಇಲ್ಲದಿದ್ದರೆ ಕೋಲಾರದ ಕಣಿವೆ ಮಳೆ ಆಧಾರಿತವಾಗಿರುವಂಥ ಜಿಲ್ಲೆಯಲ್ಲಿ ನಾವು ವಲಸೆ ಹೋಗಬೇಕಾಗಿತ್ತು ಈ ಹಾಲು ಮತ್ತು ರೇಷ್ಮೆ ಇಲ್ಲದಿದ್ದರೆ. ಇವೊತ್ತು ಆ ರೇಷ್ಮೆ ಬಗ್ಗೆ ಹೇಳಬೇಕೆಂದರೆ, ಇದನ್ನು ಹೈದರಾಲಿ ಮತ್ತು ಟಿಪ್ಪು ಸುಲ್ತಾನರು ನಮ್ಮ ರಾಜ್ಯಕ್ಕೆ ತಂದವರು. ಇವೊತ್ತಿಗೆ ಜಪಾನ್‌ನಲ್ಲಿ ಒಂದು ಗೂಡಿಗೆ 1800 ಮೀಟರ್ ದಾರ ಸಿಗುತ್ತದೆ. ನಮ್ಮಲ್ಲಿ ಕೇವಲ 800 ಮೀಟರ್ ಸಿಗುತ್ತದೆ. ರೇಷ್ಮೆ ಮಂತ್ರಿಗಳು ಯಾರೋ ಗೊತ್ತಿಲ್ಲ. ದಯವಿಟ್ಟು

ಸಂಬಂಧಪಟ್ಟ ಸಚಿವರು ದಯವಿಟ್ಟು ಗಮನಿಸಬೇಕು. ಇವೊತ್ತು ವೈಜ್ಞಾನಿಕವಾಗಿ ಬಿತ್ತನೆ ಕೊಡುವಷ್ಟು ಶಕ್ತಿ ನಮ್ಮಲ್ಲಿ ಇನ್ನೂ ಆಗಿಲ್ಲ. ಇದನ್ನು ನಾವು ಯಾರಿಗೆ ಹೇಳಬೇಕು? ಅದೇ ಜಪಾನ್‌ನಲ್ಲಿ, ಚೈನಾದಲ್ಲಿ 1800 ಅಡಿ ದಾರ ಬರುವಂಥ ಒಂದು ರೇಷ್ಮೆ ಗೂಡನ್ನು ನಮ್ಮ ರಾಜ್ಯದಲ್ಲಿ ಇಷ್ಟೆಲ್ಲಾ ರೇಷ್ಮೆ ಕೃಷಿ ಬಂದಿದ್ದರೂ ಕೂಡ ಒಳ್ಳೊಳ್ಳೆಯ ತಳಿಗಳು ವಿ–1 ಬಂತು, ಎಂ.5 ಬಂತು ಹೀಗೆ ಒಳ್ಳೊಳ್ಳೆಯ ತಳಿಗಳು ಬಂದಿದ್ದರೂ ಕೂಡ ವೈಜ್ಞಾನಿಕವಾಗಿ ಬಿತ್ತನೆ ಮೊಟ್ಟೆಯನ್ನು ಕೊಡುವಂಥ ವ್ಯವಸ್ಥೆ ಇವೊತ್ತಿಗೂ ಕೂಡ ಆಗಿಲ್ಲ. ಇದನ್ನು ನಾನು ಬಹಳ ನೊಂದು ಹೇಳುತ್ತಿದ್ದೇನೆ. ಇವೊತ್ತು ಇಂಥದ್ದಕ್ಕೆಲ್ಲಾ ಸ್ಪಂದಿಸುವಂಥ ಕೆಲಸವನ್ನು ಸರ್ಕಾರ ಮಾಡಿಲ್ಲ. ನಮ್ಮ ಆರ್ಥಿಕ ಮಂತ್ರಿಗಳು ಇಂಥದ್ದಕ್ಕೆಲ್ಲಾ ಆದ್ಯತೆಗಳನ್ನು ಕಲ್ಪಿಸುವಂಥ ವ್ಯವಸ್ಥೆಯನ್ನು ಆಯವ್ಯಯದಲ್ಲಿ ಮಾಡಬೇಕಾಗಿತ್ತು. ಅವರು ಸೈಕಲ್ ಕೊಡುತ್ತೇವೆ ಎನ್ನುವ ಮಾತನ್ನು ಹೇಳಿರುವುದಲ್ಲದೆ, ಒಂದು ಒಳ್ಳೆಯ ಕೆಲಸ ಮಾಡಿದ್ದಾರೆ. ಅದೇನೆಂದರೆ ರೈತರಿಗೆ ಶೇಕಡ 4ರ ಬಡ್ಡಿ ದರದಲ್ಲಿ ಸಾಲ ಕೊಡುವುದು. ಅದೇ ಅಮೇರಿಕಾದಲ್ಲಿ, ಚೈನಾ ದೇಶದಲ್ಲಿ ಶೇಕಡ 2 ಬಡ್ಡಿ ದರದಲ್ಲಿ ಸಾಲ ಕೊಡುತ್ತಿದ್ದಾರೆ. ನಮ್ಮ ಸರ್ಕಾರ ಇದ್ದಾಗ 6 ಪರ್ಸೆಂಟ್ ಬಡ್ಡಿ ದರದಲ್ಲಿ ಸಾಲ ಕೊಟ್ಟೆವು. ಈ ಸಮ್ಮಿಶ್ರ ಬಂದಮೇಲೆ 4 ಪರ್ಸೆಂಟ್‌ನಲ್ಲಿ ಸಾಲ ಕೊಡುತ್ತಿದ್ದೀರಿ. ನಮಗಿಂತ ಜನಸಂಖ್ಯೆ ಜಾಸ್ತಿ ಇರುವ ಚೈನಾದೇಶದಲ್ಲಿ ಶೇಕಡ 2ರ ಬಡ್ಡಿದರದಲ್ಲಿ ರೈತರಿಗೆ ಸಾಲ ಕೊಡುತ್ತಿದ್ದಾರೆ. ಇವೊತ್ತು 4 ಪರ್ಸೆಂಟ್‌ನಲ್ಲಿ ಬಡ್ಡಿ ಹಾಕಿ ಸಾಲ ಕೊಟ್ಟರೂ ಕೂಡ ಕೇವಲ 200 ರಿಂದ 250 ಕೋಟಿ ರೂಪಾಯಿಗಳ ಹೊರೆ ಮಾತ್ರ ಸರ್ಕಾರದ ಬೊಕ್ಕಸಕ್ಕೆ ಬರುವುದು. ಅದರಲ್ಲೂ ರೈತರ ವಿಚಾರವೆಂದರೆ ಅಧಿಕಾರಿಗಳ ಪೆನ್ ಮುಂದಕ್ಕೆ ಹೋಗುವುದಿಲ್ಲ. ಎಲ್ಲಾ ಅಧಿಕಾರಿಗಳು ಇದೇ ರೀತಿ ಮಾಡುತ್ತಾರೆಂದು ನಾನು ಹೇಳುವುದಿಲ್ಲ. ಕೆಲವು ಅಧಿಕಾರಿಗಳು ಈ ರೀತಿ ಇದ್ದಾರೆ. ನಾನೊಂದು ಉದಾಹರಣೆ ಹೇಳಬೇಕೆಂದರೆ ನಮ್ಮ ತಾಲ್ಲೂಕಿನಲ್ಲಿ ಏರ್‌ಫೋರ್ಸ್‌ನವರು 518 ಎಕರೆ ಭೂಮಿಯನ್ನು ಅಕ್ವೈರ್ ಮಾಡಿಕೊಂಡರು. ಮಾನ್ಯ ಪ್ರಕಾಶ್‌ರವರು ಕಂದಾಯ ಮಂತ್ರಿಗಳಾಗಿದ್ದರು ಅವರ ಗಮನಕ್ಕೂ ಕೂಡ ಈ ವಿಚಾರ ತಂದೆ. ಒಬ್ಬ ಅಧಿಕಾರಿ 518 ಎಕರೆಗೆ 25 ಸಾವಿರ ರೂಪಾಯಿಯಂತೆ ದರ ಫಿಕ್ಸ್ ಮಾಡಿದರು. ಹತ್ತು ವರ್ಷದ ಹಿಂದೆ ಪವರ್‌ಗ್ರಿಡ್‌ಗೆ 3 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ. ಆಗ ಪವರ್ ಮಂತ್ರಿಯಾಗಿ ಕೇಂದ್ರದಲ್ಲಿ ಕುಮಾರಮಂಗಳಂ ಇದ್ದರು. 3 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ. ಆದರೆ ಇಲ್ಲಿನ ಅಧಿಕಾರಿ ಒಂದು ಎಕರೆಗೆ 25 ಸಾವಿರ ರೂಪಾಯಿಗಳನ್ನು ನಿಗದಿ ಮಾಡಿದ್ದಾರೆ. ಆದರೆ ಈಗ ಅಲ್ಲಿ ಒಂದು ಎಕರೆಗೆ ಹತ್ತರಿಂದ ಹದಿನೈದು ಲಕ್ಷ ರೂಪಾಯಿ ಬೆಲೆಯಲ್ಲಿ ಹೋಗುತ್ತಿದೆ. ನಮ್ಮ ತಾಲ್ಲೂಕಿನಲ್ಲಿ ಅಲ್ಯಾರೋ ಬಂದು ಮೆಟ್ರೋ ಬೆಂಗಳೂರು ಮಾಡುತ್ತಿದ್ದಾರೆ. ಹೀಗಿರುವಾಗ 25 ಸಾವಿರ ರೂಪಾಯಿ ಮಾಡಿದಂಥ ಈ ಅಧಿಕಾರಿಗೆ ಏನು ಹೇಳೋಣ ಹೇಳಿ. ನವೆಂಬರ್‌ನಲ್ಲೋ, ಡಿಸೆಂಬರ್‌ನಲ್ಲೋ ಒಬ್ಬ ರೈತರು ನನ್ನ ಹತ್ತಿರ ಬಂದು ಅದೇನೋ ಎಕರೆಗೆ 5 ಸಾವಿರ ಕೊಟ್ಟರೆ ನಮ್ಮದು 4 ಲಕ್ಷ ರೂಪಾಯಿ ಮಾಡುತ್ತಾರಂತೆ ನೋಡೋಣವೇ ಎಂದು ನನ್ನನ್ನು ಕೇಳಿದರು. ನಾನು ಅವರನ್ನು ಬೈಯ್ದು ಕಳುಹಿಸಿದೆ: ಆ ಅಧಿಕಾರಿ ಬಹಳ ಒಳ್ಳೆಯ ಅಧಿಕಾರಿ ಹೀಗೆಲ್ಲಾ ಮಾಡಬಾರದು, ನೀವೆಲ್ಲಾ ಹೋಗಿ, ಅವೆಲ್ಲಾ ಆಗೋಲ್ಲ ಎಂದು ಹೇಳಿ ಕಳುಹಿಸಿದೆ. ಕಡೆಗೆ ಅವರ ಹತ್ತಿರ ಏನಪ್ಪಾ ಸಿಕ್ಕಿತು ಎಂದರೆ ಒಂದು ಎಕರೆಗೆ 25 ಸಾವಿರ

ರೂಪಾಯಿ. ಒಟ್ಟು 518, ಎಕರೆ ಇದರಲ್ಲಿ ಬಡವರದ್ದು ಒಂದು ಎಕರೆ ಇರುವವರು, ಎರಡು ಎಕರೆ ಇರುವವರು, ಅರ್ಧ ಎಕರೆ ಇರುವವರು ಇದ್ದರು. ಹೀಗೆ ನಿಗಧಿ ಮಾಡಿದ ಅಧಿಕಾರಿಗಳನ್ನು ಸ್ಯಾಡೀಸ್ಟ್ ಎಂದು ಹೇಳೋಣವೇ ಅಥವಾ ಬೇರೆ ಏನಾದರೂ ಹೇಳೋಣವೇ ರೈತರು ಎಂದರೆ ಇವರ ಕೈಯಲ್ಲಿ ಪೆನ್ ಓಡೋಲ್ಲವೇ? ಕೆಲವು ಐ.ಎ.ಎಸ್. ಅಧಿಕಾರಿಗಳು ಅವರನ್ನು ಅವರು ಏನೆಂದುಕೊಂಡುಬಿಟ್ಟಿದ್ದಾರೆಂದರೆ ಅವರು ಮೇಲಿನಿಂದ ಬಂದವರಾಗೇ ಆಡುತ್ತಾರೆ, ತಾಯಿ ಹೊಟ್ಟೆಯಿಂದ ನಾವು ಬಂದವರಲ್ಲ ನಾವು ಮೇಲಿನಿಂದ ಬಂದವರು ಎನ್ನುವ ಭಾವನೆ ಅವರಿಗೆ ಬಂದು ಬಿಟ್ಟಿದೆ. ಕೆಲವು ಐ.ಎ.ಎಸ್. ಅಧಿಕಾರಿಗಳು ಸ್ವರ್ಗದಿಂದ ಇಳಿದು ಬಂದವರಂತೆ ಆಡುತ್ತಾರೆ. ನಾನು ಎಲ್ಲಾ ಅಧಿಕಾರಿಗಳ ಬಗ್ಗೆ ಆ ರೀತಿ ಹೇಳುತ್ತಿಲ್ಲ. ಕೆಲವು ಅಧಿಕಾರಿಗಳು ಆ ರೀತಿ ಭಾವಿಸಿಕೊಳ್ಳುವವರು ಇದಾರೆ. ಆ ಜಮೀನು ಇರುವುದು ಕೋಲಾರದಲ್ಲಿ ಬೆಂಗಳೂರಿಗೆ 75ನೇ ಕಿಲೋಮೀಟರ್‌ನಲ್ಲಿದೆ. 75ನೇ ಕಿ.ಲೋಮೀಟರ್‌ನಲ್ಲಿ ಒಂದು ಎಕರೆಗೆ 25 ಸಾವಿರ ಕೊಡುತ್ತಾರೆ. ಮಾನ್ಯ ಪ್ರಕಾಶ್‌ರವರಿಗೂ ಹೇಳಿದೆ, ಏನ್ ಸ್ವಾಮಿ ಈ ರೀತಿ ಎಂದು ಹೇಳಿದೆ. ಈ ರೀತಿಯ ಅಧಿಕಾರಿಗಳನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಿ. ಏಕೆಂದರೆ ಅಲ್ಲಿ ಫೈಲ್‌ಗಳನ್ನೂ ಕೂಡ ಅವರೇ ಎತ್ತುಕೊಂಡು ಹೋಗಬೇಕು, ಜವಾನ ಅಲ್ಲಿ ಬರುವುದಿಲ್ಲ ಅವರ ಕೆಲಸ ಮಾಡಲು. ನನಗೆ ಆ ವಿಚಾರ ಗೊತ್ತಿದೆ. ಇಂಥ ಅಧಿಕಾರಿಗಳನ್ನು ನೀವು ಇಲ್ಲಿ ಇಟ್ಟುಕೊಂಡರೆ ಸರ್ಕಾರಕ್ಕಾಗಲೀ ರಾಜ್ಯಕ್ಕಾಗಲೀ ಒಳ್ಳೆಯ ಕೀರ್ತಿ ಬರುವುದಿಲ್ಲ.

ಅಧ್ಯಕ್ಷರು: ಮಾನ್ಯ ಶ್ರೀನಿವಾಸಗೌಡರೆ, ನಾನೂ ಕೂಡ ಹಳ್ಳಿಯಿಂದ ಬಂದಿರುವವನು. ಹಳ್ಳಿಯಲ್ಲೇನಾದರೂ ತಾವು ಈ ರೀತಿ ಪ್ರಸ್ತಾಪ ಮಾಡಿದರೆ ಅಧಿಕಾರಿಗಳ ಮೇಲೆ, ಅವರು ಏನು ಹೇಳುತ್ತಾರೆ ಗೊತ್ತೆ, ಬಿಡಣ್ಣಾ ಸುಮ್ನೇ ಏನೇನೋ ಹೇಳಬೇಡ. ಕುದುರೆ ಏನಣ್ಣಾ, ಕುದುರೆ ಸವಾರ ಮುಖ್ಯ ಕಣಣ್ಣಾ, ಕುದುರೆ ಸವಾರ ಸರಿ ಇದ್ದರೆ ಹೇಗೆ ಬೇಕಾದರೂ ಕುದುರೆಯನ್ನು ಓಡಿಸಬಹುದು ಕಣಣ್ಣಾ ಎಂದು ಹೆಳುತ್ತಾರೆ. ಅದಕ್ಕೋಸ್ಕರ ಅವರನ್ನೇ ಏಕೆ ತಾವು ಹೇಳುತ್ತೀರಿ. ಅವರ ಮೇಲುಗಡೆ ಕುಳಿತಿರುವ ನೀವುಗಳು ಹೇಳಿ.

ಶ್ರೀ ಕೆ. ಶ್ರೀನಿವಾಸಗೌಡ: ನಾವುಗಳು ಹೇಳೇ ಇದು ಆಗಿದ್ದು ಎಂದು ಹೇಳುತ್ತಿರುವುದು. ನಾನು ಹೇಳಿದೆನಲ್ಲಾ. ಕಂದಾಯ ಮಂತ್ರಿಗಳಾಗಿದ್ದ ಮಾನ್ಯ ಎಂ.ಪಿ.ಪ್ರಕಾಶ್‌ರವರ ಹತ್ತಿರ ಕೂಡ ಈ ಬಗ್ಗೆ ಪ್ರಸ್ತಾಪ ಮಾಡಿದೆ. ಆ ಅಧಿಕಾರಿ ಮೇಲೆ ಹೋದ ವರ್ಷ ಮಳೆ ಜಾಸ್ತಿಯಾದಾಗ ಎಲ್ಲಿ ನೋಡಿದರೂ ಆ ಅಧಿಕಾರಿಯ effigy ಯನ್ನು ಸುಡುತ್ತಿದ್ದರು. ನಾನು ಏನಪ್ಪಾ ಇದು. ಈತ ಬಹಳ ಒಳ್ಳೆಯ ಅಧಿಕಾರಿ ಆದರೆ ಇವರ effigy ಯನ್ನು ಸುಡುತ್ತಿದ್ದಾರಲ್ಲಾ ಎಂದು ಕೇಳಿದರೆ, ಅವರು ಅವೊತ್ತೇ ಹೇಳಿದರು, ಆದರೆ ನನಗೆ ಅವೊತ್ತಿಗೂ ಕೂಡ ಅವರ ಮೇಲೆ ಅಪನಂಬಿಕೆಯೇ ಬರಲಿಲ್ಲ. ಆಮೇಲೆ ನನ್ನ ತಾಲ್ಲೂಕಿನಲ್ಲಿ ಆದಂಥದ್ದನ್ನು ನೋಡಿದ ಮೇಲೆ ಓ ಇವರು ಸ್ಯಾಡೀಸ್ಟ್, ಇವರ್‍ಯಾರೂ ರೈತರ ಪರ ಇಲ್ಲ, ಇವರು ರೈತರ ವಿರೋಧಿಗಳು. ಆದ್ದರಿಂದ ಇಂಥ ಅಧಿಕಾರಿಗಳ ಬಗ್ಗೆ ಸರ್ಕಾರ ಸ್ವಲ್ಪ ಗಮನದಲ್ಲಿಟ್ಟುಕೊಳ್ಳಬೇಕು ಎನ್ನುವಂಥದ್ದನ್ನು ಕೂಡ ಹೇಳುತ್ತಿದ್ದೇನೆ. ಏಕೆಂದರೆ ಈ ಸಂದರ್ಭ

ಬಂದಿದ್ದರಿಂದ ನಾನು ಆ ಬಗ್ಗೆ ಹೇಳುತ್ತಿದ್ದೇನೆ. ಇವೊತ್ತು ಈ ಉಗ್ರಾಣ, ಸಾಗಾಣಿಕೆ, ನಿರ್ವಹಣೆ ಮತ್ತು ಸಂಸ್ಕರಣೆಯ ಕೊರತೆಗಳಿಂದ ಸುಮಾರು ದೇಶದಲ್ಲಿ 50 ಸಾವಿರ ಕೋಟಿ ರೂಪಾಯಿ ನಷ್ಟವಾಗುತ್ತದೆ. ಕರ್ನಾಟಕದಲ್ಲಿ 8 ಪರ್ಸೆಂಟ್ ಲಾಸ್ ಆಗುವುದರಿಂದ ಸುಮಾರು 400 ಕೋಟಿ ರೂ ಇಷ್ಟರಲ್ಲಿಯೇ ಆಗುತ್ತದೆ. ಇದನ್ನು ನಾನು ಏಕೆ ಹೇಳುತ್ತಿದ್ದೇನೆಂದರೆ ನಮ್ಮ ಆರ್ಥಿಕ ಮಂತ್ರಿಗಳು ಇವಕ್ಕೆ ಆದ್ಯತೆಗಳನ್ನು ಕೊಟ್ಟಿಲ್ಲ ಎನ್ನುವುದರ ಮೇಲೆ ನಾನು ಮಾತನಾಡುತ್ತಿದ್ದೇನೆ.

(ಮಾನ್ಯ ಉಪಾಧ್ಯಕ್ಷರು (ಶ್ರೀ ಎನ್.ವೈ. ಗೋಪಾಲಕೃಷ್ಣರವರು) ಅಧ್ಯಕ್ಷ ಪೀಠದಲ್ಲಿದ್ದರು)

ಇವೊತ್ತು ಆರ್ಥಿಕ ಮಂತ್ರಿಗಳು ರೈತರು ಬೆಳೆದಂಥ ಬೆಳೆಯಿಂದ ರೈತರಿಗೆ ಒಂದು ವರ್ಷಕ್ಕೆ 400 ಕೋಟಿ ರೂಪಾಯಿಗಳಷ್ಟು ಅನ್ಯಾಯವಾಗುತ್ತಿರುವುದನ್ನು ತಪ್ಪಿಸಬಹುದಿತ್ತು. ಆದರೆ ಅದಕ್ಕೆ ಆರ್ಥಿಕ ಮಂತ್ರಿಗಳು ಆಧ್ಯತೆಗಳನ್ನು ಕೊಡಲಿಲ್ಲವೆಂದು ನಾನು ನೇರವಾಗಿ ಹೇಳುವುದಕ್ಕೆ ಬಯಸುತ್ತಿದ್ದೇನೆ. ಇವೊತ್ತು ಅಮೇರಿಕಾ ದೇಶದ ಉತ್ಪಾದಕತೆಯನ್ನು ಸರಿಸಮಗೊಳಿಸಬೇಕಾದರೆ ಇವೊತ್ತು ಬೆಳೆಯುವಂಥ ತರಕಾರಿಗಳು ಮತ್ತು ಹಣ್ಣುಗಳ ಸಂಸ್ಕರಣೆ ಅಲ್ಲಿಯಂತೆ ಆಗಬೇಕಾಗುತ್ತದೆ. ಈ ರೀತಿಯ ವ್ಯವಸ್ಥೆ ಇರುವುದರಿಂದ ಹಣವನ್ನೂ ಉಳಿಸುವಂಥ ಮತ್ತು ಆ ಮೂಲಕ ಕೃಷಿ ಉತ್ಪಾದನೆಗೆ ಹೆಚ್ಚು ಶಕ್ತಿ ಕೊಡುವಂಥ ವ್ಯವಸ್ಥೆ ಅಮೆರಿಕಾದಲ್ಲಿದೆ. ಆದರೆ ನಮ್ಮ ಸರ್ಕಾರ ಇಲ್ಲಿ ಸಂಸ್ಕರಣೆಗೆ ಹೆಚ್ಚು ಆದ್ಯತೆಯನ್ನು ಕೊಟ್ಟಿಲ್ಲ. ಅದರಲ್ಲೂ ನಮ್ಮ ಆರ್ಥಿಕ ಮಂತ್ರಿಗಳು ಬರೇ ಚುನಾವಣೆ ಘೋಷಣೆಗಳ ರೀತಿ ಬರೆದರೆ ವಿನ: ಇವೊತ್ತು ಕೃಷಿಕರಿಗಾಗಿ ನೇರವಾಗಿ ಏನನ್ನೂ ಹೇಳಲಿಲ್ಲ. ಮೊನ್ನೆ ಹೇಳಿದರಲ್ಲಾ, ಬೆಳಗಿನ ಜಾವ ಐದೂವರೆ ಘಂಟೆಗೆ ನೇಗಿಲು ಹೊತ್ತುಕೊಂಡು ರೈತ ಎತ್ತುಗಳನ್ನು ಹಿಡಿದುಕೊಂಡು ಹೋದರೆ ಕ್ರಿಸ್ತನನ್ನು ಶಿಲುಬೆಗೆ ಏರಿಸಿದಂಥ ಅನುಭವ ಆಗುತ್ತದೆ ಎಂದು ಹೇಳಿದಂಥ ಹಿನ್ನೆಲೆ ಇರುವವರು, ಇವೊತ್ತು ಅಂತವರ ತಲೆಗೆ ಇವೆಲ್ಲಾ ಏಕೆ ಬರಲಿಲ್ಲವೋ, ಮಾನ್ಯ ಅಧ್ಯಕ್ಷರೆ, ಒಬ್ಬ ರೈತ ಕೃಷಿ ಮೇಲೆ ಒಂದು ಲಕ್ಷ ರೂಪಾಯಿಗಳನ್ನು ಅವನು ಇನ್‌ವೆಸ್ಟ್ ಮಾಡಿದರೆ...

ಶ್ರೀ ಎಂ.ಪಿ.ಪ್ರಕಾಶ್ (ಗೃಹ ಕಾನೂನು ಸಂಸದೀಯ ಸಚಿವರು): ಮಾನ್ಯ ಉಪಾಧ್ಯಕ್ಷರೆ, ಸಿ.ಇ.ಟಿ. ಬಗ್ಗೆ ಒಂದು ಲೆಜಿಸ್ಲೇಶನ್ ತರುತ್ತೇವೆಂದು ಮಾತು ಕೊಟ್ಟಿದ್ದಾರಂತೆ. ಮಾನ್ಯ ಆಚಾರ್ಯರವರು ಮತ್ತು ಶಂಕರಮೂರ್ತಿಯವರು ಬರಬೇಕೆಂದು ಹೇಳಿದ್ದಾರೆ. ಅದಕ್ಕಾಗಿ ನಾನು ಹೋಗುತ್ತಿದ್ದೇನೆ. ತಮ್ಮ ಅನುಮತಿ ಪಡೆದೇ ಹೋಗುತ್ತೇನೆ.

ಶ್ರೀ ಕೆ.ಶ್ರೀನಿವಾಸಗೌಡ: ಸದನದಲ್ಲಿ ಮಂತ್ರಿಗಳು ಯಾರೂ ಇಲ್ಲದಿದ್ದರೆ ನಾನು ಬೇಕಾದರೆ ನಾಳೆ ಮಾತನಾಡುತ್ತೇನೆ.

ಶ್ರೀ ಎಂ.ಪಿ.ಪ್ರಕಾಶ್: ಇಲ್ಲಿ ಬೇರೆಯವರೆಲ್ಲರೂ ಇದ್ದಾರೆ. ಸಿ.ಇ.ಟಿ. ಬಗ್ಗೆ ನಾಳೆ ಬಿಲ್ ಇಂಟ್ರಡ್ಯೂಸ್ ಮಾಡಬೇಕಾಗಿದೆ. ಅದಕ್ಕಾಗಿ ನಾನು ಹೋಗುತ್ತಿದ್ದೇನೆ.

ಉಪಾಧ್ಯಕ್ಷರು: ಆಯಿತು.

ಶ್ರೀ ಕೆ. ಶ್ರೀನಿವಾಸಗೌಡ: ಮಾನ್ಯ ಉಪಾಧ್ಯಕ್ಷರೆ, ಹೊತ್ತು ಮೇಲೇರುವ ಮೊದಲೇ ಹೆಗಲ ಮೇಲೆ ನೇಗಿಲು ಹೊತ್ತು ಸೋತು ಸೊರಗಿದ ಎತ್ತುಗಳು ಹಿಂಬಾಲಿಸುತ್ತಿರಲು ಹೊಲದಡೆಗೆ ನಡೆದ

ಪ್ರತಿ ರೈತನು ನನಗೆ ಶಿಲುಬೆ ಹೊತ್ತ ಜೀಸಸ್‌ನಂತೆ ಕಾಣಿಸುತ್ತಾನೆ ಎಂದು ಎಷ್ಟು ಅರ್ಥ ಗರ್ಭಿತನಾಗಿ ಅರ್ಥಮಂತ್ರಿಗಳು ಇದನ್ನು ಹೇಳಿದರು. ಆದರೆ ಕಾರ್ಯರೂಪದಲ್ಲಿ ಬರುವಾಗ ಅವರು ರೈತನನ್ನು ಮರೆತುಹೋದರು. ಇವೊತ್ತು ರೈತ ಒಂದು ಲಕ್ಷ ರೂಪಾಯಿಯನ್ನು ಕೃಷಿ ಮೇಲೆ ಬಂಡವಾಳವನ್ನು ಹಾಕಿದರೆ ಪ್ರತ್ಯಕ್ಷವಾಗಿ 1.27 ಹಾಗೂ ಪರೋಕ್ಷವಾಗಿ 3.64 ಉದ್ಯೋಗಗಳನ್ನು ರೈತ ನಿರ್ಮಾಣ ಮಾಡುತ್ತಾನೆ. ಇದನ್ನು ನೀವು ಅರ್ಥ ಮಾಡಿಕೊಳ್ಳಬೇಕು. ಯಾವುದೇ ಇಂಡಸ್ಟ್ರಿಯಲ್ಲೂ ಒಂದು ಲಕ್ಷ ರೂಪಾಯಿ ಇನ್‌ವೆಸ್ಟ್ ಮಾಡಿ 3.64 ರಷ್ಟು ಉದ್ಯೋಗಗಳನ್ನು ನಿರ್ಮಾಣ ಮಾಡುವುದಕ್ಕೆ ಆಗುವುದಿಲ್ಲ. ಸುಮಾರು 4 ಜನರಿಗೆ ಇಂಡಸ್ಟ್ರೀಯಲ್ಲಿ ಒಂದು ಲಕ್ಷ ರೂಪಾಯಿ ಇನ್‌ವೆಸ್ಟ್ ಮಾಡಿ ಕೆಲಸ ಕೊಡುವುದಕ್ಕೆ ಆಗುವುದಿಲ್ಲ. ಆದರೆ ರೈತ ಕೃಷಿ ಮೆಲೆ ಒಂದು ಲಕ್ಷ ರೂಪಾಯಿ ಇನ್‌ವೆಸ್ಟ್ ಮಾಡಿದರೆ 1.27ರಷ್ಟು ಪ್ರತ್ಯಕ್ಷವಾಗಿ ಹಾಗೂ 3.64 ರಷ್ಟು ಪರೋಕ್ಷವಾಗಿ ಜನರಿಗೆ ಉದ್ಯೋಗ ಕೊಡುವಂಥ ಶಕ್ತಿ ರೈತನಿಗಿದೆ. ಇವೊತ್ತು ರಫ್ತಿಗೆ ಜಾಗತಿಕ ಮಾರುಕಟ್ಟೆಯಲ್ಲಿ ಸಂಸ್ಕರಿಸಿದ ಹಾಲು ಅರ್ಧದಿಂದ ಮುಕ್ಕಾಲು ಭಾಗಕ್ಕೆ ವೃದ್ಧಿಗೊಂಡಿದೆ. ಅಂದರೆ 50 ಪರ್ಸೆಂಟ್ ಇದ್ದದ್ದು ಈಗ 75 ಪರ್ಸೆಂಟ್ ಆಗಿದೆ. ಇದಕ್ಕೆ ಆದ್ಯತೆಗಳು ಏನು? ಇದರ ಬಗ್ಗೆ ನಮ್ಮ ಬಜೆಟ್‌ನಲ್ಲಿ ಎಲ್ಲೂ ತೋರಿಸಲಿಲ್ಲ. ಅದಕ್ಕೆ ಹೆಚ್ಚಿಗೆ ಆದ್ಯತೆಗಳನ್ನು ಕೊಡಲಿಲ್ಲ. ನೀವು ಒಬ್ಬ ರೈತ ಶಿಲುಬೆಗೆ ಏರಿದಂಗೆ ನೋವಾಗುತ್ತದೆ ಎಂಬುದು ಹೇಳಿದ್ದಿರಲ್ಲ ಮಾನ್ಯ ಆರ್ಥಿಕ ಮಂತ್ರಿಗಳಿಗೆ ಏಕೆ ಹೊಳೆಯಲಿಲ್ಲ? ಇವತ್ತು 20 ರಿಂದ 54 ವಯೋಮಿತಿಯನ್ನು ಹೊಂದಿದಂತಹ ಜನಸಂಖ್ಯೆ ಇದ್ದು, ಸಂಸ್ಕರಿಸಿದ ಆಹಾರವು 13 ರಷ್ಟು ವೃದ್ಧಿಯಾಗುತ್ತದೆ. 1991 ರಲ್ಲಿ 370 ಮಿಲಿಯನ್ ಟನ್ಸ್, 2001 ರಲ್ಲಿ 452 ಮಿಲಿಯನ್ ಟನ್ಸ್ ಹಾಗೂ 2010 ರಲ್ಲಿ 570 ಮಿಲಿಯನ್ ಟನ್ಸ್ ಈ ದೇಶದಲ್ಲಿ ಸಂಸ್ಕರಿಸಿದ ಆಹಾರವನ್ನು ಉತ್ಪಾದನೆ ಮಾಡುತ್ತಿದ್ದೇವೆ. ಸಂಸ್ಕರಣೆ ಮಟ್ಟ ಈಗಲೂ ಕೂಡ ಶೇಕಡ 2 ರಷ್ಟು ಇದೆ. ಇದಕ್ಕೆ ಆದ್ಯತೆಗಳನ್ನು ಕೊಡಲಿಲ್ಲ. ಅದೇ ಮುಂದುವರೆದ ರಾಷ್ಟಗಳಲ್ಲಿ ನೋಡಿದರೆ, ಮಲೇಷಿಯಾದಲ್ಲಿ 80 ಪರ್ಸೆಂಟ್, ಥೈಲ್ಯಾಂಡ್ 30 ಪರ್ಸೆಂಟ್ ಚೈನಾ 23 ಪರ್ಸೆಂಟ್, ಪಿಲಿಫೈನ್ಸ್ 40, ಪರ್ಸೆಂಟ್, ಯುನೈಟೆಡ್ ಕಿಂಗ್‌ಡಮ್, 188 ಪರ್ಸೆಂಟನಷ್ಟು ಇವತ್ತು ಸಂಸ್ಕರಿಸಿದ ಆಹಾರ ಪದಾರ್ಥವನ್ನು ಕೊಡುತ್ತಾರೆ. ರೈತರಿಗೆ ವ್ಯಾಲ್ಯೂ ಆಡೆಡ್ ಸಿಗುತ್ತದೆ. ತಾನು ಬೆಳೆದಂತಹ ಬೆಳೆಯನ್ನು ಹಾಗೆ ಮಾರಿದರೆ ಕಡಿಮೆ ಬೆಲೆ ಸಿಗುತ್ತದೆ ಅವನು ವ್ಯಾಲ್ಯೂ ಆಡೆಡ್ ಮಾಡುವುದಕ್ಕೆ ಆ ದೇಶಗಳಲ್ಲಿ ಬಹಳಷ್ಟು ಅವಕಾಶಗಳು ಇದೆ. ಆದರೆ ಆ ಅವಕಾಶ ನಮ್ಮ ದೇಶದಲ್ಲಿ ಕೇವಲ ಎರಡು ಪರ್ಸೆಂಟ್ ಮಾತ್ರ ಇರುವುದು. ಇವತ್ತು ಭಾರತದಲ್ಲಿ ಶೇಕಡ ಏಳರಷ್ಟು ಇದೆ, ಫಿಲಿಫೈನ್ಸ್ ಶೇಕಡ 45 ರಷ್ಟು ಇದೆ, ಚೀನಾದಲ್ಲಿ ಶೇಕಡ 23 ಪರ್ಸೆಂಟ್ ಇದೆ. ನಾವು ಗಮನಿಸಬೇಕಾಗಿರುವುದು ಏನೆಂದರೆ ಇವತ್ತು ನಮ್ಮ ದೇಶದಲ್ಲಿ ಇವತ್ತಿಗೂ ಕೂಡ ರೈತ ಏಕೆ ಬೆನ್ನೆಲುಬು ಇಲ್ಲದಂತೆ ಆಗಿರುವುದೆಂದರೆ ಸರ್ಕಾರ 60 ವರ್ಷ ಆದ್ಯತೆಗಳನ್ನು ಕೆಲವೇ ಕಾರಣಗಳಿಂದ ದೊಡ್ಡ ದೊಡ್ಡ ಇಂಡಸ್ಟ್ರಿಗಳಿಗೆ ಮಾಡಿದರು. ಅದರಿಂದ ಎಷ್ಟು ಜನರಿಗೆ ಕೆಲಸ ಸಿಕ್ಕಿತು? ಒಂದೆರಡು ಮೂರು ಸಾವಿರ ಜನರಿಗೆ ಕೆಲಸ ಸಿಕ್ಕಿತು. ಆದರೆ ಇವತ್ತು 69 ಪರ್ಸೆಂಟ್ ಹಿನ್ನೆಲೆ ಇರುವಂತಹ ಕೃಷಿಕರಿಗೆ ನೀವು ಏನು ಉದ್ಯೋಗವನ್ನು ಕೊಡುತ್ತಿದ್ದೀರಿ? ಉದ್ಯೋಗ ಕೊಡುವವನೇ ರೈತ. ಆದರೆ

ಯಾವುದೇ ಇಂಡಸ್ಟ್ರೀಸ್ ಕೊಡುತ್ತಿಲ್ಲ. ಇದನ್ನು ನಾವು ಅರಿಯಬೇಕು. ಒಂದು ಯೂನಿಟ್ ಮೇಲೆ ಬೇಡಿಕೆ ಸಾಮರ್ಥ್ಯ ಕಡಿಮೆಯಾದಾಗ ಉಪಯೋಗ ಮುಂತಾದವುಗಳ ಬಗ್ಗೆ ಪ್ರಭಾವ ಬೀರುತ್ತದೆ. ತಾಜಾ ಹಣ್ಣುಗಳು ಮತ್ತು ಸಂಸ್ಕರಣೆ; ಇವು ವೃದ್ಧಿಯಲ್ಲಿ ಕಡಿಮೆಯಾಗಿ ಭಾರತದ ಬೆಲೆ ವಿಷಯದಲ್ಲಿ ನಾವು ಸೂಕ್ಷ್ಮವಾಗಿ ನೋಡಿದರೆ ವಾರ್ಷಿಕ ತಲಾ ಆದಾಯ ಭಾರತದಲ್ಲಿರುವುದು ಕೇವಲ 500 ಡಾಲರ್; ಅಮೆರಿಕಾದಲ್ಲಿ 33,000 ಡಾಲರ್; ಚೈನಾದಲ್ಲಿ 1100 ಡಾಲರ್‌ಗಳಾಗಿವೆ. ಆದರೆ ನಮ್ಮಲ್ಲಿ ಕೇವಲ 500 ಡಾಲರ್ ಇದೆ. ವಾರ್ಷಿಕವಾಗಿ ಎಂದರೆ ವರ್ಷಕ್ಕೆ 500 ಎಂದರೆ ಇದನ್ನು ತಿಂಗಳ ಲೆಕ್ಕದಲ್ಲಿ ತೆಗೆದುಕೊಂಡರೆ 12X4 – 48 ಎಂದರೆ 40 ಡಾಲರ್ ಕೂಡ ಇಲ್ಲ. ಒಂದು ತಿಂಗಳಿಗೆ ನಮ್ಮ ರೈತನಿಗೆ ಅವನ ಆದಾಯ 40 ಡಾಲರ್ ಕೂಡ ಇಲ್ಲ ಎಂದರೆ 4 X4–16, ಎಂದರೆ 1,600 ರೂಪಾಯಿ ಕೂಡ ಇಲ್ಲ. ಆದುದರಿಂದ ಇದಕ್ಕೆ ಆದ್ಯತೆಗಳನ್ನು ಕೊಟ್ಟು ಅವನ ಆರ್ಥಿಕ ಮಟ್ಟವನ್ನು ಎತ್ತುವುದಕ್ಕೆ ಪ್ರಯತ್ನ ಮಾಡಲಿಲ್ಲ ಈ ಬಜೆಟ್‌ನಲ್ಲಿ ಎನ್ನುವುದು ನನ್ನ ಅನಿಸಿಕೆ. ಕೇವಲ 4 ಪರ್ಸೆಂಟ್ ಬಡ್ಡಿಯಲ್ಲಿ ಸಾಲ ಕೊಟ್ಟು ಬಿಟ್ಟರೆ ನಮ್ಮದೆಲ್ಲಾ ಮುಗಿದು ಹೋಗಿತು ಎನ್ನುವಂತಾದ್ದಲ್ಲ. ಇವತ್ತು ಎಲ್ಲಾ ಹಂತದಲ್ಲೂ ಕೂಡ, ಅದು ಕೃಷಿ ಇರಬಹುದು, ಹೈನುಗಾರಿಕೆ ಇರಬಹುದು, ರೇಷ್ಮೆ ಇರಬಹುದು ಮೀನುಗಾರಿಕೆ ಇರಬಹುದು ಇವೆಲ್ಲಾದರ ಮೇಲೆ ತಮ್ಮದೇ ಆದಂತಹ ಆದ್ಯತೆಗಳನ್ನು, ಒತ್ತುಗಳನ್ನು ಕೊಟ್ಟಾಗ ಮಾತ್ರ ಕೃಷಿಕನ ಜೀವನ ಹಸನಾಗುತ್ತದೆ ವಿನ: ಕೇವಲ ನಮ್ಮ ಸಂತೋಷಕ್ಕೆ ಆಯವ್ಯಯಗಳನ್ನು ಮಂಡಿಸಿ ಕೆಲವು ದೊಡ್ಡ ಪಾಯಿಂಟ್‌ಗಳನ್ನು ಹಾಕಿಕೊಂಡು ಒಳ್ಳೆಯ ಬಜೆಟ್ ಕೊಟ್ಟರು ಎಂದು ಹೇಳುವುದಲ್ಲ. ಕೃಷಿಕನಿಗೆ ನೇರವಾಗಿ ನೆಗ್ಲೆಟ್ ಮಾಡಿದ್ದಾರೆ ಎಂದು ಹೇಳುವುದೇ ಇದರ ಮೂಲ ಉದ್ದೇಶ. ಇನ್ನು ಮೂಲಭೂತ ಸೌಕರ್ಯಗಳಾದ ವಿದ್ಯುಚ್ಛಕ್ತಿ ಮಾನ್ಯ ಉಪಾಧ್ಯಕ್ಷರೆ ವಿದ್ಯುಚ್ಛಕ್ತಿ ಮಂತ್ರಿಗಳಾದ ರೇವಣ್ಣನವರು ಇಲ್ಲಿ ಇಲ್ಲ. ಕಣ್ಣು ಮುಚ್ಚಿ ಕಣ್ಣು ತೆಗೆಯುವುದರಲ್ಲಿ ಕರೆಂಟ್ ಹೋಗುತ್ತಿರುತ್ತದೆ. ನಮ್ಮ ಜಿಲ್ಲೆಯ ವಿಚಾರ ಹೇಳುತ್ತೇನೆ. ರಾತ್ರಿ 12 ಗಂಟೆಯಲ್ಲಿ ಹೋಗಿ ಆಲೂಗಡ್ಡೆ ಹಾಕಿದ್ದಾನೆ. ಕಣ್ಣು ಮಿಟಕಿಸಿದಾಗ ಕರೆಂಟ್ ಹೋಗುತ್ತಿರುತ್ತದೆ. ನೀವು ಕರೆಂಟ್ ಆರು ಗಂಟೆ ಕೊಡುತ್ತೀರಾ? ಕೊಟ್ಟುಬಿಡಿ ಕಂಟಿನ್ಯೂಯಸ್ ಆಗಿ ಆರು ಗಂಟೆ ಕರೆಂಟನ್ನು. ಎಂಟು ಗಂಟೆ ಕರೆಂಟ್ ಕೊಡುತ್ತೀರಾ? ಕೊಟ್ಟುಬಿಡಿ ಎಂಟು ಗಂಟೆ ಕಂಟಿನ್ಯೂಯಸ್ ಆಗಿ ಕರೆಂಟನ್ನು. ಇದಕ್ಕೆ ಏಕೆ ಆದ್ಯತೆಗಳನ್ನು ಕೊಡುತ್ತಿಲ್ಲ? ಏಕೆ ಇಲ್ಲಿ ರೈತನಿಗೆ ಕರೆಂಟ್ ಕೊಡುತ್ತಿಲ್ಲ. ಇಲ್ಲಿ ತಪ್ಪು ತಿಳಿದುಕೊಳ್ಳಬಾರದು, ಗುಜರಾತ್‌ನಲ್ಲಿ 24 ಗಂಟೆ ಕರೆಂಟ್ ರೈತನಿಗೆ ಸಿಗುತ್ತದೆ. ನಾನು ಒಂದು ಪತ್ರಿಕೆಯಲ್ಲಿ ಓದಿದೆ. ನಮ್ಮ ರಾಜ್ಯದಲ್ಲಿ ಕೇವಲ 6 ರಿಂದ 8 ಗಂಟೆಯವರೆಗೆ ಕೂಡ ಕಂಟಿನ್ಯೂಸ್ ಆಗಿ ಕರೆಂಟ್ ಕೊಡುತ್ತಿಲ್ಲ. ಅಲ್ಲಿ ಅವರಿಗೆ 3 ಫೇಜ್ ಕರೆಂಟ್ ಸಿಗುತ್ತದೆ. ಇನ್ನು ಮಾನ್ಯ ಅಧ್ಯಕ್ಷರೆ, ಹೋದ ಸಾರಿ ಕೂಡ ನಾನು ಪ್ರಸ್ತಾಪ ಮಾಡಿದೆ. ನಾವು ಎಪಿಎಂಸಿ ಕಾಯಿದೆಯನ್ನು ಮಾರ್ಪಾಡು ಮಾಡಬೇಕು. ನಾನು ಬೆಳೆದಂತಹ ಬೆಳೆಯನ್ನು ನಾನು ಸ್ವತಂತ್ರವಾಗಿ ಮಾರುವುದಕ್ಕೆ ಅವಕಾಶ ಕಲ್ಪಿಸಿಕೊಡಬೇಕು. ನಮ್ಮ ಜಿಲ್ಲೆಯಲ್ಲಿ ಕುರಿಗಳ ಕೆಂಪಣ್ಣ ಎಂದು ಶಿಡ್ಲಘಟ್ಟ ತಾಲ್ಲೂಕಿನಲ್ಲಿ ಇದ್ದಾರೆ. ಅಲ್ಲಿ ಬರೀ ಕುರಿಗಳನ್ನು ಸಾಕುತ್ತಾನೆ. ಅವನು ಅವುಗಳನ್ನು ಮೆಟ್ರೋಗೆ ತಂದು ಹಾಕುತ್ತಾನೆ ಅದರಿಂದ ಅವನಿಗೆ ಒಂದು ಕೆಜಿ ಗೆ 150 ರೂಪಾಯಿ ಸಿಗುತ್ತದೆ. ಆದರೆ ನಾವು

ಹೋಲ್‌ಸೇಲ್ ಬೇರೆ ಅಂಗಡಿಗಳಿಗೆ ಮಾರಿದರೆ ನಮಗೆ ಸಿಗುವುದು 60 ರಿಂದ 70 ರೂಪಾಯಿ. ಯಾವ ನ್ಯಾಯವಿದು? ಎಪಿಎಂಸಿ ನಲ್ಲಿ ಏಕೆ ಮಾರಬೇಕು? ತಾನು ಬೆಳೆದಂತಹ ಬೆಳೆಗಳನ್ನು ತನ್ನ ಇಚ್ಛೆಯಂತೆ ಮಾರುವುದಕ್ಕಾಗದೆ ಇಂಡಸ್ಟ್ರೀಸ್‌ನವರು ಬೇಕಾದ ಹಾಗೆ ತಯಾರಿಸಿರುವುದನ್ನು ಪ್ರಪಂಚದಲ್ಲೆಲ್ಲಾ ಮಾರಬಹುದು ಆದರೆ ನಮ್ಮ ರೈತರ ಮೇಲೆ ಏಕೆ ಈ ರೀತಿಯಾದಂತಹ ಒತ್ತಡ? ಆದುದರಿಂದ ಈ ಕಾಯಿದೆಯನ್ನು ಬೇಗನೆ ಮಾರ್ಪಾಡು ಮಾಡಬೇಕೆನ್ನುವುದನ್ನು ತಿಳಿಸುತ್ತಾ, ಮಾನ್ಯ ಯಡಿಯೂರಪ್ಪ ನವರಿಗೆ ಹೇಳುವುದೇನೆಂದರೆ ಆಹಾರೋತ್ಪಾದನೆ ಮೇಲೆ ಕೇಂದ್ರ ಮತ್ತು ರಾಜ್ಯ ತೆರಿಗೆಗಳು ಅಂತರರಾಷ್ಟ ಮಟ್ಟಕ್ಕಿಂತ ತುಂಬಾ ಜಾಸ್ತಿಯಾಗಿದೆ ನೀವು ಕೊಟ್ಟಂತಹ ಬಜೆಟ್‌ನಲ್ಲಿ. ಇವತ್ತು ಶೇಕಡ 30 ರಿಂದ 40 ರಷ್ಟು ಬೆಲೆ ಹೆಚ್ಚಿದೆ. ಅದೇ ಇಂಗ್ಲೇಂಡಿನಲ್ಲಿ ಐರ್ಲೆಂಡ್‌ನಲ್ಲಿ, ಮಲೇಷಿಯಾದಲ್ಲಿ ಜೀರೋ ಇದೆ ಎಂದರೆ ಸೊನ್ನೆ ತೆರಿಗೆ ಇದೆ. ಮಾನ್ಯ ಯಡಿಯೂರಪ್ಪನವರು ರೈತರಿಗೆ ಸಹಾಯ ಮಾಡಬೇಕಾಗಿರುವುದು ಇಲ್ಲಿ. ನೀವು ತೆರಿಗೆಗಳನ್ನು ಎಲ್ಲಿ ಹಾಕಬೇಕು? ಹಾಕಿ ಎಕ್ಸೈಜ್‌ಗೆ ನಾವೇನೂ ಬೇಡ ಎನ್ನುವುದಿಲ್ಲ. ಹಾಕಿ ಸಿಗರೇಟ್‌ಗೆ ನಾವೇನೂ ಬೇಡವೆನ್ನುವುದಿಲ್ಲ. ಅಲ್ಲಿ ಬೇರೆ ದೇಶಗಳಲ್ಲಿ ಇವತ್ತು ಡಬ್ಲೂ.ಟಿ.ಒ ಇದೆ. ಇವತ್ತು ವರ್ಲ್ಡ್ ಟ್ರೇಡ್ ಆರ್ಗನೈಸೇಷನ್ ಇರುವುದರಿಂದ, ಬೆಳೆದಂತಹ ಬೆಳೆಗೆ ನೀವು ಇಲ್ಲಿ ಎಲ್ಲಾ ವಿಧವಾದ ಟ್ಯಾಕ್ಸ್‌ಗಳನ್ನು ಜಾಸ್ತಿ ಮಾಡಿದರೆ, ಬೇರೆ ದೇಶಕ್ಕೆ ಹೋಗಿ ರೈತ ಏನು ಕಾಂಪಿಟ್ ಮಾಡುವುದು? ಇವತ್ತು ಫ್ಲಾರಿಕಲ್ಚರ್ ಬಗ್ಗೆ ಹೇಳುವುದಾರೆ ಬೆಂಗಳೂರಿನಲ್ಲಿ ಒಂದು ರೀತಿ ಹಬ್ಬ ಇದ್ದಹಾಗೆ ಇತ್ತು ಆದರೆ ಇತ್ತೀಚೆಗೆ ಬಹಳ ಜನ ಆ ದಂಧೆಯನ್ನು ಬಿಟ್ಟೇಬಿಟ್ಟರು. ಕೋಟ್ಯಾಂತರ ರೂಪಾಯಿ ಸಾಲ ತೆಗೆದುಕೊಂಡು ಇವತ್ತು ಆ ದಂಧೆಯನ್ನು ಮಾಡುವುದನ್ನೇ ಬಿಟ್ಟಿದ್ದಾರೆ. ಕಾರಣ ಏನೆಂದರೆ ಪಾಕಿಸ್ತಾನದಲ್ಲಿ ಕೇವಲ ಏಳು ರೂಪಾಯಿಗೆ ಒಂದು ಕೆ.ಜಿ.ಯಂತೆ ಇಂಗ್ಲೇಂಡ್‌ಗೆ ಕಳುಹಿಸಬಹುದು; ಹಾಲೆಂಡ್‌ಗೆ ಕಳುಹಿಸಬಹುದು. ಆದರೆ ನಮ್ಮಲ್ಲಿ 168 ರೂಪಾಯಿ ಒಂದು ಕೆ.ಜಿ.ಗೆ ಕೊಡಬೇಕು. ಇವನು ಏನು ಮಾರೋದು ಅಲ್ಲಿ? ಇವನು ಬೆಂಗಳೂರಿನಲ್ಲಿ ಎಳೆದಂತಹ ಹೂವುಗಳನ್ನು ಅವನು ಹಾಲೆಂಡನಲ್ಲಿ ಮಾರಬೇಕಾದರೆ ಏರ್‌ಫೇರ್ 168 ರೂಪಾಯಿ ಕೊಡಬೇಕು. ಆದರೆ ಪಾಕಿಸ್ತಾನದಲ್ಲಿ ಏಳು ರೂಪಾಯಿಗೆ ತೆಗೆದುಕೊಂಡು ಹೋಗುತ್ತಾನೆ. ಇಲ್ಲಿ ಕೇಂದ್ರ ಸರ್ಕಾರ ಹಾಗೂ ರಾಜ್ಯ ಸರ್ಕಾರಗಳು ಆದ್ಯತೆಗಳನ್ನು ಕೊಡಬೇಕಾಗಿರುವುದು. ಇವತ್ತು ರೈತನ ಆರ್ಥಿಕ ಅಭಿವೃದ್ಧಿಗೆ ಆದ್ಯತೆಗಳನ್ನು ಕೊಡಬೇಕಾಗಿರುವುದು ಇಂತಹ ವಿಚಾರದಲ್ಲಿ ಎಂದು ನಾನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಇವತ್ತು ತಾಜಾ ಉತ್ಪನ್ನಗಳಿಗೆ ಮಾತ್ರ ಫೈಟೋ ಸ್ಯಾಸೆಟರಿ ಪ್ರಪತ್ರ ಎಂದು ಕೊಡುತ್ತಿದ್ದೀರಿ. ಸಂಸ್ಕರಿಸಿದ ಉತ್ಪನ್ನಗಳಿಗೂ ಕೂಡ ಪತ್ರವನ್ನು ಕೊಡಬೇಕು. ಕೇವಲ ತಾಜಾ ಹಣ್ಣುಗಳಿಗೆ ಕೊಟ್ಟರೆ ಸಾಲದು. ಆದುದರಿಂದ ಇವುಗಳಿಗೂ ಕೊಟ್ಟರೆ ಬೇರೆ ದೇಶಗಳಲ್ಲಿ ನಮಗೂ ಕೂಡ ಕಾಂಪಿಟ್ ಮಾಡುವಂತಹ ಅವಕಾಶಗಳು ಇದೆ. ಆದುದರಿಂದ ತೋಟಗಾರಿಕಾ ಬೇಳೆಗಳನ್ನು....

ಶ್ರೀ ಅಲಂಗೂರು ಶ್ರೀನಿವಾಸ್: ಮಾನ್ಯ ಉಪಾಧ್ಯಕ್ಷರೆ..

ಶ್ರೀ ಕೆ. ಶ್ರೀನಿವಾಸ ಗೌಡ: ನೀವು ಆಮೇಲೆ ಮಾತನಾಡಿ, ನಿಮಗೆ ಮಂತ್ರಿ ಸ್ಥಾನ ಸಿಗಲಿಲ್ಲವಲ್ಲಾ ಇನ್ಯಾಕೆ ಮಾತನಾಡುತ್ತೀರಿ, ಕುಳಿತುಕೊಳ್ಳಿ, ಮಾನ್ಯ ಉಪಾಧ್ಯಕ್ಷರೆ ನಾನು ಯೀಲ್ಡ್ ಆಗಲಿಲ್ಲ ಅವರು ಆಮೇಲೆ ಮಾತನಾಡಲಿ.

ಶ್ರೀ ಅಲಂಗೂರು ಶ್ರೀನಿವಾಸ್: ಕರ್ನಾಟಕ ವಿಧಾನಸಭೆಯಲ್ಲಿ ಚರ್ಚೆ ನಡೆಯುತ್ತಿದೆಯೇ ಅಥವಾ ಬೇರೆ ದೇಶದಲ್ಲಿ ಚರ್ಚೆ ನಡೆಯುತ್ತಿದೆಯೇ?

ಶ್ರೀ ಕೆ. ಶ್ರೀನಿವಾಸ ಗೌಡ: ನಾನು ಯೀಲ್ಡ್ ಆಗಿಲ್ಲ, ಅವರು ಮಂತ್ರಿಯಾಗಿದ್ದರೆ ಯೀಲ್ಡ್ ಆಗುತ್ತಿದ್ದೆ. ಅವರು ಮಂತ್ರಿಯಾಗಿಲ್ಲ, ಆದರಿಂದ ಯೀಲ್ಡ್ ಆಗಲ್ಲ.

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಉಪಾಧ್ಯಕ್ಷರೆ, ಅತೃಪ್ತ ನಾಯಕರು ಮಾಜಿಮಂತ್ರಿಗಳು ಅವರಿಗಾದರೂ ಸ್ವಲ್ಪ ಮಾತನಾಡುವುದಕ್ಕೆ ಅವಕಾಶ ಕೊಡಿ.

ಶ್ರೀ ಎಂ.ಪಿ.ಪ್ರಕಾಶ್: ಭಾವ ಮೈದುನನ ಮೇಲೆ ಎಷ್ಟೊಂದು ಪ್ರೀತಿ, ನೀವು ಮಂತ್ರಿಯಾಗಿದ್ದರೆ ಯೀಲ್ಡ್ ಆಗುತ್ತಿದ್ದೆ ಎನ್ನುವುದನ್ನು ನೋಡಿದರೆ ನೀವು ಬೇಗ ಮಾಡಿ ಎಂದು ಸಂದೇಶ.

ಶ್ರೀ ಅಲಂಗೂರು ಶ್ರೀನಿವಾಸ್: ಮಾನ್ಯ ಉಪಾಧ್ಯಕ್ಷರೆ, ನಾನು ತಮ್ಮ ಮೂಲಕ ಕೇಳುವುದೇನೆಂದರೆ ಇದು ಕರ್ನಾಟಕದ ವಿಧನಸಭೆನಾ ಅಥವಾ ಹೊರದೇಶದ ವಿಧಾನಸಭೆನಾ ಎನ್ನುವುದರ ಬಗ್ಗೆ ಕ್ಲಾರಿಫಿಕೇಷನ್ ಬೇಕು. ಏಕೆಂದರೆ ಪ್ರತಿಯೊಂದು ವಿಚಾರದಲ್ಲೂ ಕೂಡ ಮಾನ್ಯ ಮಾಜಿ ಸಚಿವರು ಅಮೇರಿಕಾ, ಇಂಗ್ಲೆಂಡ್, ಇಸ್ರೇಲ್ ಉದಾಹರಣೆಯನ್ನು ಕೋಟ್ ಮಾಡುತ್ತಿದ್ದಾರೆ. ಅವರೂ ಕೂಡ ಕೃಷಿ ಮಂತ್ರಿಯಾಗಿ ಎರಡು ವರ್ಷ ಸೇವೆ ಸಲ್ಲಿಸಿದ್ದಾರೆ. ಕಾಂಗ್ರೆಸ್ ಸರ್ಕಾರ ಕೂಡ 5 ವರ್ಷ ಸರ್ಕಾರ ನಡೆಸಿದೆ. ಕೇಂದ್ರ ಸರ್ಕಾರದಲ್ಲಿ ಕೂಡ ಅವರದೇ ಆದಂಥ ಸರ್ಕಾರ ಇದೆ, ಇದನ್ನೆಲ್ಲಾ ಅನುಷ್ಠಾನಕ್ಕೆ ತಂದರೆ ನಾವೆಲ್ಲಾ ಕೂಡ ಸ್ವಾಗತ ಮಾಡುತ್ತೇವೆ. ಎಲ್ಲಾ ರೈತರೂ ಕೂಡ ಚಿರಋಣಿಯಾಗುತ್ತೇವೆ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಕೆ. ಶ್ರೀನಿವಾಸಗೌಡ: ತಾವು ಕೊಟ್ಟಿರುವ ಅಡ್ವೈಸ್ ಬಗ್ಗೆ ಯೋಚನೆ ಮಾಡೋಣ. ಇನ್ನು ಸಿದ್ಧ ಉತ್ಪನ್ನಗಳ ಮೇಲೆ, ತೆರಿಗೆ ರಾಜ್ಯದಿಂದ ರಾಜ್ಯಕ್ಕೆ ವಿಭಿನ್ನವಾಗಿದೆ. ಅದು ಶೇಕಡ 8 ರಿಂದ ಶೇಕಡ 23ರಷ್ಟು ಇದೆ. ಇದರ ಜೊತೆಗೆ ಕೇಂದ್ರ ಸರ್ಕಾರದ ಮಾರಾಟ ತೆರಿಗೆ ಶೇಕಡ 4ರಷ್ಟು, ಪ್ಯಾಕಿಂಗ್ ವಸ್ತುಗಳ ಬೆಲೆ ಗಗನಕ್ಕೆ ಏರಿದೆ. ಈಗ ಮರ ಎಲ್ಲೂ ಸಿಗುವುದಿಲ್ಲ. ಅದು ಉತ್ಪಾದನಾ ಸುಂಕ ಶೇಕಡ 16.35ರಷ್ಟು ಉಪಕರವನ್ನು ವಿಧಿಸಲಾಗಿದೆ. ತಮ್ಮ ಬಜೆಟ್ ಮೇಲೆ ನಾನು ಮಾತನಾಡುತ್ತಿರುವುದು. ತಾವು ತಮ್ಮ ಅಧಿಕಾರಿಗಳ ಬಳಿ ಇದನ್ನು ದಯವಿಟ್ಟು ತಿಳಿದುಕೊಳ್ಳಿ. ನಾನು ಇದನ್ನು ನೋಡಿದ್ದರಿಂದ, ನಾನು ಹೇಳುತ್ತಿದ್ದೇನೆ. ತಾವು ಏನೇನು ಟ್ಯಾಕ್ಸ್‌ಗಳನ್ನು ಹಾಕಿ, ಏನಾಗುತ್ತಿದೆಯೆಂಬುದನ್ನು ಹೇಳುತ್ತಿದ್ದೇನೆ. ಇವತ್ತು ಅತಿಯಾದ ಉತ್ಪಾದನಾ ವೆಚ್ಚ, ಇವತ್ತು ಕರೆಂಟ್‌ನದು ಒಂದು ಕಡೆ, ಒಂದು ಕಡೆ ಪ್ಯಾಕಿಂಗ್‌ಗೆ ವಸ್ತುಗಳು ಸಿಗುವುದಿಲ್ಲ, ತೆರಿಗೆ ಜಾಸ್ತಿ, ಕೇಂದ್ರ ಸರ್ಕಾರದ ತೆರಿಗೆ ಜಾಸ್ತಿ, ಇವೆಲ್ಲದರ ಜೊತೆಗೆ ಈ ಸಾರಿ ದಿನೇ ದಿನೇ ಲೇಬರ್ ಪ್ರಾಬ್ಲಮ್ ಜಾಸ್ತಿಯಾಗುತ್ತಿದೆ. ಇವತ್ತು ಡೀಸೆಲ್,

ಜನರೇಟರ್‌ಗಳನ್ನು ಇಟ್ಟುಕೊಂಡು ಮಾಡಿದರೆ, ಆ ಪ್ರೋಸೆಸಿಂಗ್ ಪ್ಲಾಂಟ್‌ಗಳು ಲಾಭದಾಯಕವಾಗಿ ನಡೆಸುವುದಕ್ಕೆ ಆಗುವುದಿಲ್ಲ. ಈಗ ಮೀನುಗಾರರಿಗೆ ಬೋಟುಗಳಿಗೆ ರಿಯಾಯಿತಿ ಏನು ಕೊಟ್ಟಿದ್ದೀರಿ. ಪ್ರೋಸೆಸಿಂಗ್ ಯೂನಿಟ್‌ಗಳಿಗೆ, ಅದೇ ರೀತಿಯಲ್ಲಿ ನೀವು ಡೀಸಲ್ ಜನರೇಟರ್‌ಗಳಿಗೆ ಸಬ್ಸಿಡಿಯನ್ನು ಕೊಡಬೇಕು. ಇಲ್ಲಿ ಮಾನ್ಯ ಎಸ್.ಎಂ.ಕೃಷ್ಣರವರು ಮಾನ್ಯ ಮುಖ್ಯಮಂತ್ರಿಗಳು ಆಗಿದ್ದಾಗ ನಾನು ಈ ಭಾಗದಲ್ಲೇ ಕುಳಿತ್ತಿದ್ದೆ. ಆಗ ಕೋಲ್ಡ್ ಸ್ಟೋರೇಜ್‌ಗಳನ್ನು ನಾನು ಲೆಕ್ಕ ಹಾಕಿದೆ. ನಮ್ಮ ದಕ್ಷಿಣ ಭಾರತದಲ್ಲಿ ಅತಿ ದೊಡ್ಡ ಕೋಲ್ಡ್ ಸ್ಟೋರೇಜ್ ಅನ್ನು ಕೋಲಾರದಲ್ಲಿ ಕಟ್ಟಿದ್ದು, ಅದು " ರಾಜ್ಯ ಮಾರಾಟ ಮಹಾ ಮಂಡಳಿ" ಯಿಂದ ಕಟ್ಟಿದ್ದು, ನಾನು ಕೇಳಿದಾಗ ಶೇಕಡ 1ರಷ್ಟು ಸಬ್ಸಿಡಿಯನ್ನು ಕರೆಂಟ್ ಮೇಲೆ ಕೊಟ್ಟರು, ಅದು ಒಂದು ಯೂನಿಟ್‌ಗೆ ಕೊಟ್ಟರು. ಅದನ್ನು ಇನ್ನೂ ಸ್ವಲ್ಪ ಹೆಚ್ಚಿಗೆ ಕೊಡಬೇಕು, ಇಲ್ಲದಿದ್ದರೆ ಈ ಕೋಲ್ಡ್ ಸ್ಟೋರೇಜ್‌ಗಳೂ ಕೂಡ ಸರ್ವೈವಲ್ ಆಗುವುದಕ್ಕೆ ಸಾಧ್ಯವಿಲ್ಲವೆನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳಲಿಚ್ಚಿಸುತ್ತೇನೆ. ಇವತ್ತು ಅಧಿಕ ಬಡ್ಡಿದರವನ್ನು ತಾವು ಕೋ-ಆಪರೇಟೀವ್‌ನಲ್ಲಿ ಶೇಕಡ 6 ಇದ್ದುದ್ದನ್ನು ಶೇಕಡ 4ಕ್ಕೆ ತಂದಮೇಲೆ, ಇವತ್ತು ನಾವು ಕಮರ್ಷಿಯಲ್ ಬ್ಯಾಂಕ್‌ಗೆ ಹೋದರೂ ಅದೇ ಪರಿಸ್ಥಿತಿ ಇದೆ. ರೈತರ ಹಿನ್ನೆಲೆಯನ್ನು ನೋಡಿ ಅವನಿಗೆ ಸಾಲವನ್ನು ಕೊಡುತ್ತಾರೆ. ಅವನು ಸಾಲವನ್ನು ವಾಪಸ್ಸು ಕಟ್ಟುತ್ತಾನಾ? ಸ್ಥಿತಿವಂತನಾ? ಅವನ ಹತ್ತಿರ ಜಮೀನು ಜಾಸ್ತಿ ಇದೆಯಾ? ಟ್ರಾಕ್ಟರ್ ಇದೆಯಾ?

ಶ್ರೀ ಜೆ.ಸಿ.ಮಾಧುಸ್ವಾಮಿ: ತಾವು ಪದೇ ಪದೇ ಶೇಕಡ 4 ರಷ್ಟು ಬಡ್ಡಿಯಂತೆ ಸಾಲ ಕೊಡುತ್ತೀರಿ ಎಂದು ಹೇಳಿ, ಅವರನ್ನು ಹೊಗಳುತ್ತಿದ್ದೀರಿ. ನಮಗೆ ಈ ಶೇಕಡ 4ರಷ್ಟು ರೇಟ್ ಆಫ್ ಇಂಟ್ರಸ್ಟನ ಬಗ್ಗೆ ಬಹಳ ಕನ್‌ಫ್ಯೂಶನ್ ಆಗಿದೆ. ಇದು ಒಂದು ಲಕ್ಷ ರೂಪಾಯಿಕ್ಕಾ, ಮೂರು ಲಕ್ಷ ರೂಪಾಯಿಕ್ಕಾ ಸಾರಸಗಟು ರೈತನ ಸಾಲಕ್ಕಾ, ಕಾರಿಫ್‌ಗಾ ಲಾಂಗ್ ಟರ್ಮ್ ಲೋನ್‌ಗಾ, ಇದರ ಬಗ್ಗೆ ಮಾನ್ಯ ಆರ್ಥಿಕ ಮಂತ್ರಿಯವರು ಈಗಲಾದರೂ ಹೇಳಬೇಕು. ನಾವು ಇತ್ತೀಚೆಗೆ ಓದುತ್ತಿರುವುದನ್ನು ನೋಡಿಬಿಟ್ಟರೆ, it is confined to Rs. 1 lakh forkharif. ಒಂದು ಲಕ್ಷ ಎಂದು ಒಂದು ಸಾರಿ ಹೇಳುತ್ತಾರೆ, ಮೂರು ಲಕ್ಷ ರೂಪಾಯಿಗಳಿಗೆ ಎಂದು ಒಂದು ಸಲ ಹೇಳುತ್ತಾರೆ. ಇಲ್ಲ, ಇದು short-term loan for kahrif ಎಂದು ಹೇಳುತ್ತಾರೆ. ನಾವು ಇದರ ಬಗ್ಗೆ ಏನು ತಿಳಿದುಕೊಂಡಿದ್ದೇವೆಂದರೆ ಅಗ್ರಿಕಲ್ಚರ್ ಲೋನ್ ಯಾವುದಾದರೂ ತೆಗೆದುಕೊಳ್ಳಲಿ, ಅದಕ್ಕೆ ಶೇಕಡ 4 ರಂತೆ ರೇಟ್ ಆಫ್ ಇಂಟ್ರಸ್ಟ್‌ಗೆ ಡ್ರಾ ಮಾಡಿಕೊಳ್ಳಬಹುದೆಂದು ತಿಳಿದುಕೊಂಡಿದ್ದೆವು. ಈ ಮಧ್ಯೆ ಈ ಬಗ್ಗೆ ಬಹಳ ಗೊಂದಲಗಳು ಸೃಷ್ಟಿಯಾಗಿವೆ. ಒಂದು ಸಾರಿ ಇದನ್ನು ಒಂದು ಲಕ್ಷ ರೂಪಾಯಿಗಳಿಗೆ ಇಳಿಸಿದ್ದೇವೆಂದು ಹೇಳುತ್ತೀರಿ: ಒಂದು ಸಾರಿ ಮೂರು ಲಕ್ಷ ರೂಪಾಯಿಗಳಿಗೆ ಎಂದು ಹೇಳುತ್ತೀರಿ. ಏನು ಮಾಡಿದ್ದೀರಿ ಎಂಬುದನ್ನು ಈ ಬಗ್ಗೆ ತಾವು ಸ್ಪಷ್ಟವಾಗಿ ಹೇಳಬೇಕು.

ಶ್ರೀ ಆರ್.ವಿ ದೇಶಪಾಂಡೆ: ಮಾನ್ಯ ಉಪಾಧ್ಯಕ್ಷರೆ, ಈಗ ಮಾನ್ಯ ಮಾಧುಸ್ವಾಮಿಯವರು ಹೇಳಿದರಲ್ಲಾ, ಮಾನ್ಯ ಧರ್ಮಸಿಂಗ್‌ರವರ ಸರ್ಕಾರ ಇದ್ದಾಗ, ನಾವು ಶೇಕಡ 6ರಂತೆ ಬಡ್ಡಿಯಲ್ಲಿ ರೈತರಿಗೆ ಲಾಂಗ್ ಟರ್ಮ್ ಕ್ರೆಡಿಟ್ ಆಗಲಿ, ಶಾರ್ಟ್ ಟರ್ಮ್ ಕ್ರೆಡಿಟ್ ಆಗಲಿ ಕೊಡಬೇಕೆಂದು

ನಿರ್ಣಯ ಮಾಡಿದ್ದೆವು. ಆಗ ನಾವು ಯಾವುದೇ ಮಿತಿಯನ್ನು ಹಾಕಿರಲಿಲ್ಲ. ಶಾರ್ಟ್ ಟರ್ಮ್‌ನಲ್ಲಿ ಯಾರು ಬೆಳೆ ಸಾಲವೆಂದು 5 ಲಕ್ಷ 10ಲಕ್ಷ, ರೂಪಾಯಿಗಳನ್ನು ತೆಗೆದುಕೊಳ್ಳುವುದಿಲ್ಲ. ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದರೆ ದೀರ್ಘಾವಧಿ ಸಾಲವನ್ನು ತೆಗೆದುಕೊಳ್ಳುವಾಗ, ಟ್ರಾಕ್ಟರ್ ಇರಬಹುದು, ಲ್ಯಾಂಡ್ ಇಂಪ್ರೂಮೆಂಟ್ ಇರಬಹುದು, ಕೆಲವು ಸಲ ಅದು 4ಲಕ್ಷ, 5ಲಕ್ಷ, ರೂಪಾಯಿಗಳೇ ಆಗುತ್ತವೆ. ಈಗ ಮಾನ್ಯ ಸದಸ್ಯರು ಹೇಳಿದ ಹಾಗೆ, ತಾವು ಇದಕ್ಕೆ ನಿರ್ಬಂಧವನ್ನು ಹಾಕಿದ್ದೀರಿ. ತಾವು 3 ಲಕ್ಷ ರೂಪಾಯಿಗಳೆಂದು ಹಾಕಿದ್ದೀರಿ, ಆ ನಿರ್ಬಂಧ ಆಗ ಇರಲಿಲ್ಲ. ಎರಡನೆಯದು ಶೇಕಡ 6ರಂತೆ ಬಡ್ಡಿ ಇದ್ದಾಗ, ಈಗ ಹೊಸ ವರ್ಷ ಶುರುವಾಯಿತು; ಅವನು ಸಾಲವನ್ನು ತೆಗೆದುಕೊಳ್ಳುತ್ತಾನೆ. ಅವನು ದಿನಾಂಕ:31.3.2007ರೊಳಗೆ ಸಾಲದ ಮರುಪಾವತಿಯನ್ನು ಮಾಡಬೇಕು. ಅವನು ಸಾಲವನ್ನು ಮರುಪಾವತಿ ಮಾಡದಿದ್ದರೂ ಸಹ ಅವನಿಗೆ ಆ ಪಿರೀಯಡ್‌ಗೆ ಶೇಕಡ 6ರ ಬಡ್ಡಿಯನ್ನೇ ಡಿಫಾಲ್ಟ್ ಆದರೂ ಸಹ ಇಷ್ಟು ಚಾರ್ಜ್ ಮಾಡುತ್ತಿದ್ದೆವು. ಏಪ್ರಿಲ್ 2007ನಿಂದ nominal charge ಮಾಡುತ್ತೇವೆ. ಆದರೆ ತಾವು ಏನು ಆಜ್ಞೆಯನ್ನು ಮಾಡಿದ್ದೀರಿ. ಮೊನ್ನೆ ನಾನು ಶಿರಸಿಗೆ ಹೋದಾಗ ಈ ವಿಷಯವನ್ನು ನನಗೆ ರೈತ ಪ್ರತಿನಿಧಿಗಳು ಗಮನಕ್ಕೆ ತಂದರು. ತಾವು ಇದರಲ್ಲಿ ನಿರ್ಬಂಧವನ್ನು ಹಾಕಿದ್ದೀರಿ. ಎರಡನೆಯದಾಗಿ ನಾನು ಇದಕ್ಕೆ ಒಂದು ಉದಾಹರಣೆಯನ್ನು ಕೊಡುತ್ತೇನೆ, ಅವನು ದಿನಾಂಕ:31.3.2007ರೊಳಗೆ ಸಾಲ ಮರುಪಾವತಿ ಮಾಡುವುದನ್ನು ತಪ್ಪಿದರೆ, from 1st April, 2006, he has to pay normal rate of interest. ಆದುದರಿಂದ ತಾವು ಇದನ್ನು ಪುನ: ಪರಿಶೀಲನೆಯನ್ನು ಮಾಡಬೇಕು. ರೈತರ ಪರವಾಗಿ ಸಾಕಷ್ಟು ಒಳ್ಳೆಯ ವಿಚಾರವನ್ನು ತಾವು ಏನು ಹೇಳಿದ್ದೀರಿ. ಒಬ್ಬ ರೈತರ ಬಗ್ಗೆ ಸಾಕಷ್ಟು ಕಳಕಳಿಯನ್ನು ಇಟ್ಟುಕೊಂಡು ನಾವು ಸಹಾಯ ಮಾಡುತ್ತೇವೆಂದು ಭಾವನೆಯನ್ನು ಇಟ್ಟುಕೊಂಡರೆ, ಇವತ್ತು ಅದು ಆಗುತ್ತಾ ಇಲ್ಲ. ಇವತ್ತು ನಿಮಗೆ ಒಂದು ಒಳ್ಳೆಯದು ಏನಾಗಿದೆಯೆಂದರೆ, ಕೇಂದ್ರ ಸರ್ಕಾರವು ನಬಾರ್ಡ್‌ನಿಂದ ರೀಫೈನಾನ್ಸ್ ರೇಟ್ 9.5ಗೆ ತಂದಿದ್ದಾರೆ; ಹಾಗಾಗಿ ಮುಂಗಡ ಪತ್ರದಲ್ಲಿ ಮಾನ್ಯ ಧರ್ಮಸಿಂಗ್‌ರವರ ಸರ್ಕಾರದ ಮೇಲೆ ಏನು ಭಾರ ಬಂತು, ಆ ಭಾರ ನಿಮ್ಮ ಸರ್ಕಾರದ ಮೇಲೆ ಬರುತ್ತಾ ಇಲ್ಲ. ನಾವು ಶೇಕಡ 5.56 ರವರೆಗೂ ಸಪ್ಲೈ ಮಾಡಬೇಕಾಗಿತ್ತು. ಮೈಸೂರು ಬ್ಯಾಂಕ್‌ನವರು ಶೇಕಡ 14ರ ಬಡ್ಡಿಯಂತೆ ಕೊಡುತ್ತಾರೆ, ಅಲ್ಲಿ ಶೇಕಡ 8ರಂತೆ subsidise ಮಾಡಬೇಕು. ನೀವು ಇಲ್ಲಿ ಶೇಕಡ 6ರಂತೆ ಇದ್ದದ್ದನ್ನು ಶೇಕಡ 4ರ ಬಡ್ಡಿಯಂತೆ ತಂದು, ಒಳ್ಳೆಯ ಹೆಸರನ್ನು ತೆಗೆದುಕೊಳ್ಳುವ ಪ್ರಯತ್ನವನ್ನು ಮಾಡಿದರೂ ಸಹ, ನಿಮಗೆ subsidise ಆಗುವಂಥಾದ್ದು ಕೇವಲ ಶೇಕಡ 2, ಶೇಕಡ 2.5 ಅಷ್ಟೇ. ನೀವು ಬಜೆಟ್‌ನಲ್ಲಿ ಶೇಕಡ 30 ರಷ್ಟು ಹಣವನ್ನು ಇಟ್ಟಿದ್ದೀರಲ್ಲಾ, ಅದು ನಿಮಗೆ ಸೇವಿಂಗ್ ಆಗುತ್ತದೆ. ಆದುದರಿಂದ ನಿಮಗೆ ಸಾಧ್ಯವಾದರೆ ಉತ್ತರವನ್ನು ಕೊಡಿ. ಇಲ್ಲವೆಂದರೆ ಪುನರ್ ಪರಿಶೀಲನೆಯನ್ನು ಮಾಡಿ, ರೈತರ ಹಿತವನ್ನು ತಾವು ಕಾಪಾಡುತ್ತೀರೆಂಬ ವಿಶ್ವಾಸ ನಮಗೆ ಇದೆ.

ಶ್ರೀ ಬಿ.ಎಸ್.ಯಡಿಯೂರಪ್ಪ (ಉಪ ಮುಖ್ಯಮಂತ್ರಿಗಳು): ನಾವು ಈಗಾಗಲೇ ನಮ್ಮ ಸರ್ಕಾರಿ ಸುತ್ತೋಲೆಯನ್ನು ಕಳುಹಿಸಿದ್ದೇವೆ. ಇಲ್ಲಿ 3ಲಕ್ಷ ರೂಪಾಯಿಗಳವರೆಗೂ ಅದು ಲಾಂಗ್

ಟರ್ಮ್ ಲೋನ್ ಆಗಿರಬಹುದು ಶಾರ್ಟ್ ಟರ್ಮ್ ಲೋನ್ ಇರಬಹುದು, ಅವನು 3ಲಕ್ಷ ರೂಪಾಯಿಗಳವರೆಗೂ ಸಾಲವನ್ನು ಪಡೆಯಲು ಅರ್ಹನಾಗಿರುತ್ತಾನೆ. ಅವನಿಗೆ ಶೇಕಡ 4ರ ಬಡ್ಡಿಯಂತೆ ಚಾರ್ಜ್ ಮಾಡುತ್ತೇವೆ. ಎರಡನೇಯದಾಗಿ ಈ ಶೇಕಡ 4ರಷ್ಟು ಕನ್ಸೆಷನ್ ಕೊಡುವ ಉದ್ದೇಶವೇನೆಂದರೆ, ಅವನು ಸಕಾಲಕ್ಕೆ ಸಾಲವನ್ನು ತೆಗೆದುಕೊಳ್ಳಬೇಕು. ಅವನು ಬೆಳೆ ಬೆಳೆದ ತಕ್ಷಣ ಸಾಲವನ್ನು ವಾಪಸ್ಸು ಮಾಡುವಂತಹ ಅಭ್ಯಾಸವನ್ನು ಬೆಳೆಸಿಕೊಳ್ಳಬೇಕು. That is our intention. ನಾವು ಬಹಳ ಸ್ಪಷ್ಟವಾಗಿ, ಇದರ ಬಗ್ಗೆ ಹತ್ತು ಬಾರಿ ಚಿಂತನೆಯನ್ನು ಮಾಡಿ, ನಮ್ಮ ರೈತರಿಗೆ ಭಾರ ಬೀಳಬಾರದು. ಅವರಿಗೆ ಇದನ್ನು ಅಭ್ಯಾಸ ಮಾಡಬೇಕು, ಮತ್ತೆ ಕೆಲವು ಕಡೆಯಿಂದ ದೂರುಗಳು ಬಂದಿವೆ. ನಾನು ಮೀಟಿಂಗ್ ಅನ್ನು ಕರೆಯುತ್ತಿದ್ದೇನೆ. ಡಿ.ಸಿ.ಸಿ. ಬ್ಯಾಂಕ್‌ಗಳಿಂದ ಮತ್ತೆ ಬೇರೆ ಕಡೆಗಳಲ್ಲಿ ನಾವು ಏನು ಹೇಳಿದ್ದೇವೆಂದರೆ, ಹೊಸ ರೈತರಿಗೆ ಶೇಕಡ 25ರಷ್ಟು ಸಾಲವನ್ನು ಕೊಡಬೇಕೆಂದು ಹೇಳಿದ್ದೇವೆ. ಕೆಲವು ಬ್ಯಾಂಕ್‌ಗಳು ಮುಂದೆ ಬಂದು ಸಾಲವನ್ನು ಕೊಡುತ್ತಿವೆ; ಕೆಲವು ಬ್ಯಾಂಕ್‌ಗಳು ಕೊಡುತ್ತಿಲ್ಲ. ಇವರ ಸಭೆಯನ್ನು ನಾನು ಕರೆಯುತ್ತಿದ್ದೇನೆ. ಆದರೆ ಇಲ್ಲಿ ನಮ್ಮ ಸರ್ಕಾರದಿಂದ ಬಹಳ ಸ್ಪಷ್ಟವಾಗಿ ಇದೆ; ಆಯಾ ವರ್ಷದಲ್ಲೇ ಅವನು ಸಾಲವನ್ನು ಚುಕ್ತಾ ಮಾಡಬೇಕು; ಮಾಡಿದರೆ ಶೇಕಡ 4ರ ಬಡ್ಡಿಯಂತೆ 3ಲಕ್ಷ ರೂಪಾಯಿಗಳ ವರೆಗೂ ಸಾಲಕ್ಕೆ ಅರ್ಹನಾಗಿರುತ್ತಾರೆ. ಈ ಬಗ್ಗೆ ನಾವು ಸರ್ಕಾರಿ ಆದೇಶವನ್ನು ಹೊರಡಿಸಿದ್ದೇವೆ. ಈ ರೀತಿಯಲ್ಲಿ ರೈತರು ಸಾಲವನ್ನು ತೆಗೆದುಕೊಳ್ಳಲು ಪ್ರಾರಂಭ ಮಾಡಿದ್ದಾರೆ. ನಾವು ಒಂದು ಸಾರಿ ಸಕಾಲಕ್ಕೆ ಸಾಲವನ್ನು ತೆಗೆದುಕೊಂಡು ಮರು ಪಾವತಿ ಮಾಡುವಂಥ ಅಭ್ಯಾಸ ಮಾಡದೇ ಹೋದರೆ, ಯಾವುದೇ ಸರ್ಕಾರ ಈ ಬರ್ಡನ್ ಅನ್ನು ಎದುರಿಸುವುದಕ್ಕೆ ಆಗುವುದಿಲ್ಲ. ಇದು ಬಹಳ ಸ್ಪಷ್ಟವಾಗಿ ಇದೆ, ಮತ್ತೆ ಅನುಭವದ ಆಧಾರದ ಮೇಲೆ ಏನೇನು ಮಾರ್ಪಾಡನ್ನು ಮಾಡಬೇಕೆಂಬುದನ್ನು ನೋಡೋಣ. ಆದರೆ ನಾವು ಇದೆಲ್ಲವನ್ನೂ ಚಿಂತನೆ ಮಾಡಿ 3ಲಕ್ಷ ರೂಪಾಯಿಗಳವರೆಗೂ ಇದೆ. ರೈತರು ಶೇಕಡ 90ರಷ್ಟು ಜನ ಒಂದು ಲಕ್ಷ ರೂಪಾಯಿಗಳವರೆಗೆ ಸಾಲವನ್ನು ತೆಗೆದುಕೊಳ್ಳುವುದು. ನಾನು ಇದರ ಬಗ್ಗೆ ಅಂಕಿಅಂಶಗಳ ವಿವರ ಕೊಡುತ್ತೇನೆ. ಇಲ್ಲಿ ಐವತ್ತು ಸಾವಿರ ರೂಪಾಯಿಗಳವರೆಗೆ ಎಷ್ಟು ಜನ ಸಾಲವನ್ನು ತೆಗೆದುಕೊಂಡಿದ್ದಾರೆ ಎಂಬುದನ್ನು ಕೊಡುತ್ತೇನೆ. ಇಲ್ಲಿ ಅವನ ಜಮೀನು ಎಷ್ಟು ಇರುತ್ತದೋ, ಅಷ್ಟಕ್ಕೆ ಸಾಲವನ್ನು ತೆಗೆದುಕೊಳ್ಳುತ್ತಾನೆ. ಇದರ ಬಗ್ಗೆ ನಮಗೆಲ್ಲರಿಗೂ ಅನುಭವ ಇದೆ. ಯಾರೊ ದೊಡ್ಡ ಶ್ರೀಮಂತರಿಗೆ ಇದರ ಅನುಕೂಲವಾಗದೇ ಇರಬಹುದು. ನನಗೆ ಶೇಕಡ 90ರಷ್ಟು ಸಾಮಾನ್ಯ, ಮಧ್ಯಮವರ್ಗ, ಬಡ ರೈತರಿಗೆ ಅನುಕೂಲ ಆಗಬೇಕೆಂಬ ಸದುದ್ದೇಶದಿಂದ ಇದನ್ನು ಹೊರಡಿಸಿದ್ದೇವೆ. ಇನ್ನು ಕೊರತೆ ಏನು ಇದೆಯೆಂಬುದನ್ನು ನೋಡೋಣ. 3 ಲಕ್ಷ ರೂಪಾಯಿಗಳವರೆಗೂ ಎಂದು ನಾನು ಸ್ಪಷ್ಟತೆಯನ್ನು ಕೊಡುತ್ತೇನೆ. ನಾನು ಇದಕ್ಕೆ ರಿಪ್ಲೈ ಕೊಡುವ ಕಾಲದಲ್ಲಿ ವಿವರಗಳನ್ನು ಕೊಡುತ್ತೇನೆ. ಈಗ ತಾವು ಪ್ರಶ್ನೆ ಪ್ರಸ್ತಾಪ ಮಾಡಿದ್ದರಿಂದ ಹೇಳಿದ್ದೇನೆ.

ಶ್ರೀ ಕೆ. ಶ್ರೀನಿವಾಸಗೌಡ: ಈಗ ರೈತನು ಟ್ರಾಕ್ಟರ್ ತೆಗೆದುಕೊಳ್ಳುತ್ತಾನೆ.

ಶ್ರೀ ಜೆ.ಸಿ.ಮಾಧುಸ್ವಾಮಿ: ಮಾನ್ಯ ಉಪಾಧ್ಯಕ್ಷರೆ, ಈಗ ಟ್ರಾಕ್ಟರ್‌ಗಳಿಗೆ ಎರಡೂವರೆ, ಮೂರು ಎಕರೆ ಜಮೀನು ಇರುವವರಿಗೆಲ್ಲ ಬ್ಯಾಂಕ್‌ನವರು ಟ್ರಾಕ್ಟರ್ ಅಡ್ವಾನ್ಸ್ ಕೊಡುವುದು ಶುರುವಾಗಿದೆ. ಇದಕ್ಕೆ ಹೇಳುವವರು, ಕೇಳುವವರು ಯಾರೂ ಇಲ್ಲ. ನಾನು ಇದನ್ನು ಉತ್ಪ್ರೇಕ್ಷೆಗೆ ಹೇಳುತ್ತಾ ಇಲ್ಲ. ಅವರಿಗೆ ಒಂದು ಆಸೆ ಇದ್ದದ್ದು ಶೇಕಡ 4 ರಂತೆ ಆಫ್ ಇಂಟ್ರೆಸ್ಟ್ ಇರುವಂಥಾದ್ದು. ಇನ್ನೊಂದು ಆಸೆ ಕನಫ್ಯೂಸನ್ ಆಗಿದೆ, ಶೇಕಡ 50ರಷ್ಟು ಹಣ subsidise ಆಗಿ ಬಿಡುತ್ತದೆಂದು ತಿಳಿದುಕೊಂಡು ಇದ್ದಾರೆ. ಈಗ 60ಸಾವಿರ ರೂಪಾಯಿಗಳನ್ನು ಟ್ರ್ಯಾಕ್ಟರ್ ಸಬ್ಸಿಡಿ ಕೊಡುತ್ತಿದ್ದೆವು. ಅದು ಈ ಸಾರಿ ಬಜೆಟ್ ಆದಮೇಲೆ ಹೇರಳವಾಗಿ ಸಬ್ಸಿಡಿ ಸಿಗುತ್ತದೆಂಬುದು ಒಂದು ಆಸೆ. ಇನ್ನೊಂದು ಶೇಕಡ 4ರಷ್ಟು ಬಡ್ಡಿಯನ್ನು ಕಟ್ಟುವಂಥಾದ್ದು ಎನ್ನುವ ಆಸೆಯಲ್ಲಿ, ಹೇರಳವಾಗಿ ಟ್ರ್ಯಾಕ್ಟರ್ ಅಡ್ವಾನ್ಸ್ ಆಗಿದೆ. ಆ ಟ್ರ್ಯಾಕ್ಟರ್‌ನವರಿಗೆ 5ಲಕ್ಷ ರೂಪಾಯಿಗಳಿಲ್ಲದೆ ಟ್ರ್ಯಾಕ್ಟರ್ ಅನ್ನು ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ. ಇಲ್ಲಿ ನಾಲ್ಕು ಲಕ್ಷ ಚಿಲ್ಲರೆ ಹಣ ಇಂಜಿನ್‌ಗೆ ಆಗುತ್ತದೆ, ಒಂದು ಲಕ್ಷ ರೂಪಾಯಿಯನ್ನು ನೀವು ಟ್ರೈಲರ್‌ಗೆ ಕೊಟ್ಟರೂ, ಮೇಜರ್ ಈಗ ಟ್ರ್ಯಾಕ್ಟರ್ ಅದರ ಇಂಪ್ಲಿಮೆಂಟ್ಸ್ ತೆಗೆದುಕೊಳ್ಳುವವರಿಗೆ ಬಹಳ ತೊಂದರೆಯಾಗುತ್ತದೆ. ಅವರು ಈಗ ಸುಳ್ಳು ಹೇಳಬೇಕಾಗುತ್ತದೆ. ಇಲ್ಲಿ 3ಲಕ್ಷ ರೂಪಾಯಿಗಳನ್ನು ಸಾಲವೆಂದು ತೆಗೆದುಕೊಂಡರೆ, ಅದಕ್ಕೆ ಶೇಕಡ 4ರಂತೆ ಬಡ್ಡಿಯಾಗುತ್ತದೆ. ಇದನ್ನು ಮೀರಿದರೆ ತುಂಬಾ ಜಾಸ್ತಿಯಾಗುತ್ತದೆ, ಕನಿಷ್ಟ ಈ ಟ್ರ್ಯಾಕ್ಟರ್‌ಗೆ ರಿಯಾಯಿತಿಯನ್ನು ಕೊಡುವಂಥಾದ್ದಕ್ಕೆ ತಾವು ಯೋಚನೆಯನ್ನು ಮಾಡಬೇಕು.

ಶ್ರೀ ಆರ್.ವಿ.ದೇಶಪಾಂಡೆ: ಮಾನ್ಯ ಉಪಾಧ್ಯಕ್ಷರೆ, ನಾವು ಶಾರ್ಟ್ ಟರ್ಮ್ ಲೋನ್ ಬಗ್ಗೆ ಹೇಳುತ್ತೀರಿ. ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಇಲ್ಲಿ ಯಾರು ಶಾರ್ಟ್ ಟರ್ಮ್ ಲೋನ್ ಎರಡು, ಮೂರು ಲಕ್ಷ ರೂಪಾಯಿಗಳನ್ನು ತೆಗೆದುಕೊಳ್ಳುತ್ತಾರೆ? ಆದರೆ ದೀರ್ಘಾವಧಿ ಸಾಲಗಳು, ಈಗ ಟ್ರ್ಯಾಕ್ಟರ್ ಬೇಕಾಗುತ್ತದೆ, ಇದು ಹೇಗೆ ಮಾಡಿದ್ದಾರೆ, ಅದು ನಿಮಗೆ ಗೊತ್ತಿದೆಯೇ? ನಿಮ್ಮ ಅಧಿಕಾರಿಗಳು ನಿಮಗೆ ಏನು ಹೇಳಿದ್ದಾರೆಂದರೆ, ಗೌರ್ವನ್‌ಮೆಟ್ ಆಫ್ ಇಂಡಿಯಾದವರು ಶೇ.7ರಂತೆ ಸಾಲವನ್ನು ಕೊಡಬೇಕೆಂದು ನಿರ್ಣಯ ಮಾಡುವಾಗ ಶಾರ್ಟ್ ಟರ್ಮ್‌ಗೆ 3ಲಕ್ಷ ರೂ ಮಾಡಿದ್ದಾರೆ. ಆ ಮೂರು ಲಕ್ಷವನ್ನು ಶಾರ್ಟ್ ಟರ್ಮ್‌ಗೆ ರಿಸ್ಟ್ರಿಕ್ಟ್ ಮಾಡಿದರು. ಅದನ್ನು ನಿಮ್ಮ ತಲೆಗೆ ಹಾಕಿದರು, ಇದನ್ನು ನೀವು ಮಾಡಿ ಎಂದು. ಅದಕ್ಕೆ ನೀವು ಏನು ಮಾಡಿದ್ದೀರಿ, ಅದನ್ನು ಲಾಂಗ್ ಟರ್ಮ್‌ಗೂ ಮಾಡಿದ್ದೀರಿ, ಶಾರ್ಟ್ ಟರ್ಮ್‌ಗೂ ಮಾಡಿದ್ದೀರಿ. ತಾವು ಶಾರ್ಟ್ ಟರ್ಮ್‌ಗೆ ಮಾಡಿದ್ದೀರಿ, ಅದನ್ನು ನನು ಒಪ್ಪಿಕೊಳ್ಳುತ್ತೇನೆ. ಇಲ್ಲಿ ಶಾರ್ಟ್ ಟರ್ಮ್ ಬೆಳೆ ಸಾಲವೆಂದು ಯಾರು ಮೂರು ಲಕ್ಷ ರೂಪಾಯಿಗಳನ್ನು ತೆಗೆದುಕೊಳ್ಳುತ್ತಾರೆ? ಆದರೆ ಲಾಂಗ್ ಟರ್ಮ್‌ನಲ್ಲಿ ಮಾನ್ಯ ಮಾಧುಸ್ವಾಮಿಯವರು ಹೇಳಿದಹಾಗೆ ಒಬ್ಬ ಸಣ್ಣ ಎರಡು ಎಕರೆ, ಮೂರು ಎಕರೆ, ನಾಲ್ಕು ಎಕರೆ, ಇರುವಂಥ ಜನರು ಪವರ್‌ಟಿಲ್ಲರ್ ಟ್ರ್ಯಾಕ್ಟರ್ ಅನ್ನು ತೆಗೆದುಕೊಳ್ಳುತ್ತಾರೆ. ಲ್ಯಾಂಡ್ ಬ್ಯಾಂಕ್‌ನಿಂದ 4-5 ಲಕ್ಷ ರೂಪಾಯಿಗಳ ಸಾಲ ತೆಗೆದುಕೊಳ್ಳುತ್ತಾರೆ. ಇಂಥ ಪರಿಸ್ಥಿತಿಯಲ್ಲಿ ತಾವು ಇದನ್ನು ಪರಿಶೀಲನೆ ಮಾಡಿ ರೈತರಿಗೆ ಅನುಕೂಲ ಮಾಡಿಕೊಡಬೇಕೆಂದು ಹೇಳುತ್ತೇನೆ. ಎರಡನೆಯದಾಗಿ, ಫೈನಾನ್ಷಿಯಲ್

ಡಿಸಿಪ್ಲೀನ್, ಪ್ರಾಂಪ್ಟ್ ರೀಪೇಮೆಂಟ್ ಇರಬೇಕು, ಮತ್ತೊಂದು ಎಂದು ತಾವು ಹೇಳಿದುದ್ದನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದರೆ ಅದನ್ನು ಇಲ್ಲಿ ಏಕೆ ಹೇಳುತ್ತಿದ್ದೀರಿ? ಈ ಹಿಂದೆ ರೈತರು ಪ್ರಾಂಪ್ಟ್‌ಆಗಿ ಕೊಟ್ಟಿದ್ದರೂ ಸಹ ಅವನು ಕಷ್ಟದಲ್ಲಿದ್ದಾನೆ, ತೊಂದರೆಯಲ್ಲಿದ್ದಾನೆ, ಬಹಳ ಅನ್ಯಾಯವಾಗಿದೆ, ಬರಗಾಲ ಬಂದುಬಿಟ್ಟಿದೆ, ಸಾಲ ಮನ್ನಾ ಮಾಡಿ ಎಂದು ನೀವು ಹೇಳುತ್ತಿದ್ದಿರಲ್ಲಾ. ಆದರೆ ಈಗ ನೀವು ಸಾಲ ಮನ್ನಾ ಮಾಡುವುದನ್ನು ಬಿಟ್ಟು, ಅವರು ಕಟ್ಟಲು ಎರಡು ದಿನ ಲೇಟ್ ಆದರೂ ಸಹ ಒಂದನೇ ತಾರೀಖಿನಿಂದ ಬಡ್ಡಿ ಕೊಡಬೇಕು ಎಂದು ಮಾಡಿದ್ದೀರಲ್ಲಾ. ತಾವು ಇಲ್ಲಿದ್ದಾಗ ಹೇಳಿದ್ದೇನು? ಅಲ್ಲಿ ಮಾಡಿದ್ದೇನು?

ಶ್ರೀ ಬಿ.ಎಸ್. ಯಡಿಯೂರಪ್ಪ (ಉಪಮುಖ್ಯಮಂತ್ರಿಗಳು): ಮಾನ್ಯ ಉಪಾಧ್ಯಕ್ಷರೆ, ನಾವು ಕೇಂದ್ರ ಸರ್ಕಾರದಿಂದ ಯಾವುದೇ ನೆರವನ್ನು ಬಯಸದೇ ಮಾಡಿದ್ದೇವೆ. ಕೇಂದ್ರ ಸರ್ಕಾರದವರು ಶೇಕಡ 7ರಷ್ಟು ಬಡ್ಡಿಯನ್ನು ಶಾರ್ಟ್ ಟರ್ಮ್‌ಗೆ ಮಾತ್ರ ಮಾಡಿದ್ದಾರೆ, ಲಾಂಗ್ ಟರ್ಮ್‌ಗೆ ಮಾಡಿಲ್ಲ. ಆದರೆ ನಾವು ಶಾರ್ಟ್‌ಟರ್ಮ್, ಲಾಂಗ್ ಟರ್ಮ್ ಎರಡಕ್ಕೂ ಮಾಡಿದ್ದೇವೆ. For your information, short-term, long-term subject to Rs. 3 lakh, ಮಾಡಿದ್ದೇವೆ. ಇದರಿಂದ ಸಾಲ ತೆಗೆದುಕೊಳ್ಳುವಂಥ ಶೇಕಡ 80ರಷ್ಟು ರೈತರು ಕವರ್ ಆಗುತ್ತಾರೆ. ನಾವೂ ನೀವೂ ಸೇರಿ ಈ ಮನೆಯಲ್ಲಿ ರೆಸಲ್ಯೂಷನ್ ಮಾಡಬೇಕಾಗಿರುವಂಥದ್ದು, ಕೇಂದ್ರಕ್ಕೆ ಒತ್ತಾಯ ತರುವಂಥಾದ್ದು ಎಂದರೆ, ಹಣಕಾಸಿನ ಭಾರ ಇರುವಂಥ ಒಂದು ರಾಜ್ಯ ಸರ್ಕಾರವೇ ಶೇಕಡ 4 ರ ದರದಲ್ಲಿ ರೈತರ ನೆರವಿಗೆ ಹೋಗುತ್ತಿರುವಂಥ ಈ ಕಾಲದಲ್ಲಿ ಕೇಂದ್ರ ಸರ್ಕಾರವೂ ಶೇಕಡ 4ರ ದರದಲ್ಲಿ ರಾಷ್ಟ್ರೀಕೃತ ಬ್ಯಾಂಕುಗಳಿಂದ ಸಾಲ ಕೊಡಬೇಕು ಎನ್ನುವಂಥ ಒತ್ತಾಯವನ್ನು, ನಿರ್ಣಯವನ್ನು ನಾವು ಇಲ್ಲಿ ಮಾಡಿ ಪ್ರಧಾನಿಗಳಿಗೆ ಮತ್ತು ಹಣಕಾಸು ಸಚಿವರಿಗೆ ಒತ್ತಾಯವನ್ನು ತರಬೇಕಾಗುತ್ತದೆ. ಅದು ನೀವು ನಿಜವಾಗಿ ಸಲಹೆ ಕೊಡಬೇಕಾದಂಥಾದ್ದು. ಆದರೆ ನಮ್ಮ ಹಣಕಾಸಿನ ಪರಿಮಿತಿಯಲ್ಲಿ ಇಷ್ಟಾದರೂ ನಾಲ್ಕು ಹೆಜ್ಜೆ ನಾವು ಮುಂದಿಟ್ಟಿದ್ದೇವೆ ಎಂದು ಹೇಳಲು ನಾನು ಇಚ್ಛೆಪಡುತ್ತೇನೆ.

ಶ್ರೀ ಎಂ.ಪಿ.ಪ್ರಕಾಶ್: ಶೇಕಡ 4ರ ಬಡ್ಡಿದರದಲ್ಲಿ ಕೊಡುವ ಸಾಲಕ್ಕೆ 3 ಲಕ್ಷ ರೂಪಾಯಿ ಗರಿಷ್ಠ ಮಿತಿ ಎಂದು ಇಟ್ಟುಕೊಂಡಿದ್ದರೂ ಕೂಡ ಶೇಕಡ 6ರ ಬಡ್ಡಿದರದಲ್ಲಿ ಕೊಡುವ ಸಾಲಕ್ಕೆ ಗರಿಷ್ಠ ಮಿತಿ ಇಟ್ಟಿಲ್ಲ. ಶೇಕಡ 6ರ ಬಡ್ಡಿದರದಲ್ಲಿ ಅವರು ಎಷ್ಟು ಸಾಲ ಬೇಕಾದರೂ ತೆಗೆದುಕೊಳ್ಳಬಹುದು ಎನ್ನುವುದು ಇದೆ. ಇದರ ಜೊತೆಗೆ, ಕೇಂದ್ರ ಸರ್ಕಾರದವರು ಶೇಕಡ 7ರಷ್ಟು ಬಡ್ಡಿದರ ಎಂದು ಮಾಡಿದ್ದರೂ ಕೂಡ ಅವರು ಇವತ್ತಿನವರೆಗೆ ಗೈಡ್‌ಲೈನ್ಸ್ ಇಷ್ಯೂ ಮಾಡಿಲ್ಲ. ಈ ನಿಮಿಷದವರೆಗೆ ಅದು ಇಷ್ಯೂ ಆಗಿಲ್ಲ. ಅದು ಬರೀ ಕನ್ನಡಿಯೊಳಗಿನ ಗಂಟು ಎನ್ನುವ ರೀತಿಯಲ್ಲಿ ಇದೆ.

ಶ್ರೀ ಆರ್.ವಿ.ದೇಶಪಾಂಡೆ: ನಮ್ಮ ದೃಷ್ಟಿಯಿಂದ ಅದು ಇಷ್ಯೂ ಆಗಿದೆ. ಒಂದು ವೇಳೆ ಇನ್ನೂ ಇಷ್ಯೂ ಆಗಲಿಲ್ಲವೆಂದರೆ ಅದು ಇಷ್ಯೂ ಆಗಬೇಕಾಗುತ್ತದೆ. It is a budget commitment. ನೀವು ಹೆಣ್ಣುಮಕ್ಕಳಿಗೆ ಸೈಕಲ್ ಕೊಡುತ್ತೇವೆ ಎಂದು ಹೇಳಿದಿರಿ. ಈವರೆಗೆ ಯಾರಾದರೂ ಅದನ್ನು ತೆಗೆದುಕೊಂಡಿದ್ದಾರೆಯೇ?

ಒಬ್ಬ ಮಾನ್ಯ ಸದಸ್ಯರು: ಕೊಟ್ಟಿದ್ದಾರೆ.

ಶ್ರೀ ಆರ್.ವಿ.ದೇಶಪಾಂಡೆ: ಹಾಗೆಯೇ ಭಾಗ್ಯಲಕ್ಷ್ಮಿ ಯೋಜನೆ ಎಂದು ಹೇಳಿದಿರಿ. ಈ ನಾಲ್ಕು ತಿಂಗಳಲ್ಲಿ ಹೆಣ್ಣುಮಕ್ಕಳಿಗೆ ಅದರಂತೆ ಇನ್‌ಷ್ಯೂರೆನ್ಸ್ ಮಾಡಿರುವಿರಾ?

ಶ್ರೀ ಜೆ.ಸಿ.ಮಾಧುಸ್ವಾಮಿ: ಬಜೆಟ್ ಕಮಿಟ್‌ಮೆಂಟ್ ಆದರೂ ಆರ್.ಬಿ.ಐ. ಕ್ಲಿಯರ್ ಮಾಡಿರಲಿಲ್ಲ. ಬಜೆಟ್ ಕಮಿಟ್‌ಮೆಂಟ್ ಎಂದು ಫೈನ್ಯಾನ್ಸ್ ಮಿನಿಸ್ಟರ್ ವಾದ ಮಾಡಿದರೂ ಆರ್.ಬಿ.ಐ ಕ್ಲಿಯರ್ ಮಾಡಿರಲಿಲ್ಲ. ಈಗ 8–10 ದಿವಸಗಳ ಹಿಂದೆ ಮೇನೇಜರ್ಸ್‌ನ ಕರೆದು ಚರ್ಚೆ ಮಾಡಿ ಇಷ್ಯೂ ಮಾಡುತ್ತೇವೆ ಎಂದು ಹೇಳಿದ್ದಾರೆ. Till now, it is not issued.

ಶ್ರೀ ಬಿ.ಎಸ್. ಯಡಿಯೂರಪ್ಪ: ಸೈಕಲ್ಲನ್ನು ವಿತರಣೆ ಮಾಡುವಂಥಾದ್ದು ಕ್ಯಾಬಿನೆಟ್ ಮುಂದೆ ಬರುತ್ತಿದೆ. ಅದಕ್ಕೆ ಸರ್ಕಾರಿ ಆಜ್ಞೆ ಹೊರಡಿಸುತ್ತಿದ್ದೇವೆ. ಮುಂದಿನ ತಿಂಗಳ 15ರಿಂದ ಸೈಕಲ್ಲನ್ನು ಕೊಡುವುದಕ್ಕೆ ವ್ಯವಸ್ಥೆ ಮಾಡುತ್ತೇವೆ. ಭಾಗ್ಯಲಕ್ಷ್ಮಿ ಯೋಜನೆಯನ್ನು ಜಾರಿಗೆ ತರುವುದಕ್ಕೆ ನಮ್ಮ ಅಧಿಕಾರಿಗಳು ಸ್ವಲ್ಪ ಮೀನಾಮೇಷ ಎಣಿಸುತಿದ್ದಾರೆ, ಸ್ವಲ್ಪ ನೆಗ್ಲಿಜೆನ್ಸ್ ತೋರಿಸುತ್ತಿದ್ದಾರೆ. ಈ ಬಗ್ಗೆ ನಾನು ಅಧಿಕಾರಿಗಳನ್ನು ಕೇಳಿದ್ದೇನೆ, ಚೀಫ್ ಸೆಕ್ರೆಟರಿಯವರಿಗೆ ಪತ್ರ ಬರೆದಿದ್ದೇನೆ. ನಾನು ಈ ಮನೆಯಲ್ಲಿ ಹೇಳಲು ಇಚ್ಛೆಪಡುತ್ತಿದ್ದೇನೆ, ಅಧಿಕಾರಿಗಳು ಕೆಲವು ವಿಷಯದಲ್ಲಿ ಆಸಕ್ತಿ ತೋರಿಸುತ್ತಿಲ್ಲ. ಇರುವಂಥಾದ್ದನ್ನು ಹೇಳಲು ಏನೂ ಅನುಮಾನ ಬೇಡ. ಸಾಮಾನ್ಯ ಜನರಿಗಾಗಿ, ಬಡವರಿಗಾಗಿ ಬಜೆಟ್‌ನಲ್ಲಿ ಹೇಳಿದಂಥ ಕಾರ್ಯಕ್ರಮಗಳ ಬಗ್ಗೆ ಬಿಗಿ ನಿಲುವು ತೆಗೆದುಕೊಂಡು ಅದನ್ನು ಕಾರ್ಯರೂಪಕ್ಕೆ ತರಲು ಗಮನ ಕೊಡದಂಥ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ. ಕ್ಯಾಬಿನೆಟ್‌ನಲ್ಲಿ ಡಿಸಿಷನ್ ತೆಗೆದುಕೊಂಡು ಅಂಥ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ. ಅವರನ್ನು ಅಷ್ಟು ಸುಲಭಕ್ಕೆ ಬಿಡುವುದಿಲ್ಲ. ಬಡವರ ಕೆಲಸ ಮಾಡುವುದಕ್ಕೆ ಬಹಳ ಜನ ಅಧಿಕಾರಿಗಳಿಗೆ ಆಸಕ್ತಿ ಇಲ್ಲ. ಇದನ್ನು ನಾನು ಪ್ರತ್ಯಕ್ಷವಾಗಿ ನೋಡಿದ್ದೇನೆ. ಕಳೆದ ಮೂರು ತಿಂಗಳಿಂದ ನಮ್ಮ ಅಧಿಕಾರಿಗಳ ಕೆಲವರ ವರ್ತನೆ ಹೇಗಿದೆಯೆಂದರೆ, ಕೆಲವರು day and night ಕೆಲಸ ಮಾಡುತ್ತಿದ್ದಾರೆ, ಕೆಲವರು ಕಾನೂನನ್ನು ಹೇಳಿಕೊಂಡು ಕೈಕಟ್ಟಿಕೊಂಡು ಕುಳಿತಿದ್ದಾರೆ. ಉಪ ಮುಖ್ಯಮಂತ್ರಿಯಾಗಿ, ಹಣಕಾಸು ಸಚಿವನಾಗಿ ಇದು ನನ್ನ ಅನುಭವಕ್ಕೆ ಬಂದಿದೆ. ನಾನು ಚೀಫ್ ಸೆಕ್ರೆಟರಿಯವರ ಹತ್ತಿರ ಮಾತನಾಡಿದ್ದೇನೆ, ಅವರಿಗೆ ಪತ್ರ ಬರೆದಿದ್ದೇನೆ. ಈ ರೀತಿ ನಿರ್ಲಕ್ಷ್ಯವನ್ನು ತೋರಿಸುವಂಥ ಅಧಿಕಾರಿಗಳನ್ನು ವಿಧಾನಸೌಧದಲ್ಲಿರಲು ಬಿಡುವುದಿಲ್ಲ. ಈ ಮನೆಯಲ್ಲಿ ಹೇಳುತ್ತಿದ್ದೇನೆ, ಅವರ ಮೇಲೆ ಸೂಕ್ತವಾದಂಥ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಕೆ. ಶ್ರೀನಿವಾಸಗೌಡ: ಅಂಥವರನ್ನೇ ಸ್ಯಾಡಿಸ್ಟ್ ಎಂದು ಹೇಳಿದ್ದು ನಾನು. ಅಂಥವರ ಮೇಲೆ ಕ್ರಮ ಜರುಗಿಸಿ.

ಶ್ರೀ ಆರ್.ವಿ.ದೇಶಪಾಂಡೆ: ನಿಮ್ಮ ಉದ್ದೇಶ ಏನಿದೆ, ಅದು ಸಫಲವಾಗಲಿ, ಅದಕ್ಕೆ ನಮ್ಮ ಸಂಪೂರ್ಣ ಸಹಕಾರವಿದೆ. ಬಡವರ ಪರವಾಗಿ ತಾವು ಏನೇನು ಯೋಜನೆಗಳನ್ನು ಮಾಡಿದ್ದೀರಿ, ಅದು ಬಡವರನ್ನು ಮುಟ್ಟಬೇಕಾಗಿದೆ. ಅದಕ್ಕೆ ಏನು ಸಹಕಾರ ಬೇಕೋ ಅದನ್ನು ನಾವು ಯಾವಾಗಲೂ

ಕೊಡುತ್ತೇವೆ. ನಾನು ಒಂದು ಮಾತನ್ನು ಹೇಳುತ್ತೇನೆ, ಕೇಂದ್ರ ಸರ್ಕಾರ ಕಮರ್ಷಿಯಲ್ ಬ್ಯಾಂಕುಗಳಿಗಷ್ಟೇ ಸೀಮಿತ ಮಾಡಿದೆ ಎಂದು ಹೇಳಿದಿರಲ್ಲಾ, ತಮ್ಮ ಲೋನ್ಸ್ ಸಹಾ ಕೋ-ಅಪರೇಟಿವ್ ಬ್ಯಾಂಕುಗಳಿಗಷ್ಟೇ ಸೀಮಿತವಾಗಿವೆ. ಕರ್ನಾಟಕ ರಾಜ್ಯದಲ್ಲಿ ರೈತರು ಕಮರ್ಷಿಯಲ್ ಬ್ಯಾಂಕುಗಳಿಂದ ಧೀರ್ಘಾವಧಿ ಮತ್ತು ಅಲ್ಪಾವಧಿ ಸಾಲವನ್ನು ತೆಗೆದುಕೊಂಡರೆ ಅಲ್ಲಿ ನಿಮ್ಮ ಸ್ಕೀಂ ಎಕ್ಸ್‌ಟೆಂಡ್ ಆಗುವುದಿಲ್ಲ. ಅವುಗಳಿಗೂ ಎಕ್ಸಟೆಂಡ್ ಮಾಡಲು ತಾವು ಸ್ವಲ್ಪ ಪ್ರಯತ್ನ ಮಾಡಿ. ನೀವು ಇಲ್ಲಿದ್ದಾಗ ಅದನ್ನು ಕೇಳಿದ್ದೀರಿ. ಇಲ್ಲಿಂದ ಕೇಳಿ, ಧರಂಸಿಂಗ್‌ರವರ ಸರ್ಕಾರ ಇದ್ದಾಗ ಕೇಂದ್ರ ಸರ್ಕಾರವನ್ನು ಒತ್ತಾಯ ಮಾಡಲು ನಮ್ಮ ಕಡೆಯಿಂದ ನೀವು ರೆಸಲ್ಯೂಷನ್ ಮಾಡಿಸಿದಿರಿ, ಇವತ್ತು ತಮ್ಮ ಕೈಯ್ಯಲ್ಲೇ ಅಧಿಕಾರವಿದೆ, ತಾವು ಉಪಮುಖ್ಯಮಂತ್ರಿಗಳಾಗಿದ್ದೀರಿ, ಹಣಕಾಸು ಸಚಿವರಾಗಿದ್ದೀರಿ, ಕಮರ್ಷಿಯಲ್ ಬ್ಯಾಂಕುಗಳಿಂದ ಲೋನ್ ತೆಗೆದುಕೊಳ್ಳುವ ಫಾರ್ಮರ್ಸ್‌ಗೂ ಶೇಖಡ 4ರಂತೆ ಬಡ್ಡಿ ಸಾಲ ಕೊಡುವುದನ್ನು ಎಕ್ಸ್‌ಟೆಂಡ್ ಮಾಡಿ. ಅದನ್ನು ಏಕೆ ಮಾಡುತ್ತಿಲ್ಲ? ಕೇಂದ್ರ ಸರ್ಕಾರ ಕೊಡುತ್ತಿರುವ ಶೇಕಡ 7ರ ಬಡ್ಡಿದರದ ಯೋಜನೆಯಂತೆ ಕೋ-ಆಪರೇಟಿವ್ ಬ್ಯಾಂಕ್ ಗಳೂ ಕೊಡುತ್ತಿವೆ, ಕಮರ್ಷಿಯಲ್ ಬ್ಯಾಂಕ್‌ಗಳೂ ಕೊಡುತ್ತಿವೆ.

ಶ್ರೀ ಪಿ.ಜಿ.ಆರ್.ಸಿಂಧ್ಯ (ಕನಕಪುರ): ಮಾನ್ಯ ಉಪಾಧ್ಯಕ್ಷರೆ, ನಿನ್ನೆಯ ದಿನ ನಾನು ಚಿಕನ್ಗುನ್ಯಾದ ಬಗ್ಗೆ ಮಾತನಾಡುವಾಗ, ಈ ಸರ್ಕಾರದ ಮಾತನ್ನು ಯಾರೂ ಕೇಳುತ್ತಿಲ್ಲ, ಅದಕ್ಕೆ ಕವಡೆ ಕಾಸಿನ ಕಿಮ್ಮತ್ತು ಇಲ್ಲ ಎಂದು ಹೇಳಿದಾಗ, ಮಾನ್ಯ ಉಪ ಮುಖ್ಯಮಂತ್ರಿಗಳು, ಹಣಕಾಸಿನ ಸಚಿವರಿಗೆ ಸ್ವಲ್ಪ ಸಿಟ್ಟು ಬಂದುಬಿಟ್ಟಿತು. ಆವೇಶದ ಭರದಲ್ಲಿ ಅವರು, ನೀವು ಬೇಜವಾಬ್ದಾರಿಯಿಂದ ಮಾತನಾಡುತ್ತೀರಿ ಎನ್ನುವ ಮಟ್ಟದಲ್ಲಿ, ಆ ರೀತಿ ಅರ್ಥ ಬರುವ ಹಾಗೆ ಮಾತನಾಡಿದರು. ಈಗ ಅವರು ಏನು ಹೇಳುತ್ತಿದ್ದಾರೆ ಎಂದರೆ ಅಧಿಕಾರಿಗಳು ಈ ಸರ್ಕಾರದ ಮಾತನ್ನು ಕೇಳುವುದಿಲ್ಲ. ಬಡವರ ಪರವಾಗಿರುವಂಥ ಕಾರ್ಯಕ್ರಮಗಳನ್ನು ಅನುಷ್ಠಾನಕ್ಕೆ ತರುವುದರಲ್ಲಿ ಅವರು ನಿಷ್ಠೆಯನ್ನು ತೋರಿಸುತ್ತಿಲ್ಲ ಎಂದು ಹೇಳಿದ್ದಾರೆ. ನಿಮ್ಮದಾದರೂ ಪರವಾಗಿಲ್ಲ, ನೀವು ಹೊಸದಾಗಿ, ಉಪ ಮುಖ್ಯಮಂತ್ರಿಗಳಾಗಿದ್ದೀರ, ಮೊದಲನೇ ಸಾರಿ ಹಣಕಾಸಿನ ಇಲಾಖೆಯನ್ನು ತೆಗೆದುಕೊಂಡಿದ್ದೀರಿ, ನಿಮಗೆ ಕೆಲಸ ಮಾಡಬೇಕು ಎನ್ನುತಕ್ಕಂಥ ಕಮಿಟ್‌ಮೆಂಟ್ ಇದೆ. ಅದನ್ನು ಯಾರೂ ಪ್ರಶ್ನೆ ಮಾಡಲಾಗುವುದಿಲ್ಲ. ಆದರೆ, ನಿಮ್ಮ ಮುಖ್ಯಮಂತ್ರಿಗಳು ಬೆಳಗ್ಗೆಯಿಂದ ಸಾಯಂಕಾಲದವರೆಗೂ ಯಾವ ಅಧಿಕಾರಿಗಳು ಸರ್ಕಾರದ ಮಾತನ್ನು ಕೇಳುವುದಿಲ್ಲ, ಅವರನ್ನು ಮನೆಗೆ ಕಳುಹಿಸುತ್ತೇನೆ ಎಂದು ಹೇಳುತ್ತಿದ್ದಾರೆ. ಆದರೆ ಲೋಕಾಯುಕ್ತರು ನಾನು ಈವರೆಗೆ ಸುಮಾರು 50 ರಿಪೋರ್ಟ್‌ಗಳನ್ನು ಕಳುಹಿಸಿದ್ದೇನೆ, ಸರ್ಕಾರ ಕ್ರಮವನ್ನೇ ತೆಗೆದುಕೊಂಡಿಲ್ಲ ಎಂದು ಹೇಳುತ್ತಾರೆ. ಅವರು ಈ ತಿಂಗಳ 30ನೇ ತಾರೀಖು ನಿವೃತ್ತಿ ಹೊಂದುತ್ತಾರಂತೆ ಇದರ ಅರ್ಥವೇನು? ಯಾವ ಅಧಿಕಾರಗಳು ಸರ್ಕಾರದ ಮಾತನ್ನು ಕೇಳುವುದಿಲ್ಲ, ಅವರನ್ನೆಲ್ಲಾ ಮನೆಗೆ ಕಳುಹಿಸಿಬಿಡುತ್ತೇವೆ ಎಂದು ನೀವು ಹೇಳುತ್ತೀರಿ. ದಯವಿಟ್ಟು ನೀವು ಬೇಜಾರು ಮಾಡಿಕೊಳ್ಳಬೇಡಿ. ನಾನು ಇನ್ನೊಂದು ವಿಚಾರವನ್ನು ಹೇಳುತ್ತೇನೆ. ದಯವಿಟ್ಟು ತಾವು ಸಿಟ್ಟು ಮಾಡಿಕೊಳ್ಳಬಾರದು. ನೀವು ಯಾವಾಗಲೂ ಸಿಟ್ಟಿನಲ್ಲೇ ಇರುತ್ತೀರಿ.

ನಗುನಗುತ್ತಾ ಇರಿ ಸ್ವಾಮಿ. ಹಣಕಾಸು ಅಷ್ಟೊಂದು ಇರುವಾಗ ಏಕೆ ಯೋಚನೆ ಮಾಡುತ್ತೀರಿ? ನೀವು ನಿದ್ದೆ ಮಾಡಿದರೂ ಟ್ರೆಷರಿಗೆ ದುಡ್ಡು ಬಂದು ಬೀಳುತ್ತದೆ. ನೀವೇಕೆ ಯೋಚನೆ ಮಾಡುತ್ತೀರಿ? ನಾವು ಎಲ್ಲವನ್ನೂ ಬಿಗಿ ಮಾಡಿ ಹೋಗಿದ್ದೇವೆ. ದುಡ್ಡು ಬರುತ್ತದೆ, ನೀವೇನು ಯೋಚನೆ ಮಾಡಬೇಡಿ. ಚಿಕುನ್‌ಗುನ್ಯಾ ಬಗ್ಗೆ ಬೆಳಗ್ಗೆ ಮಾತನಾಡಿದರು. ನಾನು ಜಿಲ್ಲಾ ಪಂಚಾಯಿತಿ ಆಫೀಸಿನಿಂದ ನೇರವಾಗಿ ಬರುತ್ತಿದ್ದೇನೆ. ಅಲ್ಲಿ ನಾನು ಅಧಿಕಾರಿಗಳ ಜೊತೆ ಕುಳಿತುಕೊಂಡು ರಿವ್ಯೂ ಮಾಡಿದೆ. ಇದುವರೆಗೆ, ಬೆಂಗಳೂರು ಗ್ರಾಮಾಂತರ ಜಿಲ್ಲೆಗೆ ಒಂದು ರೂಪಾಯಿಯೂ ರಿಲೀಸ್ ಆಗಿಲ್ಲ. ಸುಮಾರು 2 ರಿಂದ 3 ಲಕ್ಷ ಜನರಿಗೆ ಇದರ ಎಫೆಕ್ಟ್ ಆಗಿದೆ. ಏಕೆಂದರೆ, ನಿಮ್ಮಿಂದ ಸ್ಪೆಸಿಫಿಕ್ ಆರ್ಡರ್ ಹೋಗಿಲ್ಲ. ಆದ್ದರಿಂದ, ಬಜೆಟ್‌ಡ್ ಪ್ರೋಗ್ರಾಂ ಏನಿದೆ, ಅದನ್ನು ಇಂಪ್ಲಿಮೆಂಟ್ ಮಾಡಲು ನೀವು ಒಂದು ಟೈಂ ಫ್ರೇಮಿನ ಪಂಚಾಂಗವನ್ನು ಹಾಕಿ, ಇಂಥಿಂಥ ತಿಂಗಳಲ್ಲಿ ಇಂಥಿಂಥಾದ್ದಕ್ಕೆ ದುಡ್ಡು ರಿಲೀಸ್ ಮಾಡುತ್ತೇವೆ ಎಂದರೆ, ಅಧಿಕಾರಿಗಳು ಏಕೆ ಮಾತನ್ನು ಕೇಳುವುದಿಲ್ಲ? ಈಗ ಏನಾಗಿದೆ ಎಂದರೆ, ಸರ್ಕಾರದಲ್ಲಿ ಅಭದ್ರತೆ ಹೆಚ್ಚಾಗಿ ಬಿಟ್ಟಿದೆ. ಆ ಅಭದ್ರತೆಯನ್ನು ಹೋಗಲಾಡಿಸಲು ಏನಾದರೂ ಕ್ರಮ ತೆಗೆದುಕೊಳ್ಳಿ. ಆಗ ಇದು ಸರಿಹೋಗುತ್ತದೆ. ಸರ್ಕಾರದ ಅಭದ್ರತೆಯಿಂದಾಗಿ ಅಧಿಕಾರಿಗಳೂ ಮಾತು ಕೇಳುವುದಿಲ್ಲ. ಆ ಅಭದ್ರತೆ ಇಲ್ಲದೇ ಇರುವ ಹಾಗೆ ಏನಾದರೂ ಕ್ರಮ ತೆಗೆದುಕೊಳ್ಳಿ. ಅದೇ ಇದಕ್ಕೆ ಔಷಧಿ.

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಸಿಂಧ್ಯಾರವರು ಹೇಳಿದುದು ಸರಿ. ಅಭದ್ರತೆ ಎನ್ನುವ ಪ್ರಶ್ನೆ ಬಂದಾಗ ಏನಾಗುತ್ತದೆಂದರೆ, ಈ ಸರ್ಕಾರ ಎಷ್ಟು ದಿವಸ ಉಳಿಯುತ್ತದೆಯೋ, ಏನೋ, ಏಕೆ ಇವರ ಮಾತು ಕೇಳಬೇಕು ಎನ್ನುವ ಭಾವನೆ, ಉದ್ಧಟತನ ಅಧಿಕಾರಿಗಳಲ್ಲಿ ಬರುತ್ತದೆ. ಇದನ್ನು ತಾವು ಪ್ರಮಾಣಿಕವಾಗಿ ಹೇಳಿದುದನ್ನು ನಾನು ಸ್ವಾಗತ ಮಾಡುತ್ತೇನೆ. ಸರ್ಕಾರದ ಆಡಳಿತ ಎಷ್ಟು ಕುಸಿದಿದೆ ಮತ್ತು ಅಧಿಕಾರಿಗಳು ಯಾವ ರೀತಿ ಸರ್ಕಾರ ಯಾವ ರೀತಿ ಬೆಂಬಲ ಕೊಡುತ್ತಿಲ್ಲ ಎಂದು ಹಣಕಾಸು ಸಚಿವರಾಗಿ ನೀವೇನು ಹೇಳಿದ್ದೀರಿ, ನಿಜಕ್ಕೂ ಅದು ಪ್ರಾಮಾಣಿಕವಾಗಿದೆ. ಈ ಬಗ್ಗೆ ನಾವು ರಾಜಕೀಯ ಮಾಡುವುದಕ್ಕೆ ಹೋಗುವುದಿಲ್ಲ. ಯಾವ ಅಧಿಕಾರಗಳ ಮೇಲೆ ಬೇಕಾದರೂ ನೀವು ಕ್ರಮ ತೆಗೆದುಕೊಳ್ಳಬಹುದು. ಆದರೆ ಅಧಿಕಾರಿಗಳಲ್ಲಿ ಏನಾಗಿದೆಯೆಂದರೆ, ಸರ್ಕಾರ ಅಭದ್ರವಾಗಿದೆ, ಎಷ್ಟು ದಿವಸ ಇರುತ್ತದೋ ಎನ್ನುವ ಭಾವನೆ ಉದ್ಭವವಾಗಿದೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಮಾನ್ಯ ಉಪಾಧ್ಯಕ್ಷರೆ, ಸಿಂಧ್ಯಾರವರು ಸರಿಯಾಗಿ ಹೇಳಿದ್ದಾರೆ. ಇದು ಸಮ್ಮಿಶ್ರ ಸರ್ಕಾರದ ರೋಗ, ಏಕೆ ಈ ರೋಗ ಬರುತ್ತದೆಂದರೆ ಅವರಲ್ಲಿ ಹೊಂದಾಣಿಕೆ ಇಲ್ಲ. ಮುಖ್ಯಮಂತ್ರಿಗಳು ಹೇಳತಕ್ಕಂಥಾದ್ದನ್ನು ಉಪ ಮುಖ್ಯಮಂತ್ರಿಗಳು ಹೇಳುವುದಿಲ್ಲ, ಉಪ ಮುಖ್ಯಮಂತ್ರಿಗಳು ಹೇಳಿದುದನ್ನು ಮುಖ್ಯಮಂತ್ರಿಗಳು ಒಪ್ಪುವುದಿಲ್ಲ. ನಾವು ಸ್ಪೆಷಲಿಸ್ಟ್‌ಆಗಿ 35 ವರ್ಷಗಳಿಂದ ಇಂಥಾದ್ದನ್ನು ನೋಡುತ್ತಿದ್ದೇವೆ. ಇದರ ಪರಿಣಾಮವಾಗಿ ಇವತ್ತು ಆಡಳಿತ ಯಂತ್ರ ಸಂಪೂರ್ಣವಾಗಿ ಕುಸಿದಿದೆ. ಒಂದು ಪತ್ರ ಒಂದು ಕಛೇರಿಯಿಂದ ಇನ್ನೊಂದು ಕಛೇರಿಗೆ ಹೋಗಬೇಕಾದರೆ ವಾರಗಟ್ಟಳೆ ತೆಗೆದುಕೊಳ್ಳತಕ್ಕಂಥ ಪರಿಸ್ಥಿತಿ ನಿರ್ಮಾಣವಾಗಿದೆ. ಇದಕ್ಕೆ ಮೂಲ ಕಾರಣವೇನೆಂದರೆ, ಈ ಸರ್ಕಾರದಲ್ಲಿ ಹೊಂದಾಣಿಕೆ ಇಲ್ಲ. ದಿನಾ ಬೆಳಗಾದರೆ ನೀವು ಪತ್ರಿಕೆಗಳನ್ನು

ನೋಡಿ, ಯಾವ ಯಾವ ಸ್ಟೇಟ್‌ಮೆಂಟನ್ನು ಸರ್ಕಾರದ ಪರವಾಗಿ ಮಂತ್ರಿಗಳು ಕೊಟ್ಟಿರುತ್ತಾರೋ, ಒಂದರಲ್ಲೂ ಹೊಂದಾಣಿಕೆ ಇರುವುದಿಲ್ಲ. ಎಲ್ಲಾ ತದ್ವಿರುದ್ಧವಾಗದಂಥ ಹೇಳಿಕೆಗಳೇ ಇರುತ್ತವೆ. ಮುಖ್ಯಮಂತ್ರಿಗಳು ಸರ್ಕಾರಿ ನೌಕರರ ಸಮ್ಮೇಳನಕ್ಕೆ ಹೋಗಿ ಹೇಳುತ್ತಾರೆ, ಸರ್ಕಾರಿ ನೌಕರರು, ಅಧಿಕಾರಿಗಳು ಸರಿಯಾಗಿ ಕೆಲಸ ಮಾಡದಿದ್ದರೆ ಎಲ್ಲರನ್ನೂ ನಾನು ಮನೆಗೆ ಕಳುಹಿಸುತ್ತೇನೆ ಎಂದು ಹೇಳುತ್ತಾರೆ. ಈಗ ಇಲ್ಲಿ ಉಪಮುಖ್ಯಮಂತ್ರಿಗಳೂ, ಅಧಿಕಾರಿಗಳು ನಮ್ಮ ಮಾತನ್ನು ಕೇಳುವುದಿಲ್ಲವೆಂದು ಒಪ್ಪಿಕೊಳ್ಳುತ್ತಿದ್ದಾರೆ. ಹಾಗಾದರೆ ಇದನ್ನು ಸರಿ ಮಾಡುವವರು ಯಾರು? ಕ್ರಮ ತೆಗೆದುಕೊಳ್ಳುತ್ತೇವೆ ಎಂದು ಹೇಳುತ್ತಾರೆ. ಕ್ರಮ ತೆಗೆದುಕೊಳ್ಳುತ್ತೇವೆ, ಪರಿಶೀಲನೆ ಮಾಡುತ್ತೇವೆ, ಸೂಕ್ತ ಕ್ರಮ ಜರುಗಿಸಲಾಗುವುದು ಎನ್ನುವುದೆಲ್ಲಾ ಸರ್ಕಾರದ ಭಾಷೆ. ಈ ಸರ್ಕಾರದ ಭಾಷೆಯೇನಾದರೂ ಬದಲಾವಣೆಯಾಗುತ್ತದೋ, ಇಲ್ಲವೋ ಎನ್ನುವುದನ್ನು ಹೇಳಿ.

ಶ್ರೀ ಬಿ.ಎಸ್. ಯಡಿಯೂರಪ್ಪ: ಮಾನ್ಯ ಉಪಾಧ್ಯಕ್ಷರೆ, ಈ ಮನೆಯಲ್ಲಿ ಆ ಕಡೆ ಈ ಕಡೆ ಎಲ್ಲಿಯೇ ಕುಳಿತಿರಲಿ ಕೆಲವು ಸತ್ಯಸಂಗತಿಗಳನ್ನು ಒಪ್ಪಿಕೊಳ್ಳಬೇಕಾಗುತ್ತದೆ. ಯಾವುದೇ ಕಾರಣಕ್ಕೂ ಈ ಸಮ್ಮಿಶ್ರ ಸರ್ಕಾರದಲ್ಲಿ ಅಭದ್ರತೆ ಇದೆಯೆನ್ನುವ ಭಾವನೆ ಈ ರಾಜ್ಯದ ಜನತೆಗೆ ಇಲ್ಲ. ಅಧಿಕಾರಿಗಳಿಗೆ ಯಾರಿಗಾದರೂ ಅಲ್ಲೊಬ್ಬರು ಇಲ್ಲೊಬ್ಬರಿಗೆ ಇದ್ದರೆ ಅವರಿಗೆ ಸರಿಯಾದ ಪಾಠ ಕಲಿಸುವಂಥ ಶಕ್ತಿ ಈ ಸರ್ಕಾರಕ್ಕಿದೆ. ಅದನ್ನು ನೋಡುತ್ತೇವೆ. ನಾನು ಏನು ಹೇಳುವುದಕ್ಕೆ ಹೊರಟಿದ್ದೇನೆಂದರೆ, ಅಭದ್ರತೆ ಇದೆಯೆಂದು ಸನ್ಮಾನ್ಯ ಸಿಂಧ್ಯಾರವರು ಹೇಳಿದರು. ಈ ಭದ್ರತೆ ತರುವುದಕ್ಕೆ ಮಾನ್ಯ ಸಿಂಧ್ಯಾರವರ ಪಾಲು ಸಹ ಬಹಳ ಇದೆ. ಆದರೆ ನಾನು ಇಲ್ಲಿ ನಿಂತು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ನಾನು ಮಾತನಾಡಿ ಪೂರ್ತಿ ಮಾಡುವುದಕ್ಕೆ ಬಿಡಿ. ಆ ಮೇಲೆ ನೀವು ಮಾತನಾಡಿ.

(ಅಡಚಣೆ)

ಶ್ರೀ ವಾಟಾಳ್ ನಾಗರಾಜ್: ತಾವು ಹೇಳುತ್ತಿರುವುದು ಅರ್ಥವಾಗಿಲ್ಲ. ಅರ್ಥವಾಗುವ ಹಾಗೆ ಹೇಳಿ.

ಶ್ರೀ ಬಿ.ಎಸ್. ಯಡಿಯೂರಪ್ಪ: ನಾನು ಅರ್ಥವಾಗುವ ಹಾಗೆ ಹೇಳುತ್ತೇನೆ. ಇಲ್ಲಿ ಎರಡು ಮೂರು ಸಂಗತಿಗಳೂ ಇವೆ. ಈ ಚರ್ಚೆಗಳು ಆದಮೇಲೆ ನಾನು ಉತ್ತರ ಕೊಡುವಂಥ ಕಾಲದಲ್ಲಿ ಹಿಂದಿನ ಅನೇಕ ವರ್ಷಗಳ ಅನುಭವದ ಆಧಾರದ ಮೇಲೆ ನಾನು ಹಣಕಾಸಿನ ಸಚಿವನಾದ ಮೇಲೆ ಯಾವ ಬಜೆಟ್‌ನಲ್ಲಿ ಹೇಳಿದ್ದೇವೆ. ಅದನ್ನು ಅನುಷ್ಠಾನಕ್ಕೆ ತರುವುದರಲ್ಲಿ ವಿಶೇಷ ಪ್ರಯತ್ನ ಮಾಡಿ ನಾನು ಯಶಸ್ವಿಯಾಗಿದ್ದೇನೆ ಎಂದು ಅಂಕಿಅಂಶದ ಸಹಿತ ನಿಮಗೆ ವಿವರಗಳನ್ನು ಕೊಡುವವದ್ದೇನೆ. ಎರಡನೆಯದಾಗಿ, ಎಂದೂ ಸಹ ಆಡಳಿತ ಕುಸಿದಿದೆ ಎಂದು ನಾನು ಹೇಳಲಿಲ್ಲ. ಬಹಳ ಒಳ್ಳೆಯ ಅಧಿಕಾರಿಗಳೂ ಇದ್ದಾರೆ. ನಾಳೆ ಆಗಬೇಕಾದ್ದನ್ನು ಇವತ್ತೇ ಮಾಡಿ ನಮ್ಮ ಮುಂದೆ ಈ ಕೆಲಸ ಮಾಡಿದ್ದೇನೆಂದು ಹೇಳುವಂಥ ಬಹಳ ಒಳ್ಳೊಳ್ಳೆಯ ಅಧಿಕಾರಿಗಳಿದ್ದಾರೆ. ಕೆಲವು ಅಧಿಕಾರಿಗಳಲ್ಲಿ ಆಲಸ್ಯ ಇದೆ. ಇದರಲ್ಲೇನೂ ಎರಡು ಮಾತಿಲ್ಲ. ಆಲಸ್ಯ ಇರುವ ಅಧಿಕಾರಿಗಳು ಸರಿಯಾದ ರೀತಿಯಲ್ಲಿ ಕೆಲಸ ಮಾಡುವಂತೆ ನೋಡಿಕೊಳ್ಳುತ್ತೇವೆ. ಇಲ್ಲದಿದ್ದರೆ ಈ ಜಾಗದಿಂದ ಖಾಲಿ ಮಾಡು ಎಂದು ಹೇಳುತ್ತೇವೆ.

ಅದಕ್ಕೇನೂ ತೊಂದರೆ ಇಲ್ಲ. ಚಿಕೂನ್ ಗುನ್ಯಾ ಬಗ್ಗೆ ಹಣದ ತೊಂದರೆ ಇದೆ, ಬಿಡುಗಡೆಯಾಗಿಲ್ಲವೆಂದು ಸನ್ಮಾನ್ಯ ಸಿಂಧ್ಯಾರವರು ಹೇಳಿರುವ ಬಗ್ಗೆ ತಕ್ಷಣ ಹಣವನ್ನು ಬಿಡುಗಡೆ ಮಾಡಿಸುತ್ತೇನೆ. ಈಗ ಆರೋಗ್ಯ ಸಚಿವರಾದ ಮಾನ್ಯ ಅಶೋಕ್‌ರವರು ಉತ್ತರ ಕೊಟ್ಟಾಗ ಮಾನ್ಯ ಸಿಂಧ್ಯಾರವರು ಇಲ್ಲಿರಲಿಲ್ಲ. ಆದರೆ ಇಲ್ಲಿ ಪ್ರಶ್ನೆ ಏನೆಂದರೆ, ನಾವೆಲ್ಲ ಒಟ್ಟಾಗಿ ಆಡಳಿತ ಪಕ್ಷ, ವಿರೋಧ ಪಕ್ಷ ಎಂದು ಯೋಚನೆಯನ್ನು ಮಾಡದೆಯೇ ಇಡೀ ರಾಜ್ಯದ ಜನರ ಹಿತದೃಷ್ಟಿಯಿಂದ ಕೆಲಸ ಮಾಡುವಂಥ ಒಂದು ಕಾಲ ಇದಾಗಿದೆ. ನಂತರ ಸಮ್ಮಿಶ್ರ ಸರ್ಕಾರದ ಬಗ್ಗೆ ಹೇಳಿದರು. ಈ ದೇಶದಲ್ಲಿ ಕೇಂದ್ರ ಇರಬಹುದು, ರಾಜ್ಯ ಇರಬಹುದು. ಸಮ್ಮಿಶ್ರ ಸರ್ಕಾರ ಅನಿವಾರ್ಯ ಎನ್ನುವ ಸ್ಥಿತಿಗೆ ನಾವು ಬಂದಿದ್ದೇವೆ. ಈ ಪರಿಸ್ಥಿತಿಯಲ್ಲೂ ಸಹ ಹೇಗೆ ಹೊಂದಾಣಿಕೆಯನ್ನು ಮಾಡಿಕೊಂಡು ತಾತ್ವಿಕವಾಗಿ ಅನೇಕ ಭಿನ್ನಾಭಿಪ್ರಾಯಗಳು ಇದ್ದರೂ ಸಹ ಬದಿಗೊತ್ತಿ ರಾಜ್ಯದ ಅಭಿವೃದ್ಧಿ ಪ್ರಶ್ನೆ ಬಂದಾಗ ಯಾವುದೇ ಭಿನ್ನಾಭಿಪ್ರಾಯಕ್ಕೆ ಅವಕಾಶ ಕೊಡುವುದಿಲ್ಲವೆನ್ನುವ ಆತ್ಮವಿಶ್ವಾಸದಲ್ಲಿ ನಾವು ಕೆಲಸ ಮಾಡಬೇಕಾಗುತ್ತದೆ. ಆ ರೀತಿ ಇವತ್ತು ನಾನು ಮತ್ತು ಮಾನ್ಯ ಕುಮಾರಸ್ವಾಮಿಯವರು ಸೇರಿದಂತೆ ಜೆಡಿಎಸ್-ಬಿಜೆಪಿಯವರು ಒಟ್ಟಾಗಿ ಕೆಲಸ ಮಾಡುತ್ತಿದ್ದೇವೆ. ರಾಜ್ಯದ ಜನ ಆನಂದದಿಂದ ಸಮಾಧಾನವಾಗಿ ಇದ್ದಾರೆ.

(ಅಡಚಣೆ)

ಶ್ರೀ ವಾಟಾಳ್ ನಾಗರಾಜ್: ರಾಜ್ಯದ ಜನ ಆನಂದದಿಂದ ಇದ್ದಾರೆನ್ನುವುದು ಸತ್ಯಕ್ಕೆ ದೂರವಾದ ಮಾತು.

(ಅಡಚಣೆ)

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಕರ್ನಾಟಕ ರಾಜ್ಯದ ಜನರು ಈ ಸಮ್ಮಿಶ್ರ ಸರ್ಕಾರದ ಆಡಳಿತದಿಂದ ಆನಂದವಾಗಿದ್ದಾರೆಂದು ಮಾನ್ಯ ಉಪ ಮುಖ್ಯಮಂತ್ರಿಗಳು ಏನು ಹೇಳುತ್ತಿದ್ದಾರೆ ಇದು ಅಪ್ಪಟ ಸುಳ್ಳು. ಯಾವಾಗ ಬಿದ್ದು ಹೋಗುತ್ತದೆ ಸರ್ಕಾರ, ಯಾವಾಗ ಬಿದ್ದುಹೋಗುತ್ತದೆ ಸರ್ಕಾರ ಎಂದು ಒಂದು ದಿವಸಕ್ಕೆ ಸುಮಾರು 50 ಜನ ನನಗೆ ಕೇಳುತ್ತಾರೆ.

ಶ್ರೀ ವಾಟಾಳ್ ನಾಗರಾಜ್: ಇದನ್ನು ಮಾನ್ಯ ಯಡಿಯೂರಪ್ಪನವರು ಪ್ರಾಮಾಣಿಕತೆಯಿಂದ ಮಾತನಾಡಿಲ್ಲ. ಇದಂತೂ ಸ್ಪಷ್ಟ. ಅವರು ಒಬ್ಬರೇ ಕುಳಿತುಕೊಂಡು 'ಹೇಳಿದ್ದು ಸರಿಯೇ ಅಥವಾ ಇಲ್ಲವೇ' ಎಂದು ಅವರು ತೀರ್ಮಾನ ಮಾಡಲಿ. ಖಂಡಿತ ಇಲ್ಲ. ಈ ರಾಜ್ಯದ ಜನ 'ಏನಪ್ಪಾ, ಈ ಸ್ಥಿತಿ ಆಯಿತು' ಎಂದು ಕಣ್ಣೀರಿನಲ್ಲಿ ಕೈತೊಳೆಯುತ್ತಿದ್ದಾರೆ. ಕುರುಡರು ಮತ್ತು ಕುಂಟರು ಇಬ್ಬರು ಸೇರಿ ಈ ರಾಜ್ಯಭಾರ ಮಾಡಿದ ಹಾಗೆ ಇದೆ. ಕುರುಡ ಕುಂಟನನ್ನು ಹೊತ್ತುಕೊಂಡು ಹೋಗುತ್ತಿದ್ದಾನೆ. ಅವನನ್ನು ಕೆಳಗಿಳಿಸಬೇಕು. ಕಣ್ಣು ಕಾಣುವುದಿಲ್ಲ. ಕುರುಡರು ಕುಂಟರ ರಾಜ್ಯ ಇದ್ದ ಹಾಗೆ ಇದೆಯೇ ಹೊರತು ಇದರಲ್ಲಿ ಪ್ರಾಮಾಣಿಕತೆ ಇಲ್ಲ. ಮಾನ್ಯ ಯಡಿಯೂರಪ್ಪನವರೇ, ಪ್ರಾಮಾಣಿಕತೆ ಇಲ್ಲ. ಇದನ್ನು ಯಡಿಯೂರಪ್ಪನವರು ಒಪ್ಪಿಕೊಳ್ಳಬೇಕು. ಈ ಕಡೆ ಇದ್ದಾಗ_ಇದೇನು ಷಡ್ಯಂತರ, ಪಿತೂರಿ ಹೀಗೆ ಏನೇನು ಪದಗಳನ್ನು ಉಪಯೋಗಿಸುತ್ತಿದ್ದೀರಿ? ಆ ಎಲ್ಲಾ ಪದಗಳು ಈಗ

ಎಲ್ಲಿ ಹೋಯಿತು? ನಿಮ್ಮ ಆ ಶಬ್ದಕೋಶದಲ್ಲಿ ಎಲ್ಲೆಲ್ಲಿ ಅದು ಹೋಯಿತು? ಯಾವ ಸಮುದ್ರಕ್ಕೆ ಹಾಕಿದಿರಿ? ಇದನ್ನು ನೀವು ಪ್ರಾಮಾಣಿಕವಾಗಿ ಹೇಳಬೇಕು.

ಶ್ರೀ ಬಿ.ಎಸ್.ಯಡಿಯೂರಪ್ಪ: ಸಮ್ಮಿಶ್ರ ಸರ್ಕಾರದ ಬಗ್ಗೆ ಬರೀ ಜನತೆ ಸಮಾಧಾನ ಆಗಿರುವುದು ಮಾತ್ರವಲ್ಲ, ವರುಣ ದೇವನಿಗೂ ತೃಪ್ತಿಯಾಗಿ ರಾಜ್ಯದ ಉದ್ದಗಲಕ್ಕೆ ಮಳೆಯಾಗಿ ಬಿತ್ತನೆಯಾಗುತ್ತಿದೆ. ಜನ ನೆಮ್ಮದಿಯಿಂದ ಇದ್ದಾರೆ.

(ಅಡಚಣೆ)

ಡಾಃ ಶರಣಪ್ರಕಾಶ್ ರುದ್ರಪ್ಪ ಪಾಟೀಲ್: ಮಳೆ ಬಂದರೂ ಕೂಡ ನೀವು ರೈತರಿಗೆ ಬಿತ್ತನೆ ಬೀಜ ಕೊಡಲಿಕ್ಕೆ ಆಗಲಿಲ್ಲ, ಈ ಸರ್ಕಾರದಿಂದ ಗೊಬ್ಬರ ಕೊಡಲಿಕ್ಕೆ ಆಗಲಿಲ್ಲ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಬಿ.ಜೆ.ಪಿ.ಯವರು ಕಡೆಗೆ ದೇವರ ಮೇಲೆ ಹಾಕುವುದು ನಮಗೆ ಗೊತ್ತಿದೆ. ಒಂದೇ ಒಂದು ವಿಚಾರ–'ಹೊಂದಾಣಿಕೆಯಿಂದ ನಾವು ಸರ್ಕಾರ ನಡೆಸುತ್ತಿದ್ದೇವೆ' ಎಂದು ಹೇಳಿದರು. ನೈಸ್ ಕಂಪನಿ ವಿಚಾರದಲ್ಲಿ ಮಾನ್ಯ ಮುಖ್ಯಮಂತ್ರಿಗಳ ನಿಲುವೇನು ಮತ್ತು ಇವರ ನಿಲುವೇನು ಎಂಬುದನ್ನು ಹೇಳಲಿ.

ಶ್ರೀ ಕೆ.ಆರ್.ರಮೇಶ್ ಕುಮಾರ್: ಅಭದ್ರತೆಯ ಪ್ರಶ್ನೆ ಬಂತು. ಈ ಅಭದ್ರತೆ, ಸಮ್ಮಿಶ್ರ ಸರ್ಕಾರಗಳು ಎನ್ನುವ ವ್ಯಾಖ್ಯಾನ ಪ್ರಾರಂಭವಾಯಿತು. ಚುನಾವಣೆಯ ಪೂರ್ವದಲ್ಲಿ ಹಲವು ರಾಜಕೀಯ ಪಕ್ಷಗಳು ಒಂದು ಕಡೆಗೆ ಕೂಡಿ ಒಂದು ಕನಿಷ್ಠ ಕಾರ್ಯಕ್ರಮವನ್ನು ರೂಪಿಸಿಕೊಂಡು ತಾತ್ವಿಕವಾಗಿ ಚುನಾವಣೆಯನ್ನು ಎದುರಿಸಿ ಬಂದರೆ ಯಾವುದೇ ಸರ್ಕಾರವಾಗಿರಲಿ ಅದು ಸ್ವಲ್ಪ ದಿವಸ ಉಳಿಯುತ್ತದೆ. NDA ಸರ್ಕಾರ, ಪೂರ್ತಿ ಕಾಲ ಏಕೆ ನಡೆಯಿತು ಎಂದರೆ ನೀವು pre-poll alliance ಮಾಡಿಕೊಂಡಿದ್ದಿರಿ. CPM ನವರು ಏಕೆ continuous ಆಗಿ success ಆಗುತ್ತಾರೆಂದರೆ ಅವರದು pre-polalliance. ತಾವು ನಮ್ಮ ಜೊತೆ ಮಾಡಿಕೊಂಡಿದ್ದುದ್ದು Past-poll alliance ಈಗ ಆಗಿರುವುದು ಸಹ Past-poll alliance ಇದು adjustment of personalities. No adjustment between parties. ವ್ಯಕ್ತಿಗಳ ಮಧ್ಯೆ ನಿಮಗೆ ಯಾರು ಯಾವಾಗ ಏನು ಮನಸ್ಸಿಗೆ ಬರುತ್ತದೋ ಗೊತ್ತಿಲ್ಲ. ಆದ್ದರಿಂದ ವ್ಯಕ್ತಿಗಳ ಮಧ್ಯೆ ಹೊಂದಾಣಿಕೆ ಆಗಿ ರಚಿತವಾಗಿರತಕ್ಕಂಥ ಸರ್ಕಾರ ಯಾವಾಗಲೂ ಕೂಡ ವೈಜ್ಞಾನಿಕವಾಗಿ ಅಭದ್ರವಾದ ಸರ್ಕಾರವೇ ಆಗಿದೆ. ಅದು ಭದ್ರವಾದ ಸರ್ಕಾರ ಆಗಲಿಕ್ಕೆ ಸಾಧ್ಯವೇ ಇಲ್ಲ. ನೀವು ಚುನಾವಣೆ ಪೂರ್ವದಲ್ಲಿಯೇ ಒಂದಾಗಿ ಒಂದು ತತ್ವದ ಆಧಾರದ ಮೇಲೆ ಜನರ ಹತ್ತಿರ ಹೋಗಿ ಆ ಮೇಲೆ ನೀವು ಬಂದು ಸರ್ಕಾರ ರಚನೆ ಮಾಡಿದ್ದರೆ ಅದು ಭದ್ರವಾದ ಸರ್ಕಾರವಾಗುತ್ತಿತ್ತು. ಈಗ West Bengal ಸರ್ಕಾರ ಭದ್ರವಾದ ಸರ್ಕಾರ. NDA ಸರ್ಕಾರ ಇತ್ತು. ಅದು ನಿಮ್ಮದೇ ಆದ ಸರ್ಕಾರವಾಗಿದ್ದರೂ ಅದು ಭದ್ರವಾದ ಸರ್ಕಾರವಾಗಿತ್ತು. ಈ ಸರ್ಕಾರ ನಮ್ಮ ಸರ್ಕಾರ ಹೇಗಿತ್ತೋ ಅಷ್ಟೇ ಭದ್ರ. ನಾವು ಹೇಗೆ ಡಬ್ ಎಂದು ಬಿದ್ದು ಹೋದೆವೋ ಹಾಗೆ ನೀವು ಯಾವಾಗ ಬೀಳುತ್ತೀರೋ ಗೊತ್ತಿಲ್ಲ. ಬೀಳುವವರೆಗೆ ನೀವು ಭದ್ರ.

(ಅಡಚಣೆ)

ಶ್ರೀ ಎಂ.ಪಿ.ಪ್ರಕಾಶ್: 142 ಜನ ಸದಸ್ಯರು ಸಹಿ ಮಾಡಿಕೊಟ್ಟಿದ್ದಾರೆ. ನನಗೆ ಬಹುಮತವಿದೆಯೆಂದು ಇವರ ಪಕ್ಷದ ಅಧ್ಯಕ್ಷರು ರಾಷ್ಟ್ರಪತಿಗಳಿಗೆ ಮನವಿ ಮಾಡಿ ಕೊಟ್ಟಿದ್ದರಲ್ಲಾ. ಆಗ ಚುನಾವಣೆ ಪೂರ್ವದಲ್ಲಿ ಒಪ್ಪಂದವಾಗಿತ್ತೋ ಅಥವಾ ಚುನಾವಣೆ ನಂತರದ ಒಪ್ಪಂದವಾಗಿತ್ತೋ? ಹಾಗಾದರೆ ಲೋಕಸಭೆಯಲ್ಲಿ ತಮ್ಮ majority ಯನ್ನು ತೋರಿಸಿಕೊಡಿ ಎಂದು ರಾಷ್ಟ್ರಪತಿಗಳು ಹೇಳಿದರೆ ಅದು ಆಗುವುದಿಲ್ಲವೆಂದು ಕೈಬಿಟ್ಟರು. ಅಂದರೆ ಈಗ ಎಲ್ಲಾ ಪಕ್ಷಗಳೂ ಕೂಡ ಈ convenience ಮಾಡಿಕೊಂಡಿವೆ. Marriage of convenience. ಆದರೆ ತಾವು ಹೇಳಿದ್ದು ನಿಜ. ಚುನಾವಣೆಗಿಂತ ಪೂರ್ವದಲ್ಲಿ ಆದಂಥ ಒಪ್ಪಂದವಾದರೆ ಅದಕ್ಕೆ ಸ್ವಲ್ಪ ಭದ್ರತೆ, ತಾತ್ವಿಕ ಹಿನ್ನೆಲೆ ಇರುತ್ತದೆ. ಅದು ಇಲ್ಲದಿದ್ದರೆ ಕಷ್ಟಗಳು ಇರುತ್ತವೆ, ಕಷ್ಟಗಳ ನಡುವೆಯೇ ಬದುಕಬೇಕಾಗಿರುವಂಥ ಅನಿವಾರ್ಯತೆ ಇದೆ.

ಶ್ರೀ ಕೆ.ಆರ್.ರಮೇಶ್ ಕುಮಾರ್: ನಾನು ಹೇಳಿದ್ದೇನೆಂದರೆ, ವೈಜ್ಞಾನಿಕವಾಗಿ ಯಾವುದೇ ರಾಜಕೀಯ ವ್ಯವಸ್ಥೆಯಲ್ಲಿ ಚುನಾವಣೆ ಪೂರ್ವದಲ್ಲಿಯೇ ಆಗತಕ್ಕಂಥ ಹೊಂದಾಣಿ ಸ್ವಲ್ಪ ಮಟ್ಟಿಗೆ ಸ್ಥಿರತೆ ಇರುತ್ತದೆ. ಚುನಾವಣೆ ನಂತರ ಮಾಡಿಕೊಳ್ಳತಕ್ಕಂಥ ಹೊಂದಾಣಿಕೆ, It is an understanding between personalities that can break any time. Therefore, insecurity haunts always ಎಂದು ಹೇಳಿದೆ. That is how we feel.

SRI M.P. PRAKASH: Apart from an individual, it is understanding of inevitability the circumstances are such they are forced to do. The alternative would be to go for further polls which is not desirably in a democratic set up.

SRI K.R. RAMESH KUMAR: I appreciate your intellectual sense.

(ಅಡಚಣೆ)

SRI R.V. DESHPANDE: You have also admitted. Thank you very much.

ಶ್ರೀ ಎಸ್.ಎಸ್. ಪಾಟೀಲ್: ದಯವಿಟ್ಟು ಮಾನ್ಯ ಪ್ರಕಾಶ್‌ರವರು ಇಲ್ಲಿ ನಾನು ಹೇಳುವುದನ್ನು ಸ್ವಲ್ಪ ಕೇಳಬೇಕು. ಏಕೆಂದರೆ ನಾವ್ಯಾರಾದರೂ ರಾಜಕೀಯ ಮಂದಿ ಮಾತನಾಡಿದರೆ ಇದು ರಾಜಕೀಯವಾಗುತ್ತದೆಂದು ನೀವು ಹೇಳುತ್ತೀರಿ. ಇವತ್ತಿನ ಪತ್ರಿಕೆಯ Editorial ನಲ್ಲಿ ಬರೆದಿದ್ದಾರೆ. ಇದನ್ನು ನಾನು ತಮಗೆ ಓದಿ ಹೇಳುತ್ತೇನೆ.

(ಅಡಚಣೆ)

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಪೇಪರ್‌ನಲ್ಲಿ ಬಂದಿರುವುದನ್ನೆಲ್ಲಾ ಓದಬಾರದು. ಅದರಿಂದ ಅಪಾಯ ಇದೆ.

(ಅಡಚಣೆ)

ಶ್ರೀ ಎಸ್.ಎಸ್. ಪಾಟೀಲ್: ಅದರಿಂದ ಅಪಾಯ ಏನೂ ಇಲ್ಲ. ಇದ್ದುದನ್ನು ಹೇಳಿದ್ದಾರೆ. ದಯವಿಟ್ಟು ನಾನು ಓದುವುದನ್ನು ಮಾನ್ಯ ಪ್ರಕಾಶ್‌ರವರೇ ತಾವು ಕೇಳಬೇಕು.

5-30 ಪಿ.ಎಂ.

> "ಯಾವ ಪಕ್ಷಕ್ಕೂ ಬಹುಮತವಿಲ್ಲದೆ ಸರ್ಕಾರವನ್ನು ನಡೆಸಿಕೊಂಡು ಹೋಗುವುದು ದುಸ್ತರವೆನ್ನುವ ಪರಿಸ್ಥಿತಿ ತಲೆದೋರಿದಾಗ ಒಂದು ಪಕ್ಷವು ತನ್ನ ತತ್ವ ಧೋರಣೆಗಳಿಗೆ ಸಮೀಪವಾಗಿರುವ ಪಕ್ಷದೊಂದಿಗೆ ಸೇರಿಕೊಂಡು ಸರ್ಕಾರ ನಡೆಸಬಹುದು. ನಾವು ಹೊಂದಿಕೆ ಮಾಡಿಕೊಂಡಿದ್ದೇವೆಂದು ಪರಸ್ಪರ ವಿರೋಧ ಸಿದ್ಧಾಂತದ ಜನರು ಹೇಳಿದ್ದಾರೆ. ಇವರಿಬ್ಬರೂ ಜನರನ್ನು ಮೋಸ ಮಾಡಿ ಅವರ ಮೇಲೆ ಸವಾರಿ ಮಾಡುತ್ತಿದ್ದಾರೆಂದು ತಿಳಿಯಬೇಕು. ಒಂದೇ ದಿಕ್ಕಿಗೆ ತಲೆಹಾಗಿ ಮಲಗದಿದ್ದವರು ತಾವು ಒಂದೇ ಹಾಸಿಗೆಯಲ್ಲಿ ಅನ್ಯೋನ್ಯವಾಗಿ ಮಲಗುತ್ತೇವೆಂದು ಹೇಳಿದರೆ ಅದು ನಂಬತಕ್ಕ ಮಾತಲ್ಲ. ಪರಸ್ಪರ ವಿರೋಧ ಸಿದ್ಧಾಂತದ ಜನರು ಕೂಡಿ ಹೇಗೆ ಹೋಗುತ್ತಾರೆ? ಎತ್ತು ಏರಿಗೆ ಎಳೆದರೆ ಕೋಣ ಕೆರೆಗೆ ಇಳಿಯುತ್ತದೆ. ವಿರಸ ದಾಂಪತ್ಯದ ಗಂಡಹೆಂಡಂದಿರಲ್ಲಿ ಸಿಕ್ಕ ಕೂಸು ಘಾಸಿಯಾಯಿತು ಎಂಬಂತೆ ಜನರ ಸ್ಥಿತಿಯಾಗಿದೆ".

ಇದನ್ನು 'ಪ್ರಪಂಚ' ಎನ್ನುವ ಪತ್ರಿಕೆಯಲ್ಲಿ ಮಾನ್ಯ ಪಾಟೀಲ್ ಪುಟ್ಟಪ್ಪನವರು ಬರೆದಿದ್ದಾರೆ. ರಾಜ್ಯದಲ್ಲಿ ಜನ ಬಹಳ ಶಾಂತಿಯಿಂದಿದ್ದಾರೆಂದು ತಾವು ಹೇಳುತ್ತಿದ್ದೀರಿ. ಜನರ ಸ್ಥಿತಿ ಹೀಗಾಗಿದೆ. ನಿಮ್ಮ ಸಿದ್ಧಾಂತ ಬೇರೆ ಇದೆ, ಹಿಂದೆ ಏನು ಮಾಡಿದ್ದಾರೆಂದು ಹೇಳಿದ್ದೀರಲ್ಲಾ, ಸಿದ್ಧಾಂತ ಕಾಂಗ್ರೆಸ್‌ನವರಿಗೂ ಜನತಾದಳದವರಿಗೂ ಬಹಳ ಅಂತರವಿಲ್ಲ. ಸಿದ್ಧಾಂತ ನಿಮಗೆ ಬಹಳ ದೂರ ಇದ್ದವರ ಜೊತೆ ಸೇರಿ ಗೆಳೆತನವನ್ನು ಮಾಡುವುದಕ್ಕೆ ಹೊರಟಿದ್ದೀರಿ. ಮಾನ್ಯ ಪ್ರಕಾಶ್‌ರವರೇ, ಅದು ನಡೆಯುವುದಿಲ್ಲ. ಕಾಂಗ್ರೆಸ್ ಸಿದ್ಧಾಂತ, ದಳದ ಸಿದ್ಧಾಂತಕ್ಕೂ ಬಹಳ ಅಂತರವಿಲ್ಲ.

ಒಬ್ಬ ಮಾನ್ಯ ಸದಸ್ಯರು: ಅವರು ಅನಿವಾರ್ಯವಾಗಿ ಅಧಿಕಾರದಲ್ಲಿರಬೇಕು ಎಂದು ಹೇಳಿದ್ದಾರೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಮಾನ್ಯ ಪ್ರಕಾಶ್‌ರವರು ಕಷ್ಟಗಳ ಮಧ್ಯೆ ಬದುಕಬೇಕಾದಂತ ಅನಿವಾರ್ಯತೆ ಇದೆ ಎಂದು ಹೇಳಿದರು. ಕಷ್ಟಗಳು ಇವರಿಬ್ಬರಿಗೂ ಬಂದಿದೆಯೇ? ಕರ್ನಾಟಕ ರಾಜ್ಯದ ಜನತೆಗೆ ಬಂದಿದೆಯೇ? ಕರ್ನಾಟಕ ರಾಜ್ಯದ ಜನತೆಗೆ ಬಂದಿರತಕ್ಕಂಥ ಕಷ್ಟಗಳಿಗೋಸ್ಕರ ಇವರು ಅನಿವಾರ್ಯತೆಯನ್ನು ತೆಗೆದುಕೊಂಡಿದ್ದಾರೋ ಅಥವಾ ಇವರಿಬ್ಬರಿಗೂ ಬಂದಿರತಕ್ಕಂಥ

ಕಷ್ಟಗಳಿಗೋಸ್ಕರ ಅನಿವಾರ್ಯತೆಯನ್ನು ತೆಗೆದುಕೊಂಡಿದ್ದಾರೋ? ಏನು ಕಷ್ಟ ಬಂದಿದೆ? ಆ ಕಷ್ಟಗಳೇನು ಎಂದಾದರೂ ಅವರು ಹೇಳಲಿ?

ಶ್ರೀ ಎಂ.ಪಿ.ಪ್ರಕಾಶ್(ಗೃಹ ಮತ್ತು ಕಾನೂನು, ಸಂಸದೀಯ ವ್ಯವಹಾರಗಳ ಸಚಿವರು) ಮಾನ್ಯ ಉಪಾಧ್ಯಕ್ಷರೇ ಮಧ್ಯದಲ್ಲಿ ಎಂದರೆ, ಸಂದರ್ಭಕ್ಕನುಗುಣವಾದಂಥ ರೀತಿಯಲ್ಲಿ ಪ್ರತಿಕ್ರಿಯಿಸಿ, ಕಡಿಮೆ ಅಪಾಯಕಾರಿಯಾಗಿರತಕ್ಕಂಥ ವಿಚಾರಗಳು ಬಂದಿರುತ್ತವೆ. ಈಗ ಉದಾಹರಣೆಗೆ, ಚುನಾವಣೆಯನ್ನು ಮಾಡಬೇಕಾಗಿರತಕ್ಕಂಥದ್ದು; ಪದೇ ಪದೇ 5 ವರ್ಷಗಳೊಳಗಾಗಿಯೇ 2-3 ಚುನಾವಣೆ ನೋಡುವುದಕ್ಕಾಗುವುದಿಲ್ಲ. ಅಂಥ ಸನ್ನಿವೇಶದಲ್ಲಿ ಕೆಲವು ಕನಿಷ್ಠ ಕಾರ್ಯಕ್ರಮಗಳ ಆಧಾರದ ಮೇಲೆ ಸರ್ಕಾರಗಳು ರಚನೆಯಾಗುತ್ತವೆ. ಇಲ್ಲಿ ಬಂದಿರತಕ್ಕಂಥದ್ದು ನಮ್ಮ ಕಷ್ಟ ಅಲ್ಲ. ಮತದಾರ ಯಾವುದೇ ಪಕ್ಷಕ್ಕೂ ಬಹುಮತ ಕೊಡದಿರತಕ್ಕಂಥ ಆತನ ನಿರ್ಧಾರವೇನಿದೆ, ಅದು ಇಂಥ ಸನ್ನಿವೇಶವನ್ನು ಸೃಷ್ಟಿ ಮಾಡಿದೆ. ಅವರು ಹೇಳಿದರು....

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ತಾವು ಮೊದಲೊಂದು ಸರ್ಕಾರವನ್ನು ಕಾಂಗ್ರೆಸ್‌ನವರ ಜೊತೆ ಮಾಡಿದಿರಿ ಮತ್ತೆ ಚುನಾವಣೆ ಬೇಡವೆಂದು ಹೇಳಿ ಕಾಂಗ್ರೆಸ್‌ನವರ ಜೊತೆ ಹೊಂದಾಣಿಕೆ ಮಾಡಿಕೊಂಡು ಒಂದು ಸರ್ಕಾರ ಮಾಡಿದಿರಿ. ಅದು ಹಾಗೆಯೇ ಮುಂದುವರಿಯಬೇಕಾಗಿತ್ತಲ್ಲ.

ಶ್ರೀ ಎಂ.ಪಿ.ಪ್ರಕಾಶ್: ನೋಡಿ ಕೇರಳದಲ್ಲಿ communist ರು ಕರಣಾಕರನ್‌ರವರಿಂದ ಹೊರಗಡೆ ಬಂದಿರತಕ್ಕಂಥ ಸಂದರ್ಭದಲ್ಲಿ municipality ಮೊದಲಾದಂಥ ಸ್ಥಳೀಯ ಸಂಸ್ಥೆಗಳ ಜೊತೆಗೆ ತಾವೇನು ಒಪ್ಪಂದ ಮಾಡಿಕೊಂಡಿರಿ? ಆ ಸಂಕಷ್ಟವೇ ಇಲ್ಲಿ ಕೂಡ ಬಂದಿದೆ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ನಾನು ಒಪ್ಪಂದಗಳ ಬಗ್ಗೆ ಹೇಳಲಿಲ್ಲ. ನೀವು ಅನಿವಾರ್ಯತೆ ಎಂದು ಹೇಳಿದಿರಲ್ಲಾ ....

ಶ್ರೀ ಎಂ.ಪಿ.ಪ್ರಕಾಶ್: ಅನಿವಾರ್ಯತೆ ಏನಿತ್ತು?

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಚುನಾವಣೆ ಬರುತ್ತದೆಂದು ಹೇಳುವ ಕಾರಣಕ್ಕೋಸ್ಕರ ಚುನಾವಣೆ ಆಗಬಾರದೆಂದು ಹೇಳಿದಿರಲ್ಲಾ. ಆ ಕಾರಣವನ್ನು ಜನ ಮೊದಲು ಒಪ್ಪಬೇಕು.

ಶ್ರೀ ಎಂ.ಪಿ.ಪ್ರಕಾಶ್: ಕರುಣಾಕರನ್‌ರವರು...

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಪ್ರಾರಂಭದಲ್ಲಿ ಒಪ್ಪಿದ್ದರು.

ಶ್ರೀ ಎಂ.ಪಿ.ಪ್ರಕಾಶ್: ಆಯಿತು. ನನ್ನ ಉತ್ತರವನ್ನು ದಯಮಾಡಿ ಕೇಳಿ. ಕರುಣಾಕರನ್‌ರವರು ಕಾಂಗ್ರೆಸ್‌ನಿಂದ ಸಿಡಿದು ಹೊರಗಡೆ ಬಂದಾಗ ಅಧಿಕಾರ ಬೇಕು ಎನ್ನುವಂಥ ಕಾರಣಕ್ಕಾಗಿಯೇ ಎಡಪಂಥೀಯ ಪಕ್ಷಗಳಾದಂಥ LDF ನವರು ಇವರ ಮೂಲಕವಾಗಿ ಕರುಣಾಕರನ್‌ರವರ ಜೊತೆಗೆ ಸೇರಿಕೊಂಡು ಅವರು ಸ್ಥಳೀಯ ಸಂಸ್ಥೆಯ ಚುನಾವಣೆಗಳನ್ನು ಎದುರಿಸಿದರು ಯಾವ ಕಾರಣಕ್ಕಾಗಿ? ಬಹುಮತ ಬೇಕು ಎನ್ನುವ ಕಾರಣಕ್ಕಾಗಿ. ಮತ್ತೊಂದು ಕಾರಣ ಯಾವುದು? ಚತುರತೆಯದು. It is a strategy. ಏಕೆಂದರೆ, ಚುನಾವಣೆಯಲ್ಲಿ ಗೆಲ್ಲಬೇಕಾಗಿದ್ದರೆ I will join hands with devil ಎಂದೂ ಕೂಡ ಕರೆಯುತ್ತಾರೆ. ಆ ಕಾರಣಕ್ಕಾಗಿಯೇ ಅದು ಮಾಡಿದ್ದು. ಎರಡನೆಯದು,

ಮಾನ್ಯ ಎಸ್.ಎಸ್.ಪಾಟೀಲರು ವಿರಸದ ದಾಂಪತ್ಯದ ಬಗ್ಗೆ ಹೇಳಿದರು. ಗಂಡ-ಹೆಂಡಿರ ಜಗಳ ಉಂಡು ಮಲಗುವವರೆಗೆ ಎಂದು ಹೇಳಿದರು. ಇಲ್ಲಿ ಇರತಕ್ಕಂಥದ್ದು ಪಾಟೀಲ ಪುಟ್ಟಪ್ಪನವರಿಗೆ ಗೊತ್ತಿದೆ. ಇಲ್ಲಿ ನಾವು ಇರತಕ್ಕಂಥದ್ದು ಕರ್ನಾಟಕ ಅಭಿವೃದ್ಧಿ ರಂಗವೆಂದು ನಾವೇನು ಮಾಡಿಕೊಂಡಿದ್ದೇವೆ ಅದರ ಪ್ರಕಾರ ನಾವು ಸರ್ಕಾರವನ್ನು ನಡೆಸುತ್ತೇವೆ. ಒಳ್ಳೆಯ, ಉತ್ತಮವಾದಂಥ ಸರ್ಕಾರ ಮತ್ತು ಆಡಳಿತವನ್ನು ಕರ್ನಾಟಕ ಜನತೆಗೆ ಕೊಡುತ್ತೇವೆ.

ಶ್ರೀ ವಾಟಾಳ್ ನಾಗರಾಜ್: ಗಂಡ-ಹೆಂಡತಿ ಜಗಳ ಉಂಡು ಮಲಗುವವರೆಗೆ ಎಂದರೆ ಯಾವಾಗ ಎಂದರೆ, 40ನೇ ವರ್ಷದವರೆಗೂ ಆ ಕೆಲಸ ಇರುತ್ತದೆ. 40 ವರ್ಷವಾದ ಮೇಲೆ ಗಂಡ ಒಂದು ಕಡೆ, ಹೆಂಡತಿ ಒಂದು ಕಡೆ. ಅದು ಬಹಳ ವಿಧಿಪೂರ್ಣವಾಗಿ ನಡೆದಿರತಕ್ಕಂಥದ್ದು. 40 ವರ್ಷದವರೆಗೆ ಏನೇ ಜಗಳವಾದರೂ ಒಟ್ಟಿಗೆ ಮಲಗತಕ್ಕಂಥದ್ದು ಅದು ಸಿದ್ಧಾಂತ. 40-45 ವರ್ಷ ಕಳೆದ ಮೇಲೆ ಗಂಡ ಯಾವುದೋ ಮೂಲೆ, ಹೆಂಡತಿ ಯಾವುದೋ ಮೂಲೆ. ಸ್ವಾರಸ್ಯವಿರುವುದಿಲ್ಲ. ಪರಿಸ್ಥಿತಿ, ವ್ಯವಸ್ಥೆಯೇ ಬೇರೆ. ಆದ್ದರಿಂದ ಮಾನ್ಯ ಪ್ರಕಾಶ್‌ರವರು, ಯಡಿಯೂರಪ್ಪನವರು ಈ ತರಹ ಮಾತನಾಡಬಾರದು. ನಿಮ್ಮದು ಆ ಕಾಲ ಮುಗಿದಿದೆ. ಇವತ್ತು ನೀವು ಒಟ್ಟಿಗೆ ಮಲಗತಕ್ಕಂಥ ಕಾಲದಲ್ಲಿ ನೀವಿಲ್ಲ. ಆ ದಾಂಪತ್ಯ ಜೀವನ ಇವತ್ತು ನಿಮಗಿಲ್ಲ. ಆದರೆ, ಒಂದು ಮಾತು. ಮಾನ್ಯ ಪ್ರಕಾಶ್‌ರವರು ಚಾಣಕ್ಯರು.

ಶ್ರೀ ವಿ. ಸೋಮಣ್ಣ: ನಿಮಗೆ ಇದೆಯೇ?

ಶ್ರೀ ವಾಟಾಳ್ ನಾಗರಾಜ್: ನಾನು ಅದರ ಬಗ್ಗೆ ನಿಮಗೆ ವೈಯಕ್ತಿಕವಾಗಿ ಬನ್ನಿ ಹೇಳುತ್ತೇನೆ. ನನ್ನ ವಿಚಾರವನ್ನು ಸ್ವಲ್ಪ ಅವರಿಗೆ ಹೇಳಬೇಕಾಗಿದೆ. ಚಾಣಕ್ಯ ಎನ್ನುವ ಪದವನ್ನು ನಾನು ಉಪಯೋಗಿಸಿದ್ದೇನೆ. ಅದು ಒಪ್ಪತಕ್ಕಂಥದ್ದು ಎನ್ನುವುದನ್ನು ನಾನು ಸಂತೋಷವಾಗಿ ಹೇಳುತ್ತಿದ್ದೇನೆ. ಅವರು ಬುದ್ಧಿವಂತರೂ ಹೌದು ಮತ್ತು ವಿಚಾರವಂತರೂ ಹೌದು. ಪಟೇಲರು ಇದ್ದಾಗ ಪಟೇಲರ ಪಕ್ಕದಲ್ಲಿ ಕುಳಿತು ಎಲ್ಲಾ ಪುಸ್ತಕಗಳನ್ನು ಇಬ್ಬರೂ ತಿರುವಿ, ಇಬ್ಬರೂ ಬುದ್ಧಿವಂತರೇ. ಆ ವ್ಯವಸ್ಥೆಯೇ ಚೆನ್ನಾಗಿತ್ತು. ಮೇಲೆ ರಮೇಶ್ ಕುಮಾರ್ ಇದ್ದರು. ಈ ಕಡೆ ನಂಜೇಗೌಡರು. ನಾವೆಲ್ಲರೂ ಇದ್ದೆವು. ಒಂದು ಹೊಸ ಅಲೆಯೇ ಇತ್ತು. ಅದೊಂದು ಕಾಲ. ಇವತ್ತು ಹೊಸದಾಗಿ ಮಾನ್ಯ ಯಡಿಯೂರಪ್ಪನವರು ವಚನಗಳನ್ನು ಹಾಡುವುದನ್ನೆಲ್ಲಾ ಕಲಿತಿದ್ದಾರೆ. ಅದೊಂದು ಭವಿಷ್ಯದ ದೃಷ್ಟಿಯಿಂದ ಒಳ್ಳೆಯದೆ. ನೀವು ಎಲ್ಲಾ ಕಾಲದಲ್ಲೂ ಚಾಣಕ್ಯರಾಗಿದ್ದೀರಿ. ಒಂದು ಮಾತನ್ನು ನಾನು ನಿಮಗೆ ಹೇಳುತ್ತೇನೆ. ಬಿಜೆಪಿಯವರನ್ನು ಏಕೆ ಹೊರಗೆ ಇಟ್ಟಿದ್ದೇವೆ? ಜಾತೀಯ ಪಕ್ಷಗಳು. ಜಾತೀಯವಾದಿಗಳು. ಆದ್ದರಿಂದ, ಹೊರಗಿಟ್ಟು ನಾವು, ಕಾಂಗ್ರೆಸ್‌ನವರು ಹೊಂದಿಕೊಂಡು ಆಡಳಿತ ನಡೆಸುತ್ತಿದ್ದೇವೆಂದು ಇದೇ ಪ್ರಕಾಶ್‌ರವರು ಅದೇ ಪೀಠದಲ್ಲಿ ಹೇಳಿದ್ದಿರಿ. ಈಗ ನೀವಿಬ್ಬರೂ ಹೇಗೆ ಒಂದಾದಿರಿ? ಪರಿಸ್ಥಿತಿ ಏನು? ಅದರ ಬಗ್ಗೆಯೂ ಸಹ ತಾವು ಈಗ ಸ್ವಲ್ಪ ವಿವರಣೆ ಕೊಡಬೇಕು.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಮಾನ್ಯ ಪ್ರಕಾಶ್‌ರವರು ಮಾತನಾಡುವಾಗ ಕರ್ನಾಟಕ ಅಭಿವೃದ್ಧಿ ರಂಗದ ಬಗ್ಗೆ ಪ್ರಸ್ತಾಪ ಮಾಡಿದರು. ಬಹಳ ಸ್ಪಷ್ಟವಾಗಿ ಅವರು ಹೇಳಿದರು.

ಉಪಾಧ್ಯಕ್ಷರು: ಒಂದು ನಿಮಿಷ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಅದು ಚುನಾವಣಾ ಪೂರ್ವದ್ದು electoral strategy. ಅದನ್ನು ನಾನು ಒಪ್ಪುತ್ತೇನೆ. ಆದರೆ, ನೀವು ಯಾವ ಕಾರಣಕ್ಕೋಸ್ಕರ ಕಾಂಗ್ರೆಸ್‌ನವರ ಜೊತೆ ಸರ್ಕಾರ ರಚನೆ ಮಾಡಿದಾಗ ಇನ್ನೊಂದು ಚುನಾವಣೆ ಹೇರುವುದು ಬೇಡವೆಂದು ಹೇಳಿದಾಗ ಅದನ್ನು ಜನತೆ ಒಪ್ಪಿದರು. ಅದನ್ನೂ ಒಪ್ಪಿದ್ದರು. ನಾವು ಕೋಮುವಾದಿ ಶಕ್ತಿಗಳನ್ನು ದೂರ ಇಡಲಿಕ್ಕೆ ಕಾಂಗ್ರೆಸ್ ಜೊತೆ alliance ಮಾಡಿಕ್ಕೊಂಡಿದ್ದೇವೆಂದರೂ ಜನ ಒಪ್ಪಿದರು. ಹಾಗಾದರೆ, ಅದೇ ದೃಷ್ಟಿ ಇದ್ದರೆ ಇನ್ನೊಂದು ಚುನಾವಣೆ ಹೇರಬಾರದೆಂದು ಇದ್ದಿದ್ದರೆ ಕಾಂಗ್ರೆಸ್‌ನವರ ಜೊತೆಯಿಂದ ಹೊರಗೆ ಬರಲಿಕ್ಕೆ ಕಾರಣವೇನು? ಏನು ಕಷ್ಟ? ಯಾವ ಕಾರಣಕ್ಕೋಸ್ಕರ? ಹೇಳಿ?

(ಅಡಚಣೆ)

ಶ್ರೀ ಎಂ.ಪಿ.ಪ್ರಕಾಶ್: ಈ ಒಂದು ವಿಚಾರದಲ್ಲಿ ಅವರು ಹೇಳುತ್ತಿದ್ದಾರೆ. ನೀವು communist ರಾಗಿರತಕ್ಕಂಥವರು ಚುನಾವಣಾ ಪೂರ್ವದಲ್ಲಿ ಕಾಂಗ್ರೆಸ್‌ನವರ ಜೊತೆ ಹೊಂದಾಣಿಕೆ ಮಾಡಿಕೊಂಡಿರಲಿಲ್ಲ. ತಾವು ಚುನಾವಣೆಯಲ್ಲಿ ಮುಖಾಮುಖಿಯಾಗಿ ಸ್ಪರ್ಧೆ ಮಾಡಿ ಗೆದ್ದಿದ್ದಿರಿ. ಆದರೂ ಕೂಡ UPA ಸರ್ಕಾರವನ್ನು ತಾವು ಬೆಂಬಲಿಸುತ್ತಿದ್ದೀರಿ. ಯಾವ ತರ್ಕಕ್ಕಾಗಿ? ಅದೇ ತರ್ಕವೇ ಇಲ್ಲೂ ಅನ್ವಯವಾಗುತ್ತದೆ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಆ ತರ್ಕಕ್ಕೂ, ಈ ತರ್ಕಕ್ಕೂ ಸಂಬಂಧವಿಲ್ಲ. ಮಾನ್ಯ ಪ್ರಕಾಶ್‌ರವರೆ, ನಾವು ಹೊರಗಡೆಯಿಂದ ಬೆಂಬಲ ಕೊಟ್ಟಿದ್ದೇವೆ. ಆದರೆ, ವಾಪಸ್ಸು ತೆಗೆದುಕೊಂಡು ಇನ್ನೊಬ್ಬರಿಗೆ ನಾವು ಕೊಡಲಿಲ್ಲ.

ಶ್ರೀ ಕೆ.ಆರ್. ರಮೇಶ್ ಕುಮಾರ್: ಒಂದು ನಿಮಿಷ. Communists ಇಡೀ ಜನತೆಗೆ ಗೊತ್ತಿದ್ದಂತೆ secularism ಗೆ ಅವರ commitment ಇದೆ. ಸ್ಥಾಪಿತವಾಗಿರತಕ್ಕಂಥದ್ದು ಇದೆ. ಅವರ ಸಂಖ್ಯಾಬಲದಿಂದ ಅವರು ಸರ್ಕಾರ ರಚನೆ ಮಾಡುವುದಕ್ಕಾಗುವುದಿಲ್ಲ. ಒಂದು ಮತೀಯವಾದಿಗಳ ಸರ್ಕಾರ ರಚನೆಯಾಗುವುದನ್ನು ತಡೆಗಟ್ಟುವುದಕ್ಕೆ ಕಾಂಗ್ರೆಸ್ ಇದ್ದಿದ್ದರಲ್ಲಿ lesser evil ಎಂದು choose ಮಾಡಿ they have supported. ನಿಮ್ಮದು ಆ ತರಹದ case ಅಲ್ಲ. ನಿಮ್ಮದು ಬೇರೆಯದೇ case. ನಿಮ್ಮದು defend ಮಾಡಿಕೊಳ್ಳುವುದಕ್ಕಾಗುವುದಿಲ್ಲ. ಏನಾದರೂ ಒಂದು ಹೇಳಬೇಕು.

ಶ್ರೀ ಎಂ. ಪಿ. ಪ್ರಕಾಶ್: ಒಂದೊಂದು ಸಲ ನಿಮ್ಮ ನೆನಪು ಬಹಳ ಹಾರಿ ಬಿಡುತ್ತದೆ. ಏಕೆಂದರೆ, ನಂಬೂದರಿಪಾದ್‌ರವರು ಮುಖ್ಯಮಂತ್ರಿಗಳಾಗಿದ್ದಾಗ ಆ ಒಂದು ಜಾತಿವಾದಿಗಳಿಗಾಗಿ ಮುಸ್ಲಿಂ ಲೀಗ್‌ನವರು ಇಟ್ಟಂಥ ಬೇಡಿಕೆಗಾಗಿ ಮುಸ್ಲಿಂ population ಹೆಚ್ಚಿರುವಂಥ ಮಲ್ಲಾಪುರಂ ಜಿಲ್ಲೆಯನ್ನು ಕೊಡುವಾಗ, ಇಡೀ ಕೇರಳ ವಿರೋಧ ಮಾಡಿದರೂ ಕೂಡ ಕೊಟ್ಟರು. ಯಾವ ಕಾರಣಕ್ಕಾಗಿ? ಅದು ಕೂಡ ಚುನಾವಣಾ ತಂತ್ರಗಾರಿಕೆಗಾಗಿಯೇ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಅದಕ್ಕೂ ಇದಕ್ಕೂ ವ್ಯತ್ಯಾಸವಿದೆ.

ಉಪಾಧ್ಯಕ್ಷರು: ಸಬ್ಜೆಕ್ಟ್ ಬೇರೆ ಕಡೆ ಹೋಗುತ್ತಿದೆ. ಮಾನ್ಯ ಶ್ರೀನಿವಾಸಗೌಡರೆ, ತಾವು ದಯವಿಟ್ಟು ಮುಂದುವರಿಸಿ. ಇದು ಆಗುವುದಿಲ್ಲ.

ಶ್ರೀ ಕೆ.ಆರ್. ರಮೇಶ್ ಕುಮಾರ್: ನಮ್ಮ ಮೆರಾಜುದ್ದೀನ್ ಇದ್ದಾರೆ. ಹೊರಗಡೆ ಸಿಕ್ಕಿದಾಗ ಮಾತನಾಡಿದಾಗ ಪಾಪ ಏನೋ ಏನೋ ಹೇಳುತ್ತಾರೆ. ಇಲ್ಲಿ ಬಂದು ಕುಳಿತಾಗ ಸಬ್ ಠೀಕ್ ಹೈ ಸಾಬ್ ಎಂದು ಹೇಳುತ್ತಾರೆ. ಈಗ ಅನ್ಸಾರಿ ಇದ್ದಾರೆ. Is he a happy man? ಇಲ್ಲ. ಇರಬೇಕು ಇದ್ದಾರಷ್ಟೆ. ಅನ್ಸಾರಿಯಾದ್ದರಿಂದ ಇದ್ದಾರೆ. ನಿಮಗೇ ಖುಷಿ ಇಲ್ಲ. ಹೇಗೆ ಮಾಡುತ್ತೀರಿ? ಗತ್ಯಂತರವೇನಿದೆ?

ಶ್ರೀ ಕೆ.ಜಯಪ್ರಕಾಶ್ ಹೆಗ್ಡೆ: ಈಗ ಮಾನ್ಯ ಪ್ರಕಾಶ್‌ರವರ ಪರಿಸ್ಥಿತಿ ವಿಭಿನ್ನವಾಗಿದೆ. ಮಾನ್ಯ ಧರ್ಮಸಿಂಗ್ ಸರ್ಕಾರವನ್ನು ಬೀಳಿಸಿದ್ದೂ ಅವರಲ್ಲ, ಮಾನ್ಯ ಕುಮಾರಸ್ವಾಮಿಯವರ ಸರ್ಕಾರ ರಚನೆ ಮಾಡಿದ್ದೂ ಅವರಲ್ಲ. Defend ಮಾಡುವುದು ಮಾತ್ರ ಅವರಿಗೆ ಬಂದಿದೆ.

ಡಾಃ ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್: ಡಿಫೆಂಡ್ ಮಾಡುವುದಕ್ಕೇ ಅವರು ಮಂತ್ರಿಯಾಗಿದ್ದು.

ಶ್ರೀ ಕೆ. ಶ್ರೀನಿವಾಸಗೌಡ: ಅವರು ನೇರವಾಗಿ ನಿಮ್ಮ leader ಹತ್ತಿರ ಹೋಗಿ ಕೇಳಿ ಎಂದಿದ್ದರೆ ಎಲ್ಲರೂ ಸುಮ್ಮನಿರುತ್ತಿದ್ದರು.

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಧರ್ಮಸಿಂಗ್‌ರವರು ತಾವೇಕೆ ಮೌನವಾಗಿ ಕುಳಿತಿದ್ದೀರಿ ಎಂಬುದು ಗೊತ್ತಾಗಲಿಲ್ಲ. ಏಕೆ ನಿಮ್ಮನ್ನು ಬಿಟ್ಟು ಹೋದರು? ನೀವು ಈ ಸದನಕ್ಕೆ ಹೇಳಬೇಕಲ್ಲವೇ? ಈ ತರಹವಾದರೆ ಹೇಗೆ? ಈ ಪರಿಸ್ಥಿತಿಯಾಗಬಾರದು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಮಾನ್ಯ ಧರ್ಮಸಿಂಗ್‌ರವರಿಗೆ 60 ವರ್ಷಗಳು ಆಗಿಬಿಟ್ಟಿತ್ತು. ಅದಕ್ಕೇ ಬಿಟ್ಟುಹೋಗಿದ್ದಾರೆ 40 ವರ್ಷದವರಿಗೆ

ಶ್ರೀ ಜೆ.ಸಿ. ಮಾಧುಸ್ವಾಮಿ: ಅದೆಲ್ಲಾ ಸುಳ್ಳು. ಮತ್ತೆ ಬಿಟ್ಟು ತಮ್ಮ ಕಡೆ ಬರುತ್ತಾರೇನೋ ಎಂದು ಮಾನ್ಯ ಧರ್ಮಸಿಂಗ್‌ರವರು ಕಾಯುತ್ತಿದ್ದಾರೆ.

ಶ್ರೀ ಕೆ. ಶ್ರೀನಿವಾಸಗೌಡ: ಕೃಷಿ ವಿಷಯ ಬಂದರೆ ನೋಡಿ ಹೇಗೆ ಹೇಗೆ ಖುಷಿ ಪಡುತ್ತಾರೆ ಜನ. ಈ ಕೃಷಿ ವಿಷಯದಲ್ಲಿ serious ಆಗಿ ಯೋಚನೆ ಮಾಡಲಿ ಎಂದು ನಾನು ಅದರ ಮೇಲೆ ಬೆಳಕು ಚೆಲ್ಲಬೇಕೆಂದು ನಿಂತುಕೊಂಡರೆ ಇವರೆಲ್ಲರೂ ರಾಜಕೀಯದ ಖುಷಿಗೆ ಬಂದರು.

ಉಪಾಧ್ಯಕ್ಷರು: ನೀವು ಈಗ ಎಷ್ಟು ಮರೆತಿದ್ದೀರಿ? ಈಗ ನಿಮ್ಮ ತಲೆಯಲ್ಲಿ ಇದ್ದದ್ದೆಲ್ಲಾ ಮರೆತು ಹೋಗಿರಬಹುದು.

ಶ್ರೀ ಕೆ. ಶ್ರೀನಿವಾಸಗೌಡ: ಮಾನ್ಯ ಉಪಾಧ್ಯಕ್ಷರೆ, ನಾನು ಆಗಲೇ ಮಾತನಾಡಿದೆ. ಈ ಬಡ್ಡಿದರ ಅದರಲ್ಲೂ ಈ processing plant ನಲ್ಲಿ ಈ ಕೃಷಿ ಉದ್ಯಮದ ಹಿನ್ನೆಲೆ ಇರುವಂಥ ಕೆಲವು ಋತುಮಾನದಲ್ಲಿ ಬರುವಂಥ ಪದಾರ್ಥಗಳನ್ನು factory ನಡೆಯಬೇಕಾದರೆ 12 ತಿಂಗಳೂ ಕೂಡ ಅವನಿಗೆ ಕಚ್ಚಾ ಪದಾರ್ಥಗಳು ಬೇಕು. ಆ ಕಚ್ಚಾ ಪದಾರ್ಥಗಳನ್ನು ಇಟ್ಟುಕೊಳ್ಳಬೇಕಾದರೆ 11

percent ಖಡ್ಡಿಯಲ್ಲಿ ಸಾಲ ತರಬೇಕು. ಇವತ್ತು ಒಂದು ವಿಪರ್ಯಾಸವೆಂದರೆ ಬೇರೆ ಉದ್ಯಮಗಳಲ್ಲಿ ಕಚ್ಚಾ ಸಾಮಗ್ರಿಗಳ ಶೇಖರಣೆಗೆ 2 ತಿಂಗಳು ಸಾಕು. ಆದರೆ, ನಮ್ಮ ಕೃಷಿ ಉದ್ಯಮದಲ್ಲಿ ಒಂದು ವರ್ಷ ನಾವು ಕಚ್ಚಾ ಸಾಮಗ್ರಿಗಳನ್ನು ಇಟ್ಟುಕೊಳ್ಳಬೇಕು. ಇದಕ್ಕೇನು ಮಾಡಿದ್ದೀರಿ ಎನ್ನುವುದನ್ನೂ ಆರ್ಥಿಕ ಮಂತ್ರಿಗಳು ಇದರಲ್ಲಿ ಚಿಂತನೆ ಮಾಡಿಲ್ಲ. ಇವತ್ತಿನ ದಿವಸ ಅನೇಕ ಕಡೆ ಸಾಗಾಣಿಕೆ ನಿರ್ಬಂಧ ಕೂಡ ಬಹಳ ಮುಖ್ಯವಾಗಿರತಕ್ಕಂಥ ವಿಷಯವಾಗಿದೆ. ಪಶ್ಚಿಮಬಂಗಾಳ, ಬಿಹಾರ, ಉತ್ತರ ಪ್ರದೇಶ ಮತ್ತು ಇನ್ನು ಅನೇಕ ರಾಜ್ಯಗಳಲ್ಲಿ ಸರಕುಗಳ ಪ್ರವೇಶಕ್ಕೆ ರಹದಾರಿ ಪತ್ರಗಳನ್ನು ಪಡೆಯತಕ್ಕಂಥದ್ದು ಕಾನೂನು ರೀತಿಯಲ್ಲಿ ಅವಶ್ಯಕವಾಗಿದೆ. ಆದರೆ, ಇನ್ನು ಕೆಲವು ಜಿಲ್ಲೆ ಮತ್ತು ನಗರಗಳಲ್ಲಿ ಕೂಡ ಹಣ್ಣು ಮತ್ತು ತರಕಾರಿಗೆ ಪ್ರವೇಶ ಸಿಗದೆ ಇರುವ ಪರಿಸ್ಥಿತಿ ಈ ರಾಜ್ಯಗಳಲ್ಲಿ ಇದೆ. ನಾನು ಆಂಧ್ರಪ್ರದೇಶ ಮತ್ತು ತಮಿಳುನಾಡು ಭಾಗದ ಜಿಲ್ಲೆಯವನು ನಾನು ಆಗಿದ್ದೇನೆ. ನಮ್ಮ ಕಡೆಗೆ ಬೇರೆ ಬೇರೆ ರಾಜ್ಯಗಳಿಂದ ಅನೇಕ ರೀತಿಯ ತರಕಾರಿಗಳು ಬರುತ್ತವೆ. ಇದರಿಂದ ನಮ್ಮಲ್ಲಿ ರೇಟ್‌ಗಳು ಇದ್ದಕ್ಕಿದ್ದ ಹಾಗೆ ಒಂದೇ ಸಾರಿ ಕುಸಿಯುತ್ತದೆ. ಇಲ್ಲಿ ಬೆಳೆದಂಥ ರೈತನಿಗೆ ಇದರಿಂದ ಒಳ್ಳೆಯ ರೇಟ್ ಸಿಗುವುದಿಲ್ಲ. ರೈತ ಬೆಳೆಯತಕ್ಕಂಥ ಟೊಮ್ಯಾಟೋ ಇರಬಹುದು ಅಥವಾ ರೇಷ್ಮೆ ಗೂಡು ಇರಬಹುದು. ಅದ್ದರಿಂದ ಇವುಗಳಿಗೆ ಒಂದು ರೀತಿಯ ನಿರ್ಬಂಧ ಇಲ್ಲದೆ ಇರುವುದರಿಂದ ಈ ಒಂದು ಪರಿಸ್ಥಿತಿ ನಿರ್ಮಾಣವಾಗಿದೆ. ಇವತ್ತಿನ ದಿವಸ ನೈಸರ್ಗಿಕ ಪ್ರಕೋಪಗಳಿಂದ ಮೇಲೆ ಅನೇಕ ಸರಬರಾಜುಗಳು ನಿಲ್ಲುತ್ತವೆ. ಇದರಲ್ಲಿ ನಾವು ಮಧ್ಯವರ್ತಿಗಳ ಹಾವಳಿಯನ್ನು ಕಡಿಮೆ ಮಾಡಲೇ ಬೇಕು. ಇವತ್ತು ಸಣ್ಣ ಮತ್ತು ಅತೀ ಸಣ್ಣ ಕೃಷಿಕರಿಗೆ ಒತ್ತು ಕೊಡುವಂಥದ್ದು ಏನೇನು ಮಾಡಿದ್ದಾರೆಂಬುದನ್ನು ಇದರಲ್ಲಿ ತೋರಿಸಬೇಕಾಗಿತ್ತು. ಮತ್ತೆ ಇವತ್ತು ಮೂಲಭೂತವಾದ ಸೌಕರ್ಯಗಳನ್ನು ಕೃಷಿಗೋಸ್ಕರ ಏನೇನು ಕೊಟ್ಟಿದ್ದಾರೆ ಎನ್ನತಕ್ಕಂಥದ್ದನ್ನೂ ಕೂಡ ತೋರಿಸಬೇಕಾಗಿತ್ತು. ಇವತ್ತಿನ ದಿವಸ ಕೃಷಿಯಲ್ಲಿ ಟೆಕ್ನಾಲಜಿ ಬೆಳೆಯುತ್ತಿದೆ. ಫ್ರೀಜ್ ಕೂಲಿಂಗ್ ಬೇಕಾಗುತ್ತದೆ ಮತ್ತೆ ಸಂಸ್ಕರಣೆ ಮಾಡತಕ್ಕಂಥ ಘಟಕಗಳನ್ನು ಸ್ಥಾಪನೆ ಮಾಡಬೇಕಾಗುತ್ತದೆ. ಹೂಡಿಕೆದಾರರ ಕಡೆಯಿಂದ ಫುಡ್ ಪಾರ್ಕ್‌ಗಳನ್ನು ಮಾಡಬೇಕಾಗುತ್ತದೆ. ಹಾಗೆಯೇ ಸಂಸ್ಕರಣ ಘಟಕಗಳನ್ನು ಮೇಲ್ದರ್ಜೆಗೆ ಏರಿಸಬೇಕಾಗುತ್ತದೆ. ಮತ್ತೆ ಕೃಷಿ ಮಾರುಕಟ್ಟೆ ಮತ್ತು ಉಗ್ರಾಣ ಹಾಗೂ ಕಸಾಯಿಖಾನೆಗಳನ್ನು ಆಧುನೀಕರಣ ಮಾಡತಕ್ಕಂಥ ಅವಶ್ಯಕತೆ ಇದೆ. ಇವತ್ತಿನದಿವಸ ದನ ಮತ್ತು ಹಂದಿಯನ್ನು ಕೊಲ್ಲುವಾಗ ಆ ಹಿಂಸೆಯನ್ನು ನೋಡಿದಾಗ ಹೃಧಯ ಇರತಕ್ಕಂಥ ಮನುಷ್ಯನಿಗೆ ಖಂಡಿತ ನೋವಾಗುತ್ತದೆ. ನಾವೆಲ್ಲರೂ ತಿನ್ನುವವರೇ ಆದರೆ ದನ ತಿನ್ನುವುದಿಲ್ಲ. ಈ ಪ್ರಾಣಿಗಳನ್ನು ಕೊಲ್ಲುವುದನ್ನು ನೋಡಿದರೆ ಹೃದಯ ಕಿವಿಚುತ್ತದೆ. ಏಕೆಂದರೆ, ಕಸಾಯಿಖಾನೆಗಳ ಆಧುನೀಕರಣ ಇದುವರೆಗೂ ಮಾಡಿಲ್ಲ. ಎತ್ತುಗಳನ್ನು ದನಗಳನ್ನು ನೋಯಿಸಿ ನೋಯಿಸಿ ಸಾಯಿಸುತ್ತಾರೆ ಮತ್ತೆ ಹಂದಿಗಳನ್ನು ಕೂಡ ಹಳ್ಳಿಗಳಲ್ಲಿ ..

ಶ್ರೀ **ಕೆ.ಆರ್. ರಮೇಶ್‌ಕುಮಾರ್**: ಸ್ಲಾಟರ್‌ಹೌಸ್‌ನಲ್ಲಿ ಲೈವ್ ವೈಟ್ ತೆಗೆದುಕೊಂಡು ಮಾರಾಟ ಮಾಡುತ್ತಿದ್ದವು. ಸ್ಲಾಟರ್ ಹೌಸ್ ಆದರೆ ರೈತರಿಗೆ ಹೆಚ್ಚು ಅನುಕೂಲವಾಗುತ್ತದೆ.

ಶ್ರೀ ಕೆ. ಶ್ರೀನಿವಾಸಗೌಡ: ನಾನೂ ಕೂಡ ಸ್ಲಾಟರ್ ಹೌಸ್ ಬಗ್ಗೆ ಹೇಳುತ್ತಿದ್ದೇನೆ. ಈ ಸ್ಲಾಟರ್ ಹೌಸ್‌ಗಳನ್ನು ಮಾಡುವುದಕ್ಕೆ ಸರ್ಕಾರ ಆದ್ಯತೆ ಕೊಟ್ಟಿಲ್ಲ.

ಶ್ರೀ ಜೆ.ಸಿ. ಮಾಧುಸ್ವಾಮಿ: ದನಗಳನ್ನು ವಧೆ ಮಾಡತಕ್ಕಂಥದ್ದನ್ನು ಮಾನ್ಯ ಯಡಿಯೂರಪ್ಪನವರು ವಿರೋಧ ಮಾಡುತ್ತಾರೆ. ಆದರೆ, ತಾವು ಅದನ್ನೇ ಒತ್ತಿ ಒತ್ತಿ ಹೇಳುತ್ತಿದ್ದೀರಿ. ಇದು ನಮಗೆ ಅರ್ಥವಾಗುತ್ತಿಲ್ಲ.

ಶ್ರೀ ಕೆ. ಶ್ರೀನಿವಾಸಗೌಡ: ಅವರು ಯಾವಾಗಲಾದರೂ ನಮ್ಮ ಹಳ್ಳಿ ಕಡೆ ಬರಲಿ ಹಂದಿಗಳನ್ನು ಕೊಲ್ಲುವಾಗ ಅವು ಯಾವ ರೀತಿಯಾಗಿ ಕಿರುಚುತ್ತವೆ ಎಂಬುದನ್ನು ನೋಡಿ ಮಾತನಾಡಿ.

ಶ್ರೀ ಜೆ.ಸಿ.ಮಾಧುಸ್ವಾಮಿ: ತಾವು ಹಂದಿಯ ಬಗ್ಗೆ ಮಾತನಾಡಿ. ಆದರೆ, ಮಾತು ಮಾತಿಗೂ ದನ ಕಡಿಯುವುದರ ಬಗ್ಗೆಯೇ ತಾವು ಹೇಳುತ್ತಿದ್ದೀರಿ.

ಶ್ರೀ ಕೆ. ಶ್ರೀನಿವಾಸಗೌಡ: ದನಗಳನ್ನೂ ಸಹ ಕಡಿಯುತ್ತಾರೆ. ವಾಸ್ತವದಲ್ಲಿ ಮುಚ್ಚುಮರೆ ಮಾಡುವಂಥದ್ದು ಏನಿದೆ. ಇರತಕ್ಕಂಥ ವಿಷಯವನ್ನು ಹೇಳಲೇ ಬೇಕಾಗುತ್ತದೆ. ಇದೇನು ಮಾನ್ಯ ಯಡಿಯೂರಪ್ಪನವರಿಗೆ ಗೊತ್ತಿಲ್ಲವೇ? ಇದನ್ನು ಮಾನ್ಯ ಯಡಿಯೂರಪ್ಪನವರು ಒಪ್ಪುವುದಿಲ್ಲವೆಂದರೆ ಅವರಿಗೆ ಬುದ್ಧಿ ಇಲ್ಲವೆಂದು ಹೇಳಬೇಕಾಗುತ್ತದೆ. ಇನೇನು ಹೇಳುವುದಕ್ಕೆ ಆಗುತ್ತದೆ? ಇರತಕ್ಕಂಥದ್ದನ್ನು ಇಲ್ಲವೆಂದು ಹೇಳುವುದಕ್ಕೆ ಆಗುತ್ತದೆಯೇ ಇವತ್ತಿನದಿವಸ ಇವೆಲ್ಲವನ್ನೂ ಮಾಡತಕ್ಕಂಥ ಅವಶ್ಯಕತೆ ಇದೆ ಮತ್ತೆ ಇವತಿನದಿವಸ ಬಂಡವಾಳಕ್ಕೆ ಸಾಲಸೌಲಭ್ಯಗಳನ್ನು ದೊರಕಿಸಿಕೊಡುವಂಥ ಪದ್ಧತಿಗಳನ್ನು ಕೃಷಿ ಮೇಲೆ ಮಾಡಲಿಲ್ಲ. ಅಥವಾ ತೋಟಗಾರಿಕೆ ಕೃಷಿಗೂ ಕೂಡ ಮಾಡಿಲ್ಲ. ಮತ್ತು ಕೃಷಿ ಕಾರ್ಮಿಕರಿಗೆ 62 ರೂಪಾಯಿ ಕೂಲಿಯನ್ನು ನಿಗದಿ ಮಾಡಲಾಗಿದೆ. ಇತ್ತೀಚೆಗೆ ಇದನ್ನು ಜಾಸ್ತಿ ಮಾಡಲಾಗಿದೆ ಎಂಬುದನ್ನು ಕೇಳಿದ್ದೇನೆ. ಆದರೆ, ಇದನ್ನೂ ಕೂಡ ವೈಜ್ಞಾನಿಕವಾಗಿ ಯಾವ ರೀತಿಯಗಿ ಮಾಡಬೇಕಾಗಿತ್ತೋ ಆ ರೀತಿಯಾಗಿ ಇವತ್ತಿನದಿವಸ ಮಾಡಿಲ್ಲ. ನಮ್ಮ ರಾಜ್ಯದಲ್ಲಿ ಸುಮಾರು 62 ಲಕ್ಷ ಜನ ಕೂಲಿ ಕಾರ್ಮಿಕರು ಇದ್ದಾರೆ. ಇವತ್ತಿನ ದಿವಸ ಅವರೂ ಕೂಡ ಜೀವನ ಮಾಡಬೇಕು. ಇವತ್ತಿನ ದಿವಸ ಮೂರು ರೂಪಾಯಿಗೆ ಅಕ್ಕಿ ಕೊಡುತ್ತಿರುವುದರಿಂದ ಸ್ವಲ್ಪ ಮಟ್ಟಿಗೆ ಉಸಿರಾಡುವಂಥ ಪರಿಸ್ಥಿತಿ ಕೂಲಿ ಕಾರ್ಮಿಕರಿಗೆ ಬಂದಿದೆ. ಆದರೆ, ಅವರ ಜೀವನಮಟ್ಟವನ್ನು ಮೇಲೆತ್ತುವಂಥ ಕೆಲಸಗಳು ಆಗಬೇಕೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟ ಪಡುತ್ತೇನೆ. ಕೃಷಿ ಮೂಲಕ ಸಂಸ್ಕರಣದ ಘಟಕಗಳನ್ನು ಮತ್ತು ಫುಡ್ ಪಾರ್ಕ್‌ಗಳನ್ನು ಇವತ್ತಿನದಿವಸ ವೇಗದಗತಿಯಲ್ಲಿ ಮಾಡದೆ ಇದ್ದರೆ ರೈತ ಬೆಳೆದಂಥ ಬೆಳೆಗೆ ಲಾಭ ಸಿಗುವುದಕ್ಕೆ ಸಾಧ್ಯವೇ ಇಲ್ಲ. ಇವತ್ತಿನದಿವಸ ರೈತ ರಾಗಿ, ಭತ್ತ ಬೆಳೆದು ಮಿಲ್‌ಗೆ ಹಾಕಿ ಮಧ್ಯದ ದಲ್ಲಾಳಿ ಏನು ಹಣ ಕೊಡುತ್ತಾನೆಯೋ ಅಷ್ಟಕ್ಕೆ ರೈತ ಸೀಮಿತನಾಗಬೇಕಾಗುತ್ತದೆ. ಉದಾಹರಣೆಗೆ ಹೇಳುವುದಾದರೆ, ಕಾಟನ್ ಬೆಳೆದಂಥ ರೈತ ಕಾಟನ್‌ನ್ನು ಖಾಸಗಿಯವರಿಗೆ ಕೊಟ್ಟರೆ, ಆತನಿಗೆ ಅದರ ಹಣ ಬರಬೇಕಾದರೆ 6 ತಿಂಗಳು ಅಥವಾ ಒಂದು ವರ್ಷಗಳವರೆಗೆ ಕಾಯಬೇಕಾಗುತ್ತದೆ. ಕೊಂಡುಕೊಳ್ಳುವವರು ಆತನಿಗೆ ವಾರಕ್ಕೆ ಇಷ್ಟೆಂದು ಅಂದರೆ

ಉಪ್ಪು, ಮೆಣಸಿನಕಾಯಿಗೆಂದು ಮನೆ ಖರ್ಚಿಗೆ ಕೊಡುತ್ತಾರೆ. ಅದ್ದರಿಂದ ಈ ರೀತಿಯಾದ ಎಲ್ಲಾ ಪದ್ಧತಿಗಳನ್ನು ಆರ್ಥಿಕ ನಿರ್ಬಂಧನೆಯಲ್ಲಿ ತರಬೇಕಾಗುತ್ತದೆ. ಇವೆಲ್ಲವುಗಳನ್ನೂ ಸರ್ಕಾರ ಮಾಡಿಲ್ಲವೆಂದು ಮತ್ತು ಇವುಗಳಿಗೆ ಬಜೆಟ್‌ನಲ್ಲಿ ಹಣವನ್ನು ಸಹ ಇಟ್ಟಿಲ್ಲವೆಂದು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಮತ್ತೆ ಕೃಷಿ ಸಂಸ್ಕರಣೆಯ ಮೌಲೀಕರಣಕ್ಕೆ ಹೊಸ ಯೋಜನೆಗಳನ್ನು ಘೋಷಣೆ ಮಾಡಿದರು. ಇದಕ್ಕೆ ಸಂಬಂಧಪಟ್ಟಂಥ ಯಾವುದೇ ಒಂದು ಆದೇಶ ಕೂಡ ಆಗಿಲ್ಲ. ಬಜೆಟ್ ಪುಸ್ತಕ ಮಂಡಿಸುವಾಗ ಬಹಳ ಚೆನ್ನಾಗಿ ಮಾತನಾಡಿದರು. ಆದರೆ, ಇವತ್ತಿನವರೆಗೆ ಒಂದು ಆದೇಶ ಆಗಿಲ್ಲ. ಮಾರ್ಚ್ ತಿಂಗಳು ಮುಗಿದು ಇನ್ನು ನಾಲ್ಕು ದಿವಸ ಮುಗಿದರೆ ಜುಲೈ ತಿಂಗಳು ಕೂಡ ಮುಗಿಯುತ್ತದೆ. ಒಟ್ಟು ನಾಲ್ಕು ತಿಂಗಳಾಗುತ್ತದೆ. ಇವತ್ತಿನವರೆಗೂ ನಿಮ್ಮ ಆದೇಶ ಒಂದೂ ಕೂಡ ಆಚೆಗೆ ಬಂದಿಲ್ಲ. ಇದಕ್ಕೆ ನಾವೇನು ಹೇಳಬೇಕು? ಕಾರ್ಯಕ್ರಮಗಳನ್ನು ಪುಸ್ತಕದಲ್ಲಿ ಓದಿಕೊಳ್ಳಬೇಕೇ ಅಥವಾ ಆದೇಶಗಳ ಮುಖಾಂತರ ಅವುಗಳನ್ನು ಕಾರ್ಯರೂಪಕ್ಕೆ ತರಬೇಕೇ? ಇವತ್ತಿನದಿವಸ ನಿಮ್ಮ ಕಾರ್ಯಕ್ರಮದಲ್ಲಿ ಏನು ಹೇಳಿರುತ್ತಾರೋ ಅದನ್ನು ರೂಪಿಸದಿದ್ದರೆ ಅಥವಾ ಸರ್ಕಾರದ ಆದೇಶ ಮಾಡದಿದ್ದರೆ ನಿಮ್ಮ ಉದ್ದೇಶವಾದರೂ ಏನು? ಇದನ್ನು ಯಾವ ರೀತಿಯಾಗಿ ನಂಬಬೇಕಾಗುತ್ತದೆ? ಇದನ್ನು ತಾವು ನೋಡಬೇಕಾಗುತ್ತದೆ. ಮತ್ತೆ ನಿಮ್ಮ ಬಜೆಟ್‌ನಲ್ಲಿ ಜೈವಿಕ ಇಂಧನಕ್ಕಾಗಿ 20 ಕೋಟಿ ರೂಪಾಯಿಗಳನ್ನು ಇಡುತ್ತೇವೆಂದು ಹೇಳಿದ್ದೀರಿ. ಆದರೆ, ಇವತ್ತಿನದಿವಸ ಕೇವಲ 6 ಕೋಟಿ ರೂಪಾಯಿಗೆ ಬಂದಿದ್ದೀರಿ. ಜೈವಿಕ ಇಂಧನಕ್ಕೆ ಹೆಚ್ಚಿನ ಪ್ರೋತ್ಸಾಹ ನೀಡುವುದು ಅವಶ್ಯಕವಿದೆ ಎಂದು ಹೇಳಿ ಮಾನ್ಯ ಉಪ ಮುಖ್ಯಮಂತ್ರಿಯಾಗಿರತಕ್ಕಂಥ ಮಾನ್ಯ ಆರ್ಥಿಕ ಮಂತ್ರಿಗಳು ಇಕ್ಕಾಗಿ 20 ಕೋಟಿ ರೂಪಾಯಿ ಇಡುತ್ತೇವೆಂದು ಹೇಳಿದ್ದೀರಿ. ಆದರೆ ಹಣ ಬಿಡುಗಡೆ ಮಾಡುವಾಗ ಇದಕ್ಕೆ ಕೇವಲ 6 ಕೋಟಿ ರೂಪಾಯಿಗೆ ಬಂತು. ಮತ್ತೆ ಕೃಷಿ ಯಾಂತ್ರೀಕರಣದ ಬಗ್ಗೆ ಹೇಳಿದ್ದೀರಿ. 2007ರಲ್ಲಿ ಕೃಷಿ ಯಾಂತ್ರೀಕರಣ ಸ್ಕೀಂ ಅಡಿಯಲ್ಲಿ 50 ಪರ್ಸೆಂಟ್ ರಿಯಾಯ್ತಿಯಲ್ಲಿ 20 ಟ್ರಾಕ್ಟರ್‌ಗಳು 20 ಪವರ್ ಟ್ರಿಲ್ಲರ್‌ಗಳು ಕೊಡುತ್ತೇವೆಂದು ಹೇಳಿ ಇದಕ್ಕಾಗಿ 30 ಕೋಟಿ ರೂಪಾಯಿ ಇಡಲಾಗಿದೆ ಎಂದು ಘೋಷಣೆ ಮಾಡಿದ್ದೀರಿ. ನೀವು ಹೇಳಿದ ಪ್ರಕಾರವೇ 175 ತಾಲ್ಲೂಕುಗಳಿಗೆ ಈ ರೀತಿಯಾಗಿ ಕೊಡಬೇಕಾದರೆ, ಇನ್ನು 20 ಕೋಟಿ ರೂಪಾಯಿ ಜಾಸ್ತಿ ಬೇಕಾಗುತ್ತದೆ. ಇದಕ್ಕೆ ಸಂಬಂಧಪಟ್ಟಂತೆ ಈ ಅನುಬಂಧದಲ್ಲಿ ಯಾವುದೇ ರೀತಿಯಾಗಿ ತೋರಿಸಿರಲಿಲ್ಲ. ಮುಂದೆಯಾದರೂ ಪೂರಕ ಅಂದಾಜಿನಲ್ಲಿಯಾದರೂ ತೋರಿಸತಕ್ಕಂಥ ಕೆಲಸವನ್ನು ಮಾಡಬೇಕೆಂದು ಈ ಸಂದರ್ಭದಲ್ಲಿ ತಮ್ಮ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಇವತ್ತಿನದಿವಸ ಎತ್ತುಬಂಡಿಗಳೆಲ್ಲವನ್ನೂ ಮರೆಯುತ್ತಿದ್ದಾರೆ. ಆದ್ದರಿಂದ ನಗರಪ್ರದೇಶ ಬಿಟ್ಟು ಬೇರೆ ಕಡೆಗೆ ಹೋಗಬೇಕೆಂದು ತಾವು ಬಹಳ ಚೆನ್ನಾಗಿ ಹೇಳಿದ್ದೀರಿ. ನನ್ನ ಅನಿಸಿಕೆ ಪ್ರಕಾರ ಇವತ್ತಿನ ದಿವಸ ಎತ್ತುಗಳನ್ನು ಸಾಕತಕ್ಕಂಥದ್ದು ದಿನೇದಿನೇ ಕಡಿಮೆಯಾಗುತ್ತಿದೆ. ಅದರ ಬದಲು ಎರಡು ಹಸುಗಳನ್ನು ಇಟ್ಟುಕೊಂಡರೆ ಒಬ್ಬ ಬಡವ ಕೂಡ ಜೀವನ ಮಾಡಬಹುದು. ಇವತ್ತಿನದಿವಸ ಪವರ್ ಟ್ರಿಲ್ಲರ್‌ಗಳಿಗೆ ಸರ್ಕಾರ 50 ಪರ್ಸೆಂಟ್‌ನಷ್ಟು ಸಬ್ಸಿಡಿ ಕೊಡುತ್ತಿದೆ. ಅದ್ದರಿಂದ ಇದಕ್ಕೆ ಹೆಚ್ಚಿನ ಆದ್ಯತೆ ಕೊಡುವುದನ್ನು ಬಿಟ್ಟು ಎತ್ತುಗಳನ್ನು ಕೊಡುವಂಥದ್ದು ಸರಿಯಲ್ಲವೆಂಬುದು

ನನ್ನ ಅಭಿಪ್ರಾಯ. ಮತ್ತೆ ಹನಿ ನೀರಾವರಿಗೆ 75 ಪರ್ಸೆಂಟ್ ರಿಯಾಯ್ತಿ ಕೊಡುತ್ತೇವೆಂದು ಘೋಷಣೆ ಮಾಡಿದ್ದೀರಿ. ಕೋಲಾರ ಮತ್ತು ಬಿಜಾಪುರ ಜಿಲ್ಲೆ ಬಿಟ್ಟು ಹೇಳಲಾಗಿದೆ. ಇದಕ್ಕೆ ಸಂಬಂಧಪಟ್ಟಂತೆ ಮಾರ್ಗಸೂಚಿ ಕೊಟ್ಟಿಲ್ಲ. ಇದನ್ನು ಕೊಡುವುದಕ್ಕೆ ನಿಮ್ಮ ಸರ್ಕಾರಕ್ಕೆ ನಾಲ್ಕು ತಿಂಗಳು ಬೇಕೇ? ಇನ್ನೂ 8 ತಿಂಗಳಿದೆ. ಈ 8 ತಿಂಗಳಲ್ಲಿ ಎಷ್ಟು ಇಂಪ್ಲಿಮೆಂಟ್ ಮಾಡುತ್ತೀರಿ? ಇದೆಲ್ಲವನ್ನೂ ತಾವು ಯೋಚನೆ ಮಾಡಬೇಕು. ಅವತ್ತಿನದಿವಸ ಪತ್ರಿಕೆಗಳಲ್ಲಿ ಶಹಭಾಸ್‌ಗಿರಿ ತೆಗೆದುಕೊಳ್ಳುವುದಕ್ಕೋಸ್ಕರ ಬಜೆಟ್ ಪುಸ್ತಕವನ್ನು ಬಹಳ ಅಂದವಾಗಿ ಪ್ರಿಂಟ್ ಮಾಡಿ ಓದುಬಿಟ್ಟಿರಿ. ನಾಲ್ಕು ತಿಂಗಳಾದರೂ ಇನ್ನೂ ಮಾರ್ಗಸೂಚಿಯನ್ನು ಕಳುಹಿಸಿಲ್ಲ. ಇವತ್ತಿನದಿವಸ ಪ್ರತಿಯೊಂದು ಜಿಲ್ಲೆಯಲ್ಲಿ 100 ಹೆಕ್ಟೇರ್‌ನಷ್ಟು ಸಾವಯವ ಕೃಷಿ ಮಾಡಿದ್ದೇವೆ. 2007ರ ಹೊತ್ತಿಗೆ ತಾಲ್ಲೂಕು ಮಟ್ಟಕ್ಕೆ ವಿಸ್ತರಣೆ ಮಾಡುತ್ತೇವೆಂದು ಹೇಳಿದ್ದೀರಿ. ಇದರ ಬಗ್ಗೆ ಕೂಡ ಸಂಶಯ ಕೂಡ ಬಂದಿದೆ. ಏಕೆಂದರೆ ನೀವು ಏನೇನು ಹೇಳಿದ್ದೀರಿ ಅವೆಲ್ಲವನ್ನೂ ಈಗಲೇ ಮಾಡಿಲ್ಲ. ಆದ್ದರಿಂದ ಮುಂದೆ ಕೂಡ ಇದು ಆಗುತ್ತದೆಯೋ ಎಂಬ ನಂಬಿಕೆ ನನಗಂತೂ ಇಲ್ಲ. ಇವತ್ತಿನದಿವಸ ಇವೆಲ್ಲವನ್ನೂ ಮಾಡತಕ್ಕಂಥ ದಿಕ್ಕಿನಲ್ಲಿ ನೀವು ಹೋಗುತ್ತಿಲ್ಲ. ಅವತ್ತು ಶಹಭಾಸ್‌ಗಿರಿ ತೆಗೆದುಕೊಳ್ಳುವುದಕ್ಕೋಸ್ಕರ ನಾಲ್ಕು ಪಸೆಂಟ್ ಬಡ್ಡಿ ದರಕ್ಕೆ ಸಾಲ ಕೊಡುತ್ತೇವೆಂದು ಹೇಳಿದಿರಿ. ಇದನ್ನು ಮೂರು ಲಕ್ಷಕ್ಕೆ ನಿಗದಿ ಮಾಡಿದ್ದೀರಿ. ಆದರೆ ಇವತ್ತು ಒಂದು ಟ್ರಾಕ್ಟರ್‌ಗೆ ನಾಲ್ಕು ಲಕ್ಷ ರೂಪಾಯಿ ಆಗುತ್ತದೆ. ಮೂರು ಲಕ್ಷಕ್ಕೆ ಒಂದು ಪವರ್ ಟ್ರಿಲ್ಲರ್ ತೆಗೆದುಕೊಳ್ಳಬಹುದು. 35 ಹೆಚ್‌ಪಿ ಟ್ರಾಕ್ಟರ್ ಆದರೆ ಸುಮಾರು 3 ರಿಂದ 4 ಲಕ್ಷ ರೂಪಾಯಿಗೆ ಸಿಗುತ್ತದೆ. ಇದು ಶಾರ್ಟ್‌ಟರ್ಮ್‌ಗೆ ಅನುಕೂಲವಾಗುತ್ತದೆಯೇ ವಿನ: ಲಾಂಗ್ ಟರ್ಮ್ ಮತ್ತು ಮೀಡಿಯಂ ಟರ್ಮ್‌ಗೆ ಇದರಿಂದ ಏನೂ ಉಪಯೋಗವಿಲ್ಲ. ಲಾಂಗ್ ಟರ್ಮ್ ಮತ್ತು ಮೀಡಿಯಂ ಟರ್ಮ್ ಲೋನ್‌ಗೆ ನಾಲ್ಕು ಪಸೆಂಟ್ ಬಡ್ಡಿ ದರವಲ್ಲಿ ಸಾಲ ಕೊಡತಕ್ಕಂಥ ವ್ಯವಸ್ಥೆಯನ್ನು ತಾವು ಮಾಡಿಲ್ಲ. ಆದ್ದರಿಂದ ಇವತ್ತಿನದಿವಸ ರೈತರಿಗೆ ಏನೂ ಉಪಯೋಗವಾಗುವುದಿಲ್ಲ. ಆದ್ದರಿಂದ ಇದರ ಕಡೆ ಕೂಡ ತಾವು ಆದ್ಯತೆ ಕೊಡಬೇಕೆಂದು ಹೇಳುವುದಕ್ಕೆ ಬಯಸುತ್ತೇನೆ. ನಾನು ಮಂತ್ರಿಯಾಗಿದ್ದಂಥ ಸಂದರ್ಭದಲ್ಲಿ ಕೃಷಿ ವಿಶ್ವವಿದ್ಯಾಲಯಗಳನ್ನು ಖಾಸಗೀಕರಣ ಮಾಡಬೇಕೆಂದು ಹೇಳಿದ್ದೆ. ಇವತ್ತು ಇದನ್ನು ಮಾಡಿದ್ದಾರೆ ಎನ್ನತಕ್ಕಂಥದ್ದನ್ನು ಮಾನ್ಯ ಕೃಷಿ ಮಂತ್ರಿಗಳು ಹೇಳಿರುವುದನ್ನು ನಾನು ಪತ್ರಿಕೆಯಲ್ಲಿ ಓದಿದ್ದೇನೆ. ನಾನು ಮತ್ತು ಮಾನ್ಯ ಸಿಂಧ್ಯಾರವರು ಮಾನ್ಯ ಶರದ್‌ಪವಾರ್ ಜೊತೆ ಒಂದು ಹೋಟೆಲ್‌ನಲ್ಲಿ ಕುಳಿತು ಇದರ ಬಗ್ಗೆ ಚರ್ಚೆ ಕೂಡ ಮಾಡಿದ್ದೇವೆ. ಆದ್ದರಿಂದ ಇದರ ಬಗ್ಗೆ ಏನೂ ಪ್ರಗತಿಯಾಗಿದೆ ಎಂಬುದನ್ನು ಈ ಸಂದರ್ಭದಲ್ಲಿ ಸಾರ್ವಜನಿಕರಿಗೆ ತಿಳಿಸಬೇಕಾಗುತ್ತದೆ. ಕೃಷಿ ವಿಶ್ವವಿದ್ಯಾಲಯಗಳನ್ನೂ ಖಾಸಗೀಕರಣ ಮಾಡುತ್ತೇವೆಂದು ಅವತ್ತಿನದಿವಸ ಹೇಳಿದ್ದೀರಿ. ಆದರೆ ನಾಲ್ಕು ತಿಂಗಳಾದರೂ ಕೂಡ ಇದಕ್ಕೆ ಸಂಬಂಧಪಟಂತೆ ಒಂದು ಮಾರ್ಗಸೂಚಿಯನ್ನು ಹೊರಡಿಸಿಲ್ಲ. ಆದ್ದರಿಂದ ಇದರ ಬಗ್ಗೆ ಕೂಡ ತಾವು ಯೋಚನೆ ಮಾಡಬೇಕು. ಡಾ: ಸ್ವಾಮಿನಾಥನ್‌ರವರ ಅಧ್ಯಕ್ಷತೆಯಲ್ಲಿ ರಚನೆಯಾಗಿದ್ದಂಥ ರಾಷ್ಟ್ರೀಯ ಆಯೋಗ ನೀಡಿರತಕ್ಕಂಥ ಶಿಫಾರಸ್ಸುಗಳನ್ನು ನಾವು ಗಮನಿಸಿದ್ದು, ಇದು ಉತ್ಪಾದನೆಯಲ್ಲಿ ಸ್ಥಿರತೆಯನ್ನು ಕಾಪಾಡಿಕೊಂಡು ಬರುತ್ತದೆ. ಆದ್ದರಿಂದ ರಾಷ್ಟ್ರದಲ್ಲಿ ಮತ್ತು ರಾಜ್ಯದಲ್ಲಿ ಇದರ ಬಗ್ಗೆ ಒಂದು ಸ್ಪಷ್ಟವಾದ ನೀತಿಯನ್ನು

ರೂಪಿಸಿ ಅನುಷ್ಠಾನಕ್ಕೆ ತರಬೇಕೆಂದು ಹೇಳಿದ್ದೀರಿ. ಆದರೆ, ಇದನ್ನು ಎಲ್ಲಿ ತಂದಿದ್ದೀರಿ? ಡಾಕ್ಟರ್ ಸ್ವಾಮಿನಾಥನ್ ಎನ್ನುವವರು ಪ್ರಪಂಚದಲ್ಲಿಯೇ ಒಬ್ಬ ದೊಡ್ಡ ಸೈಂಟಿಸ್ಟ್ ಅವರನ್ನು ನೀವು ಬಜೆಟ್ ಸಮಯದಲ್ಲಿ ಹೊಗಳಿ, 4 ತಿಂಗಳಾದರೂ ಕೂಡ ನೀವು ಯಾವುದೇ ವಿಧವಾದಂಥ ಕಾರ್ಯಕ್ರಮವನ್ನು ಹಾಕಿಕೊಂಡಿಲ್ಲ. ಕಾರ್ಯಕ್ರಮದಲ್ಲಿ ನೀವು ಹಾಕಿಕೊಳ್ಳಬೇಕಾದಂಥ ವಿಷಯ. ಕೃಷಿಗೆ ಪ್ರತ್ಯೇಕವಾದ ಅಗ್ರಿಕಲ್ಚರ್ ಡೆವಲಪ್‌ಮೆಂಟ್ ಕಾರ್ಪೋರೇಷನ್ ಮಾಡುತ್ತೇವೆಂದು 11 ಕೋಟಿ ರೂಪಾಯಿಗಳನ್ನು ಇಡುತ್ತೇವೆಂದು ಹೇಳಿದ್ದೀರಿ ಅದನ್ನು ನೀವು ಇಡಲಿಲ್ಲ. ಖಾಲಿ ಇರುವ ಅನೇಕ ಹುದ್ದೆಗಳನ್ನು ಭರ್ತಿ ಮಾಡುತ್ತೇವೆಂದು ಮಾನ್ಯ ಮಂತ್ರಿಗಳು ಹೇಳಿದರು. ಕೃಷಿ ಮಂತ್ರಿಗಳು ಹೇಳಿದ್ದು ಅದು ಇನ್ನು ಯಾವುದೂ ಆಗಿಲ್ಲ. ರಾಜ್ಯದಲ್ಲಿ ಎರಡು ಕೃಷಿ ವಿಶ್ವವಿದ್ಯಾನಿಲಯಗಳು ಇವೆ. ಸಂಶೋಧನೆಯ ಬಗ್ಗೆ ಹೇಳಬೇಕಾಗುತ್ತದೆ. ಧಾರವಾಡ ಕೃಷಿ ವಿಶ್ವವಿದ್ಯಾನಿಲಯದಲ್ಲಿ ಇದ್ದಂಥ ಒಬ್ಬ ವೈಸ್ ಚಾನ್ಸಲರ್ ಎಸ್.ಎ. ಪಾಟೀಲ್ ನಿಜವಾಗಲೂ ಕೂಡ ಒಬ್ಬ ಮೇಧಾವಿ ಕೃಷಿ ವಿಜ್ಞಾನಿ. ಅವರನ್ನು ಅನ್ಯಾಯವಾಗಿ ನಮ್ಮ ರಾಜ್ಯವನ್ನು ಬಿಟ್ಟು ಬೇರೆ ರಾಷ್ಟ್ರದ ಯಾವುದೋ ಒಂದು ಸಂಸ್ಥೆಗೆ ಹೋದರು. ಅಂಥವರನ್ನು ನೀವು ಇಟ್ಟುಕೊಂಡಿದ್ದರೆ ಕೃಷಿಕರಿಗೆ ಒಂದು ದೊಡ್ಡ ಒಂದು ಆಧಾರಸ್ಥಂಭವಾಗಿ ಉಳಿಯುತ್ತಿದ್ದರು. ಏಕೆ ಇದನ್ನು ಹೇಳುತ್ತಿದ್ದೇವೆಂದರೆ, ಇವತ್ತು ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯ ಅರ್ಬನೈಜ್ಡ್ ಆಗಿ ಬಿಟ್ಟಿದೆ. ಅವರು ಹತ್ತೂವರೆಗೆ ಹೋಗುತ್ತಾರೆ ಐದು ಗಂಟೆಗೆ ವಾಪಸ್ಸು ಬರುತ್ತಾರೆ. ಅದರ ಬಗ್ಗೆ ನಾನು ಮಂತ್ರಿಯಾಗಿದ್ದಾಗ ಯೋಚನೆ ಮಾಡಿದ್ದೆ, ಯೂನಿವರ್ಸಿಟಿಯನ್ನೆ ಶಿಫ್ಟ್ ಮಾಡಿ ಎಲ್ಲೋ ಮೈಸೂರು ಕಡೆಗೂ, ತುಮಕೂರು ಕಡೆಗೂ ಎಲ್ಲಿ ಜಮೀನು ಜಾಸ್ತಿ ಸಿಗುತ್ತದೆ ಅಲ್ಲಿಗೆ ಶಿಫ್ಟ್ ಮಾಡಿದರೆ ಯೂನಿವರ್ಸಿಟಿಯಿಂದ ಅಲ್ಲಿಯ ರೈತರಿಗೆ ಉಪಯೋಗವಾಗುತ್ತದೆ. ಇಲ್ಲಿ ಇದ್ದರೆ ಅದು ಅರ್ಬನೈಸ್ಡ್ ಆಗಿದೆ. ಈ ರೀತಿ ಆಗಬಾರದು ಎನ್ನುವ ಬಗ್ಗೆ ನಾನು ಚಿಂತನೆಯನ್ನು ಮಾಡಿದ್ದೆ. ಇದರ ಮೇಲೆ ಚಿಂತನೆಯನ್ನು ಮಾಡಬೇಕು ಎನ್ನುವುದನ್ನು ಕೂಡ ನಾನು ಈ ಸಮಯದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಇವತ್ತು ಕೃಷಿ ಒಂದು ದೊಡ್ಡ ಉದ್ದಿಮೆಯಾಗುವಂತೆ ಮಾಡಬೇಕೆಂದು ನಾನು ಹೇಳುತ್ತೇನೆ. ಇವತ್ತು ಕೃಷಿ ಉದ್ದಿಮೆಯಾಗಿ ಪರಿವರ್ತನೆಯಾದರೆ ಅನೇಕ ಬೆನಿಫಿಟ್ಸ್ ಸಿಗುತ್ತದೆ. ರಾಜ್ಯ ಸರ್ಕಾರ ಅಥವಾ ಕೇಂದ್ರ ಸರ್ಕಾರದಿಂದ ಸಿಗುತ್ತವೆ. ಈ ದಿಕ್ಕಿನಲ್ಲಿ ಚಿಂತನೆ ಮಾಡಲಿಲ್ಲ ಸರ್ಕಾರ ಎಂದು ನಾನು ಈ ಸಮಯದಲ್ಲಿ ಹೇಳಲಿಕ್ಕೆ ಇಚ್ಛೆಪಡುತ್ತೇನೆ ಈ ರಾಜ್ಯದಲ್ಲಿ ಸರ್ವತೋಮುಖ ಅಭಿವೃದ್ಧಿಯನ್ನು ಸಾಧಿಸಬೇಕಾದರೆ ಅಭಿವೃದ್ಧಿ ಎನ್ನುವ ರಥಕ್ಕೆ ಕೃಷಿ ಮತ್ತು ಕೈಗಾರಿಕೆ ಎನ್ನುವ ಎರಡು ಚಕ್ರಗಳಾಗಿ ಸಮಾನತೆಯಿಮದ ಗುರ್ತಿಸಿ ಅಭಿವೃದ್ಧಿ ಪಡಿಸಬೇಕಾಗುತ್ತದೆ. ಕೃಷಿ ಮತ್ತು ಕೈಗಾರಿಕೆ ಎರಡು ಕಣ್ಣುಗಳಾಗಿವೆ ಈ ದೇಶದ ಅಭಿವೃದ್ಧಿಗೆ.

ಶ್ರೀ **ಜೆ.ಸಿ.ಮಾಧುಸ್ವಾಮಿ:** ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಕೃಷಿ ಮಂತ್ರಿಗಳು ಈ ಕಡೆ ಗಮನಹರಿಸಬೇಕು. ಕೃಷಿ ವಿಶ್ವವಿದ್ಯಾನಿಲಯದಲ್ಲಿ ಕಳೆದ ಎರಡು ತಿಂಗಳುಗಳ ಹಿಂದೆ ಪ್ರಮೋಷನ್ ಕೊಟ್ಟರು. ಬೋರ್ಡ್ ಆಫ್ ರೀಜೆಂಟ್ಸ್ ಸೇರಿಕೊಂಡು ಸೀನಿಯಾರಿಟಿಯನ್ನು ಬಿಟ್ಟು ಒಂದಷ್ಟು ಜನರನ್ನು ಪ್ಯಾನೆಲ್‌ನಲ್ಲಿ ತಂದರು, ಟೂರ್ ಹೋದರು. ಮತ್ತೆ ಬಂದರು, ಯಾವುದೋ ಒಂದು

ಒಳ್ಳೆಯ ಹೋಟೇಲ್‌ನಲ್ಲಿದ್ದರು. ಸೆಲೆಕ್ಟ್ ಮಾಡಿದರು ಊರು ಬಿಟ್ಟು ಹೋದರು. ಏನು ನಡೆಯುತ್ತಿದೆ ಈ ಕೃಷಿ ವಿಶ್ವವಿದ್ಯಾನಿಲಯದಲ್ಲಿ ಎಂಬು ಅರ್ಥವಾಗುತ್ತಿಲ್ಲ. ಸೀನಿಯಾರಿಟಿ ಇರುವಂಥವರನ್ನು ಯಾರೂ ಕೇಳಲಿಲ್ಲ. ಯಾರನ್ನು ರೀಜೆಂಟ್ಸ್ ರೆಕ್ಮೆಂಡ್ ಮಾಡುತ್ತಾರೆ, ಯಾರು ಅವರಿಗೆ ಟೀಚರ್ಸ್ ಆಗಿದ್ದರೂ ಅವರಿಗಿಂತ ಮೇಲ್ಗಡೆ ಬಂದಿದ್ದಾರೆ ಇದರ ಬಗ್ಗೆ ಸ್ವಲ್ಪ ತನಿಖೆಯಾಗಬೇಕು.

ಶ್ರೀ ಕೆ. ಶ್ರೀನಿವಾಸಗೌಡ: ಮಾನ್ಯ ಉಪಾಧ್ಯಕ್ಷರೆ, ರೈತರ ಏಳಿಗೆಗೆ ಒಂದು ಅಭಿವೃದ್ಧಿಯ ಕೇಂದ್ರಬಿಂದುವಾಗಬೇಕು. ಇಲ್ಲಿ ನಾನು ಅನೇಕ ವಿಷಯಗಳನ್ನು ಪ್ರಸ್ತಾಪ ಮಾಡಿದ್ದೇನೆ. ಬಜೆಟ್‌ನಲ್ಲಿ ಇವತ್ತು ಬೆಂಬಲ ಬೆಲೆ ಬಗ್ಗೆ ಹೇಳಿದ್ದರು. ಅಮೇರಿಕಾದೇಶ ಕೂಡ ಇವತ್ತು ರೈತನಿಗೆ ಬೆಂಬಲ ಬೆಲೆಯಲ್ಲಿ ಹೆಚ್ಚಿನ ಪ್ರಮಾಣದ ಸೌಲಭ್ಯವನ್ನು ನೀಡುತ್ತಿರುವುದು ತಮಗೆಲ್ಲಾ ತಿಳಿದ ವಿಷಯ. ಸುಮಾರು 350 ಬಿಲಿಯನ್ ಡಾಲರ್ ಕೃಷಿಗೆ ರಿಯಾಯಿತಿಯನ್ನು ಆ ದೇಶ ಕೊಡುತ್ತಿದೆ. ಒಂದು ಅಭಿವೃದ್ಧಿ ದೇಶ ಅಷ್ಟೊಂದು ರಿಯಾಯ್ತಿಯನ್ನು ನೀಡುತ್ತಿದೆ. ಆದರೆ ನಮಗೆ ಎಷ್ಟು ಬರುತ್ತದೆ ನಮ್ಮ ಬಜೆಟ್‌ನಲ್ಲಿ 300 ಕೋಟಿ ರೂಪಾಯಿಗಳನ್ನು ಇಟ್ಟಿದ್ದೀರಿ. ಏಕೆ ಇದನ್ನು ನಾನು ಹೇಳುತ್ತಿದ್ದೇನೆಂದರೆ. ರೈತರಿಗೆ ಮಲತಾಯಿ ಧೋರಣೆಯನ್ನು ತೋರಿಸುವಂಥ ವ್ಯವಸ್ಥೆ ಇದು 60 ವರ್ಷಗಳಿಂದ ಬಂದಂಥ ವ್ಯವಸ್ಥೆ ಎಂದು ನಾನು ಹೇಳುತ್ತೇನೆ. ಇವತ್ತು ನಾನು ನೊಂದು ಹೇಳಬೇಕಾಗುತ್ತದೆ. ಈ ದೇಶದಲ್ಲಿ ಒಂದು ದಿವಸ ಆಹಾರಪದಾರ್ಥವನ್ನು ನಿಜವಾಗಲೂ ಕೂಡ ಬೇರೆ ದೇಶಕ್ಕೆ ಕಳುಹಿಸುವಂಥ ಶಕ್ತಿ ಬಂದಿತ್ತು. ಇವತ್ತು ಗೋಧಿ, ಸಕ್ಕರೆ ಅದನ್ನು ಇಂಪೋರ್ಟ್ ಮಾಡಿಕೊಳ್ಳುವಂಥ ಮಟ್ಟಕ್ಕೆ ನಾವು ತಲುಪಿದ್ದೇವೆ. ಮುಂದಿನ ದಿನಗಳಲ್ಲಿ ಕೃಷಿಕರನ್ನು ನಾವು ಅಸಡ್ಡೆ ಮಾಡಿದರೆ, ಮುಂದಿನ ದಿನಗಳಲ್ಲಿ ಕಷ್ಟಕ್ಕೆ ದೇಶ ಸಿಲುಕುತ್ತದೆಂದು ಹೇಳಲಿಕ್ಕೆ ನಾನು ಇಚ್ಛೆ ಪಡುತ್ತೇನೆ. ಇವತ್ತು ಕೃಷಿ ಮೇಲೆ ಅವಲಂಬಿತರಾಗಿರುವಂಥ 66.06 ಇರತಕ್ಕ ಜನಾಂಗಕ್ಕೆ ನಾವು ರಿಯಾಯ್ತಿ ಸೌಲಭ್ಯವನ್ನು ಕೊಡಬೇಕು, ಇದನ್ನು ಕಡಿತ ಮಾಡಿದರೆ ಸಮಂಜಸವಾಗುವುದಿಲ್ಲ. ಕೆಲವು ಜಾಗದಲ್ಲಿ ರೈತರಿಗೆ ಸೌಲಭ್ಯವನ್ನು ಕಡಿಮೆ ಮಾಡಿದರು ಎನ್ನುವ ಬಗ್ಗೆ ಅಲ್ಲಿ ಇಲ್ಲಿ ಕೆಲವು ಅಧಿಕಾರಿ ವರ್ಗದವರು, ನಾನು ಆಗಲೇ ಹೇಳಿದೆ, they are not born from the mother`s womb. Some bureaucrats have come from the heaven. ಅದನ್ನು ಯಾವ ತರಹ ಹೇಳಬೇಕೆಂದರೆ, ಅವರು ತಾಯಿಯ ಹೊಟ್ಟೆಯಲ್ಲಿಯೇ ಹುಟ್ಟಿಲ್ಲ. ಕೆಲವರು ಸ್ಯಾಡಿಸ್ಟ್‌ಗಳಿದ್ದಾರೆ. ನಾನು ಎಲ್ಲಾ ಅಧಿಕಾರಿಗಳು ಎಂದು ಹೇಳುವುದಿಲ್ಲ. ಇದನ್ನು ತಹಬದಿಗೆ ತರುವಂಥ ರಾಜಕೀಯ ಇಚ್ಛಾಶಕ್ತಿ ಇದ್ದರೆ ಮಾತ್ರ ಇದು ಆಗುತ್ತದೆ ಎನ್ನುವಂಥದ್ದನ್ನು ಇವತ್ತು ನಾನು ಈ ಸಮಯದಲ್ಲಿ ಹೇಳುತ್ತೇನೆ. ಇವತ್ತು ದೇಶವು ವಿಶ್ವ ವಾಣಿಜ್ಯ ಒಪ್ಪಂದದ ಷರತ್ತಿಗೆ ನಿಜವಾಗಲೂ ಕೂಡ ನಾವು ಅದರ ಅಡಿಯಲ್ಲಿ ಬಂದಿದ್ದೇವೆ. ಆ ಅಡಿಯಲ್ಲಿ ಬಂದಾಗ ನಮ್ಮ ರೈತರನ್ನು ಆ ಮಟ್ಟದಲ್ಲಿ ಸ್ಪರ್ಧಾತ್ಮಕವಾದ ಪರಿಸ್ಥಿತಿಗೆ ನಾವು ಬರದಿದ್ದರೆ ಮುಂದಿನ ದಿನಗಳಲ್ಲಿ ನಮ್ಮ ಕೃಷಿಕ ಒಬ್ಬ ಭಿಕ್ಷುಕನಾಗುತ್ತಾನೆಯೇ ಪುನ: ಅವನೊಬ್ಬ ರೈತನಾಗಿ ಉಳಿಯಲಿಕ್ಕೆ ಸಾಧ್ಯವಿಲ್ಲ ಎನ್ನುವುದರ ಬಗ್ಗೆ ನಾವೆಲ್ಲರೂ ಚಿಂತನೆಯನ್ನು ಮಾಡಬೇಕು. ಇವತ್ತು ಇದಕ್ಕೆಲ್ಲಾ ಹೆಚ್ಚಿನ ಆದ್ಯತೆಯನ್ನು ಕೊಡಬೇಕೆಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಕೃಷಿ

ರಂಗದಲ್ಲಿ ಒಂದು ಕ್ರಾಂತಿಯನ್ನು ತರಲು ಸಾಧ್ಯವೆಂದು ನನ್ನ ದೃಢ ನಂಬಿಕೆ ಇದೆ. ಈ ಒಂದು ವರ್ಷದಲ್ಲಿ ಸುಮಾರು 2300 ಕೋಟಿ ರೂಪಾಯಿ ಹೆಚ್ಚಿನ ಆರ್ಥಿಕ ಹೊರೆಯನ್ನು ನಿರ್ವಹಿಸಬೇಕಾಗುತ್ತದೆ. ನಮ್ಮ ರಾಜ್ಯದಲ್ಲಿ ಸುಮಾರು 2300 ಕೋಟಿ ರೂಪಾಯಿ ನೀವು ನೀಡಿದರೆ ಒಂದು ಹೊಸ ಕ್ರಾಂತಿಯನ್ನೇ ತರಬಹುದು. ಬಹುಶಃ ಕೇಂದ್ರ ಸರ್ಕಾರ ಇದರಲ್ಲಿ 50 ಪಾಲನ್ನು

6-00 ಪಿ.ಎಂ.

ಭರಿಸುವಂಥ ಶಕ್ತಿ ಇದೆ ಅವರು ಕೊಡುತ್ತಾರೆ. ಇವತ್ತು ಕೇಂದ್ರ ಸರ್ಕಾರವೂ ಕೂಡ ಶೇಕಡಾ 7ರ ಬಡ್ಡಿ ದರದಲ್ಲಿ ಕೃಷಿಕರಿಗೆ ಸಾಲವನ್ನು ಕೊಡಲಿಕ್ಕೆ ಬಂದಿದೆ ಅದನ್ನು ನಾವು ನಿಜವಾಗಲೂ ಕೂಡ ಪ್ರಶಂಸೆ ಮಾಡಬೇಕು. ಅವರು ಕೂಡ 4 ಪರ್ಸೆಂಟ್ ತರಲಿಕ್ಕೆ ಆದ್ಯತೆ ನೀಡುವಂತೆ ಅವರ ಮೇಲೆ ಒತ್ತಡಗಳನ್ನು ಹೇರಬೇಕು ಎನ್ನುವುದನ್ನೂ ಕೂಡ ನಾನು ಈ ಸಮಯದಲ್ಲಿ ಹೇಳಿ. ಇವತ್ತು ಹಾರ್ಟಿಕಲ್ಚರ್ ಮಿಷನ್ ತರುವುದು ಇದೊಂದು ಒಳ್ಳೆಯ ವಿಷಯ.

ಶ್ರೀ ಎಸ್. ಕುಮಾರ ಬಂಗಾರಪ್ಪ: ಮಾನ್ಯ ಅಧ್ಯಕ್ಷರೆ, ಮಾನ್ಯ ಶ್ರೀನಿವಾಸಗೌಡರು ಮಾತನಾಡುವಾಗ ಎಲ್ಲಾ ಪ್ರಾಬ್ಲಮ್‌ಗಳು ಶುರುವಾಗಿರುವುದು ಬಹಳ ವರ್ಷಗಳಿಂದ, ಅಗ್ರಿಕಲ್ಚರ್ ನ್ಯಾಷನಲ್ ಪಾಲಿಸಿಯನ್ನು ನಾವು ತರಲಿಲ್ಲವೆಂದರೆ, ಈಗ ಸ್ಟೇಟ್ ಹಾಗೂ ಸೆಂಟ್ರಲ್ ಸೆಕ್ಟಾರ್ ಎಂದು ಮಾಡಲಾಗಿದೆ. ಅವರು ಸಮಗ್ರವಾಗಿ ಹೇಳಿದರು. ಜಪಾನ್‌ದಲ್ಲಿ 7 ದಿವಸ ಸ್ಟ್ರೈಕ್ ಮಾಡಿದರೆ ಸರ್ಕಾರವನ್ನು ಉರುಳಿಸಬಹುದೆಂದು ನೀವು ಹೇಳಿದಿರಿ. Why do they have that? ಏತಕ್ಕೋಸ್ಕರ developed countries ನಲ್ಲಿ You have a Centralised National Policy. ಅದಕ್ಕೆಲ್ಲದಕ್ಕೂ ಕೂಡ ಒಂದೇ ಸಮಗ್ರವಾಗಿರತಕ್ಕಂಥ ಕಾರ್ಯಕ್ರಮಗಳು ಇವೆ. ಇಲ್ಲಿ ಏನಾಗುತ್ತದೆಂದರೆ, ನೀರು ಇದ್ದವರು ನೀರು ಇಲ್ಲದಿದ್ದವರು ನಾನಾ ಬೆಳೆಗಳಿಗೆ ತನ್ನದೇ ಇಚ್ಛಾನುಸಾರ ಬೆಳೆಗಳನ್ನು ಮಾಡುವುದಕ್ಕೋಸ್ಕರ, ನಮಗೆ ಸಮಗ್ರವಾಗಿ ಇದರ ಬಗ್ಗೆ ಪಾಲಿಸಿಯ ಒಂದು ಲೈನ್ ಇಲ್ಲ. ಒಂದು ನಿರ್ದಿಷ್ಟವಾಗಿರತಕ್ಕಂಥ ಗುರುತರವಾದ ಬೆಲೆಯು ಕೂಡ ಸಿಗುತ್ತಿಲ್ಲ. ಅದರಲ್ಲಿಯೂ especially, Globalization, Liberalization ಆದ ಮೇಲಂತೂ ನಾವು ಯಾವ ಕಡೆಯಿಂದ ಯಾವ ಕಡೆ ಹೋಗುತ್ತೇವೆ ಎನ್ನುವುದೇ ಗೊತ್ತಾಗುತ್ತಿಲ್ಲ. ಆ ನಿಟ್ಟಿನಲ್ಲಿ ನೀವು National policy ಯನ್ನು present ಮಾಡತಕ್ಕ ಕೆಲಸ ಮಾಡಿದರೆ, ಆವಾಗ ಇದೆಲ್ಲಕ್ಕೂ ಕೂಡ ಅನುಕೂಲವಾಗುತ್ತದೆ.

ಶ್ರೀ ಬಿ. ಆರ್.ಪಾಟೀಲ್ (ಆಳಂದ): ಮಾನ್ಯ ಉಪಾಧ್ಯಕ್ಷರೆ. ಮಾನ್ಯ ಶ್ರೀನಿವಾಸಗೌಡರು ಈ ಯೂನಿವರ್ಸಿಟಿಯ ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ. ಏಕೆಂದರೆ ಅವರು ಹಿಂದೆ ಸಚಿವರಾಗಿದ್ದಂಥವರು. ಈ ರೀಸರ್ಚ್ ಮಾಡುವುದಕ್ಕೆ ಸರ್ಕಾರದಿಂದ ಎಷ್ಟು ಸಹಾಯಧನವನ್ನು ಕೊಡುತ್ತಿದ್ದರೆನ್ನುವುದನ್ನು ಸ್ವಲ್ಪ ತಮ್ಮ ಹತ್ತಿರ ವಿವರ ಇದ್ದರೆ ಹೇಳಬೇಕು. ಇವತ್ತು ಏನಾಗಿದೆ ಎಂದರೆ, ಸಂಪೂರ್ಣವಾಗಿ ಯೂನಿವರ್ಸಿಟಿಗಳು ಮಲ್ಟಿನ್ಯಾಷನಲ್ ಕಂಪನಿಗಳವರಿಂದ ದುಡ್ಡು ತೆಗೆದುಕೊಂಡು ರೀಸರ್ಚ್ ಮಾಡುತ್ತಿದ್ದರೆ. ಈ ಖಾಸಗಿ ಸಂಸ್ಥೆಯವರು ದುಡ್ಡು ಕೊಟ್ಟ ಮೇಲೆ ಎಷ್ಟು ಪ್ರಾಮಾಣಿಕವಾಗಿ

ಆ ಯೂನಿವರ್ಸಿಟಿಗಳು ನಿಷ್ಪಕ್ಷಪಾತವಾಗಿ ನಮಗೆ ಸಂಶೋಧನೆ ಮಾಡುವುದಕ್ಕೆ ಸಾಧ್ಯವಾಗುತ್ತದೆ? ಎಷ್ಟು ಒಳ್ಳೆಯ ಬೀಜಗಳನ್ನು ಕೊಡುವುದಕ್ಕೆ ಸಾಧ್ಯವಾಗುತ್ತದೆ. ತಾವು ಸಚಿವರಾಗಿದ್ದವರು ಇದರ ಬಗ್ಗೆ ಸ್ವಲ್ಪ ಗಮನಹರಿಸಿದರೆ ನಮಗೂ ಕೂಡ ಸ್ವಲ್ಪ ಅನುಕೂಲವಾಗುತ್ತದೆ.

ಶ್ರೀ ಕೆ. ಶ್ರೀನಿವಾಸಗೌಡ: ಹೋದವರ್ಷ 10–10 ಕೋಟಿ ರೂಪಾಯಿಗಳಂತೆ ರೀಸರ್ಚ್‌ಗೆಂದು ಕೊಟ್ಟಿದ್ದರು. ನಾನು 25–25 ರಂತೆ 50 ಕೋಟಿ ರೂಪಾಯಿಗಳನ್ನು ಕೇಳಿದ್ದೆ. ಈ ವರ್ಷ ಎಷ್ಟೇ ಕೊಟ್ಟಿದ್ದಾರೆನ್ನುವ ಬಗ್ಗೆ ಮಾನ್ಯ ಕೃಷಿ ಸಚಿವರು ಹೇಳಬೇಕಾಗುತ್ತದೆ. ಬಜೆಟ್‌ನಲ್ಲಿ ಅದನ್ನು ಎಲ್ಲೂ ತೋರಿಸಲಿಲ್ಲ. ಸ್ಪೇಷಲ್ಲಾಗಿ ಹೋದಸಲ ಕೊಟ್ಟಿದ್ದರು. ಇವತ್ತು ಏನು ಈ ಹಾರ್ಟಿಕಲ್ಚರ್ ಮಿಷನ್ ಅನ್ನು ತಂದರು. ಅದಕ್ಕಾಗಿ 40 ಕೋಟಿ ರೂಪಾಯಿಗಳಷ್ಟು ರಿಲೀಸ್ ಆಗಿದೆ. ಅಲ್ಲಿ ಇನ್ನೂ ಹಣ ಖರ್ಚಾಗಿರುವುದಿಲ್ಲವೆಂದು ನಾನು ಭಾವಿಸುತ್ತೇನೆ. ನನಗೆ ಬಂದ ಮಾಹಿತಿಯ ಪ್ರಕಾರ ಆ ಹಣ ಇನ್ನೂ ಕೂಡ ಖರ್ಚಾಗಿಲ್ಲ. ಏತಕ್ಕಾಗಿ ಖರ್ಚಾಗಿಲ್ಲ ಎಂಬುದರ ಬಗ್ಗೆ ಇದರ ಮೇಲೆ ಸರ್ಕಾರ ಗಮನವನ್ನು ಹರಿಸಬೇಕಾಗಿದೆ. ಕೇಂದ್ರ ಸರ್ಕಾರದಿಂದ ಸುಮಾರು 200 ಕೋಟಿ ಚಿಲ್ಲರೆ ರೂಪಾಯಿಗಳಷ್ಟು ಹಣ ನಮ್ಮ ರಾಜ್ಯಕ್ಕೆ ಬರುತ್ತಿದೆ. ಆ ಹಣವನ್ನು ಮಾರ್ಚಿಯೊಳಗಡೆ 42 ಅಥವಾ 45ಕೋಟಿ ರೂಪಾಯಿಗಳನ್ನು ಖರ್ಚು ಮಾಡಬೇಕಾಗಿತ್ತು If I am right. - - ನಾನು ಆ ಸಂಖ್ಯೆಯನ್ನು ಮರೆತಿದ್ದೇನೆ. ಆ ಹಣವನ್ನು ನೀವು ಖರ್ಚು ಮಾಡದೇ ಇದ್ದರೆ ಮುಂದೆ ಬರುವಂತಹ ಹಣ ನಮಗೆ ಬರುವುದಿಲ್ಲ. ನ್ಯಾಷನಲ್ ಹಾರ್ಟಿಕಲ್ಚರ್ ಮಿಷಿನ್‌ನಿಂದ ಗೌರ್ನಮೆಂಟ್ ಆಫ್ ಇಂಡಿಯಾದ ಹಣ ಸುಮಾರು 85.21 ಕೋಟಿ ರೂಪಾಯಿಗಳಷ್ಟು ಖರ್ಚು ಮಾಡಬಹುದೆಂದು Integrated Developent of Horticulture in Karnataka by March 2006.
ಈಗ ಆಲ್‌ಮೌಸ್ಟ್ 45.201 ಕೋಟಿ ರೂ ಈಗಾಗಲೇ ರಿಲೀಸ್ ಆಗಿದೆ. It is an unfortunate. ಏಕೆಂದರೆ ಇದುವರೆವಿಗೂ ಕೂಡ ಹಣ ಖರ್ಚು ಮಾಡಲಿಲ್ಲ. ನಮಗೆ ರಿಲೀಸ್ ಆದಂತಹ ಹಣವನ್ನು ಖರ್ಚು ಕೂಡ ಮಾಡಿರುವುದಿಲ್ಲ. ಇದನ್ನು ನಾನು ಯಾವ ಭಾಷೆಯಲ್ಲಿ ಮಾತನಾಡಬೇಕೋ ನನಗೆ ಅರ್ಥವಾಗುತ್ತಿಲ್ಲ.

ಶ್ರೀ ಬಂಡೆಪ್ಪ ಕಾಶಂಪೂರ್ (ಕೃಷಿ ಸಚಿವರು): ಸನ್ಮಾನ್ಯ ಉಪಾಧ್ಯಕ್ಷರೆ ಸನ್ಮಾನ್ಯ ಸದಸ್ಯರು ಮಾರ್ಚಿಗಿಂತ ಸ್ವಲ್ಪ ದಿವಸ ಹಿಂದೆ ನಾವು ಬಂದಿದ್ದೇವೆ. ಅದಕ್ಕೆ ಮೊದಲು ತಾವೇ ಅಧಿಕಾರದಲ್ಲಿದ್ದೀರಿ. ನಾನು ಬಂದಾಗಲೂ ಕೂಡ ಇದರ ಬಗ್ಗೆ ಲೆಕ್ಕ ಹಾಕಿದೆ. ಹಣವನ್ನು ಖರ್ಚು ಮಾಡಬೇಕಾಗಿತ್ತು. ಅದನ್ನು ಮಾಡಲಿಲ್ಲ. ಈ ವರ್ಷದ ಬಜೆಟ್ ಮಾತ್ರ ಖರ್ಚು ಮಾಡುವಂತಹ ವ್ಯವಸ್ಥೆಯನ್ನು ಮಾಡಿದ್ದಾರೆ.

ಶ್ರೀ ಕೆ.ಆರ್.ರಮೇಶ್‌ಕುಮಾರ್: ಮಾನ್ಯ ಸಚಿವರೆ. ಪ್ರಾಬ್ಲಮ್ ಇರುವುದನ್ನು ಹೇಳುತ್ತೇನೆ ಕೇಳಿ ನೀವು ಮತ್ತು ಅವರು ಖರ್ಚು ಮಾಡುವುದಲ್ಲ. ನ್ಯಾಷನಲ್ ಹಾರ್ಟಿಕಲ್ಚರ್ ಬೋರ್ಡಿಗೆ ಸಾಲ ಬೇಕೆಂದು ನಾವು ಅಪ್ಲಿಕೇಷನ್‌ನ್ನು ಹಾಕಿಕೊಳ್ಳುತ್ತೇವೆ. ಅವರ ರೆಪ್ರಸೆಂಟೇಟೀವ್ ಒಬ್ಬರು ಇಲ್ಲಿ ಇದ್ದರೆ. ಅವರು ಇಲ್ಲಿಗೆ ಬಂದು ಇನ್ಸ್‌ಪೆಕ್ಷನ್ ಮಾಡಿ ಹೋಗುತ್ತಾರೆ. ಮತ್ತೆ ಅವರು ಪೂನಾಕ್ಕೆ ಬರೆಯಬೇಕು.

ಅವರು ಅಪ್ರೈಸಲ್ ಮಾಡಿ, ಪ್ರಾಜೆಕ್ಟ್ ಫಿಸಿಬಿಲಿಟಿ ಇದೆಯೆಂದು ಅಪ್ರೂವ್ ಮಾಡಬೇಕು. ಅದಾದ ನಂತರ ಬ್ಯಾಂಕಿನವರು ಮುಂದೆ ಬರಬೇಕು. ನಾನು 81 ಲಕ್ಷ ರೂಪಾಯಿಗಳ ಸಾಲವನ್ನು ತೆಗೆದುಕೊಂಡಿದ್ದೇನೆ. ಅದಕ್ಕೆ ರೇಟ್ ಆಫ್ ಇಂಟ್ರೆಸ್ಟ್ ಎಷ್ಟು ಗೊತ್ತೇ. 14 ಪರ್ಸೆಂಟ್ ಇಂಟ್ರೆಸ್ಟ್, ನಾನು rate of interest ಗೆ ಇನ್ ಪ್ರಿನ್ಸಿಪಲ್ ಒಪ್ಪಿಕೊಳ್ಳದೆ ಹೋದರೆ, ನಮಗೆ ಲೋನ್ ರಿಲೀಸ್ ಮಾಡುವುದಿಲ್ಲ. ಈಗ ನಾನು ಏನು ಮಾಡಿದ್ದೇನೆಂದರೆ, ಅದನ್ನು ತೆಗೆದುಕೊಂಡು ನಾನು ಮತ್ತೆ I should srart the fight. – ಇಷ್ಟು ಹಣವನ್ನು ಕಟ್ಟುವುದಿಲ್ಲ ಅದು ಜಾಸ್ತಿಯಾಗುತ್ತದೆ ಎಂದು ಮಾಡಿದ್ದೇನೆ. Waste land development, horticulture development ಮತ್ತೊಂದಕ್ಕೆ ಅವರು ಹಾಕಿರುವಂತಹ ಕಂಡಿಷನ್ ಯಾವ ತರಹ ಬುದ್ಧಿವಂತಿಕೆಯನ್ನು ಮಾಡಿದ್ದರೆಂದರೆ, ಮಹಾರಾಷ್ಟ್ರ ಹಾಗೂ ಹರಿಯಾಣದಲ್ಲಿ ಕೆಲವರಿಗೆ 80 ಪರ್ಸೆಂಟ್ ಏನು ಬರುತ್ತದೆ, ಅವರು ತೆಗೆದುಕೊಂಡು ಹೋಗುತ್ತಾರೆ. ಇಲ್ಲಿ ಕರ್ನಾಟಕದಲ್ಲಿ 15 ಜನರಿಗೆ ಮಾತ್ರ ಸಿಕ್ಕಿದೆ. ಆ 15 ಜನರಲ್ಲಿ ಸ್ವಲ್ಪ ಹೆಚ್ಚು ಕಡಿಮೆ 10 ಜನ ಒಂದೇ ಕುಟುಂಬಕ್ಕೆ ಸೇರಿದವರಾಗಿದ್ದಾರೆ. ಯಾರ ಕಡೆ ಬ್ಲಾಕ್ ಮನಿ ಇತ್ತೋ, ಯಾರಿಗೆ ಕನ್‌ವರ್ಷನ್‌ಗೆ ಒಂದು ರೂಟ್ ಬೇಕಾಗಿತ್ತೋ, ಯಾರು ಎಸ್ಟೇಟ್‌ಗಳನ್ನು ಮಾಡಿದ್ದಾರೆ, ಅವರಿಗೆ ಇವೆಲ್ಲವೂ ಸಿಕ್ಕಿತು. ನೀವು ಬನ್ನಿ ಒಂದು ದಿವಸ ನಾನು ಕರೆದುಕೊಂಡು ಹೋಗುತ್ತೇನೆ, ನಮ್ಮ ಊರು ಬಹಳ ದೂರ ಆಗುವುದಿಲ್ಲ. Entire waste land, fallow land ನ್ನೂ excavators ಇಟ್ಟುಕೊಂಡು ಕಲ್ಲುಗಳನ್ನು ತೆಗೆದು ಆಚೆಗೆ ಹಾಕಿ ಮಣ್ಣನ್ನು ತಂದು ತುಂಬಿ ಲೆವಲ್ ಮಾಡಿ ತೋಟ ಮಾಡಿರುತ್ತೇವೆ. ನಮ್ಮ ಜೀವವನ್ನೆಲ್ಲಾ ಅಲ್ಲಿ ತೆತ್ತು ಪುನರ್ಜನ್ಮ ಪಡೆದುಕೊಂಡು ಮಾಡಿದ್ದೇವೆ ನಾವು. ಆದರೆ ಬೆಲೆ ಇಲ್ಲ. If I don`t agree to pay that rate of interest, I will not get the loan. ಏತಕ್ಕಾಗಿ ಖರ್ಚು ಆಗುತ್ತಿಲ್ಲವೆಂದರೆ, ಅವರು ಸಬ್ಸಿಡಿಗೆ ಮಾತ್ರ temptation ಕೊಡುತ್ತಾರೆ ಮಾನ್ಯ ಶ್ರೀನಿವಾಸಗೌಡರೆ, ಎನ್‌ಹೆಚ್‌ಕೆಯವರು, ಮಿಷನ್‌ನವರು, ಲೋನ್‌ಗೆ ಅವರದು ಯಾವ ಜವಾಬ್ದಾರಿಯೂ ಕೂಡ ಇಲ್ಲ. ನಮ್ಮ ಯಾವ ಕೋ ಆಪರೇಟೀವ್ ಇನ್‌ಸ್ಟಿಟ್ಯೂಷನ್‌ಗೂ ಕೂಡ ಆ ಪ್ರಮಾಣದ ಸಾಲವನ್ನು ಕೊಡುವಂತಹ ಶಕ್ತಿ ಇಲ್ಲ. So, invariably, - ನಾವು ಬೆಳಿಗ್ಗೆ ನಿಮ್ಮ ಮನಗೆ ಬಂದಾಗ ತೋಟದ ವಿಚಾರದ ಬಗ್ಗೆ ಮಾತನಾಡಿದೆ. ಇನ್ನೂ ಹೆಚ್ಚು ಸಮಯವಿರಲಿಲ್ಲವೆಂದು ವಾಪಸ್ಸು ಬಂದುಬಿಟ್ಟೆ. ಇವೆಲ್ಲವೂ ಕಷ್ಟವಿದೆ. ಇದರ ಬಗ್ಗೆ ಪ್ಲಾನ್ ಮಾಡುವಾಗಲೇ ಮೇಲೆ ಕುಳಿತಿರುವಂತಹ ದೊಡ್ಡ ಮನುಷ್ಯರು ಯಾವ ತರಹ ಸ್ಕೀಮ್‌ಗಳನ್ನು ರೂಪಿಸುತ್ತಾರೆಂದರೆ, ಇದು ನಮಗೆಲ್ಲಾ ಎಟುಕಲೇಬಾರದು. ಕೆಲವೇ ಪ್ರತಿಷ್ಠಿತರಿಗೆ ಬೇರೆ ಬೇರೆ ಚಟುವಟಿಕೆಗಳಿಗೆ ಅನುಕೂಲವಾಗುವಂತೆ ಇದಕ್ಕೆ ಹಾರ್ಟಿಕಲ್ಚರ್ ಇನ್ನೊಂದು ಮತ್ತೊಂದು ಎಂದು ನೆಪ ಒಡ್ಡುತ್ತಾರೆ. ನಿಮಗೆ ಪ್ರಾಮಾಣಿಕತೆ ಇದ್ದರೆ ಅವರು ಮಾಡಲಿಲ್ಲ. ನೀವು ಅಧಿಕಾರವನ್ನು ವಹಿಸಿಕೊಂಡಿದ್ದೀರಿ. ಸೆಪರೇಟಾಗಿ ಕೋ ಆಪರೇಟೀವ್ ಸೆಕ್ಟಾರ್‌ನಿಂದ ಸುಮಾರು 6-7 ಪರ್ಸೆಂಟ್ಸ್ ನಾವು ಇದಕ್ಕೆ ಇಷ್ಟು ಹಣ ಎಂದು ರಿಸರ್ವ್ ಮಾಡಿ ಹಣವನ್ನು ಕೊಡುತ್ತೇವೆ. ಅದರ ಜೊತೆಗೆ ಸಬ್ಸಿಡಿಯನ್ನು ಕೊಡುತ್ತೇವೆ. ಲೋನ್ ಕೊಡುತ್ತೇವೆಂದು

ನೀವು ಮುಂದಕ್ಕೆ ಬನ್ನಿ ಆಗ ಏಕೆ ಹಣ ಖರ್ಚಾಗುವುದಿಲ್ಲ ನೋಡಿ. ಆ 10 ಜನ ಒಂದೇ ಕುಟುಂಬಕ್ಕೆ ಸೇರಿದವರ್ಯಾರು ಎಂದು ಸ್ವಲ್ಪ ನೋಡಬೇಕು. ನಿಮಗೆ ಸ್ವಲ್ಪ ಈ ಬಗ್ಗೆ ಹೇಳಿದರೆ ಮುಜುಗರ ಆಗುತ್ತದೆ. ನೀವು ಅವರನ್ನು ಮೈಮೇಲೆ ಹಾಕಿಕೊಳ್ಳುವುದಕ್ಕೆ ಹೋಗಬೇಡಿ. They are very important family. ಅವರು ಇಲ್ಲದಿದ್ದರೆ ಇವತ್ತು ಈ ರಾಜ್ಯ ನಡೆಯುವುದಿಲ್ಲ. ನಿಮಗೆ ಅರ್ಥವಾಯಿತೇ, ನಿಮ್ಮ ಮಾಹಿತಿಗೋಸ್ಕರ ಅದರ ಬಗ್ಗೆ ತಿಳಿದುಕೊಂಡಿರಿ.

ಶ್ರೀ ಕೆ. ಶ್ರೀನಿವಾಸಗೌಡ: ಎಕ್ಸ್‌ಪೋರ್ಟ್ಸ್ ಮಾನ್ಯ ಉಪಾಧ್ಯಕ್ಷರೆ, ಗ್ಲೋಬಲ್ ಎಕ್ಸ್‌ಪೋರ್ಟ್ಸ್ ಬಂದು 5000 ಬಿಲಿಯನ್ ಡಾಲರ್ಸ್ ಅಗ್ರಿಕಲ್ಚರ್ ಕಮಾಡಿಟೀಸ್ 300 ಬಿಲಿಯನ್ ಡಾಲರ್ಸ್, ಅರದರೆ 6 ಪರ್ಸೆಂಟ್‌ನಲ್ಲಿ 13 ಲಕ್ಷದ 5 ಸಾವಿರ ಕೋಟಿ ಇವತ್ತು ಈ ಎರಡು ಸೇರಿ ರೂಪಾಯಿಗಳಲ್ಲಿ ಹೋಗುತ್ತದೆ. ನಮ್ಮ ಇಂಡಿಯಾದಲ್ಲಿ 3 ಕೋಟಿ 56 ಸಾವಿರದ 69 ಕೋಟಿ ರೂಪಾಯಿಗಳಷ್ಟು ನಮ್ಮ ದೇಶದಿಂದ ಎಕ್ಸ್‌ಪೋರ್ಟ್ಸ್ ಆಗುತ್ತದೆ. Share of agriculture export - ನಮ್ಮಲ್ಲಿ 7.83 ಅಗ್ರಿಕಲ್ಚರ್ ಎಕ್ಸ್‌ಪೋರ್ಟ್ ಇಷ್ಟೆಲ್ಲಾ ಆದರೂ ಎಷ್ಟು ಎಂದರೆ 7.83 ನಮ್ಮ ಕರ್ನಾಟಕದಲ್ಲಿ 62,639 ಕೋಟಿ ಎಕ್ಸ್‌ಪೋರ್ಟ್ ಆಗುತ್ತದೆ. ಆದರೆ ಅಗ್ರಿಕಲ್ಚರ್ ಎಕ್ಸ್‌ಪೋರ್ಟ್ 2839 ಕೋಟಿ ರೂಗಳಷ್ಟು, ಆದರೆ ನಮ್ಮ ಪರ್ಸೆಂಟೇಜ್ ಎಕ್ಸ್‌ಪೋರ್ಟ್ ಎಷ್ಟು ಎಂದರೆ 4.53 ಕೋಟಿ. ಇವತ್ತು ಎಕ್ಸ್‌ಪೋರ್ಟ್ ಪರ್‌ಫಾರ್ಮೆನ್ಸ್ ನಮ್ಮ ಸ್ಟೇಟ್‌ದ್ದು ಇವತ್ತು commoditywise - ನಾನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಕಾಫಿ ಪ್ರಾಡಕ್ಟ್ಸ್ 1999-2000ರಲ್ಲಿ 1183.93 ಕೋಟಿಯಷ್ಟು ಇತ್ತು, 2000-01ರಲ್ಲಿ 957.53ರಷ್ಟು ಇತ್ತು, 2001-02ರಲ್ಲಿ 881.42 ಇತ್ತು, 2002-03ರಲ್ಲಿ 730.65 ಕೋಟಿಯಷ್ಟು ಇತ್ತು. 2003-04ರಲ್ಲಿ 757.57 ಕೋಟಿಯಷ್ಟು ಇತ್ತು. 2004-05ರಲ್ಲಿ 7005. ಕಾಫಿಯ ಪರಿಸ್ಥಿತಿ ಹೀಗೆ ಇದೆ. 1183 ಇದ್ದದ್ದು 2004-05ಕ್ಕೆ 2005-06ರ ಫಿಗರ್ ಇಲ್ಲ. ಮತ್ತು ಸಿಲ್ಕ್ ಪ್ರಾಡಕ್ಟ್ಸ್ ಅಗ್ರಿಕಲ್ಚರ್ ಎಕ್ಸ್‌ಪೋರ್ಟ್ಸ್‌ನಲ್ಲಿ ನಾವು ಏತಕ್ಕೆ ಹಿಂದೆ ಇದ್ದೇವೆ ಎನ್ನುವುದರ ಬಗ್ಗೆ ನಾನು ಆಗಲೇ ಹೇಳಿದ್ದೇನೆ. ಸಿಲ್ಕ್ ಪ್ರಾಡಕ್ಟ್ಸ್ 521.24 99-00ರಲ್ಲಿ, 2000-01ರಲ್ಲಿ 772.39 ಕೋಟಿಯಷ್ಟು. 2001-02ರಲ್ಲಿ 672.24ಕೋಟಿ, 2002-03,746.09 ಕೋಟಿ, 2003-40,967.99 ಕೋಟಿ, 2004-05 898.80 ಕೋಟಿಯಷ್ಟು ಪುನ: ಇದು ಕಡಿಮೆ ಬಂತು. ಕ್ಯಾಷ್ಯೂ ಏಕೆಂದರೆ, ಗೇರುಬೀಜ ಬಹಳ ಅದರಲ್ಲೂ ನಮ್ಮ ಮಂಗಳೂರು ಹಾಗೂ ಕಾರವಾರ ಕಡೆ ಬೆಳೆಯುವಂತಹ ಪದಾರ್ಥ, ಅಲ್ಲಿ 1999-00ರಲ್ಲಿ 251.55 ಕೋಟಿ ರೂಪಾಯಿಗಳು, ನಾನು ಬರೀ ಕರ್ನಾಟಕದ್ದು ಮಾತ್ರ ಹೇಳುತ್ತಿದ್ದೇನೆ. 2000-01ರಲ್ಲಿ 187.98 ಕೋಟಿ ರೂಪಾಯಿಗಳು, 2001-02ರಲ್ಲಿ 163.54 ಕೋಟಿ, 2002-03, 279.83 ಕೋಟಿ, 2003-04ರಲ್ಲಿ 265.72 ಕೋಟಿ, 2004-05 518.35 ಇದು ಮಾತ್ರ ಪ್ಲಸ್ ಆಗಿದೆ. Agriculutre process food products - ನಮ್ಮಲ್ಲಿ ಏನು process food products – ಎಷ್ಟು ಕರ್ನಾಟಕದಲ್ಲಿ ಎಕ್ಸ್‌ಪೋರ್ಟ್ ಆಗಿದೆ ಎಂದರೆ, ವ್ಯಾಲ್ಯೂ 1999-2000ರಲ್ಲಿ 195.33 ಕೋಟಿ, 2000-01ರಲ್ಲಿ 237.91 ಕೋಟಿ, 2001-02ರಲ್ಲಿ 349.51, 2002-03ರಲ್ಲಿ 366.99 ಕೋಟಿ, 2003-04ರಲ್ಲಿ 361.25 ಕೋಟಿ, 2004-05ರಲ್ಲಿ 362.41 ಕೋಟಿ ರೂಪಾಯಿಗಳು, ಎಕ್ಸಪೋರ್ಟ್ ಮಾಡಿದ್ದೇವೆ. ಸ್ಪೈಸಸ್ ನಮ್ಮಲ್ಲಿ

1999–2000ರಲ್ಲಿ 61 ಕೋಟಿ 2000–01ರಲ್ಲಿ 73.74ಕೋಟಿ, 2001–02ರಲ್ಲಿ 69.12 ಕೋಟಿ, 2002–03ರಲ್ಲಿ 91.65 ಕೋಟಿ, 2003–04ರಲ್ಲಿ 99.58 ಕೋಟಿ, 2004–05ರಲ್ಲಿ 109.54 ಕೋಟಿ ರೂಪಾಯಿಗಳಷ್ಟಾಗಿದೆ. ಟೊಬ್ಯಾಕೋ ಮತ್ತು ಬೀಡಿ, ಅಗ್ರಿಕಲ್ಚರ್ ಬ್ಯಾಗ್‌ಗ್ರೌಂಡ್ ಇರುವುದನ್ನು ನಾನು ಹೇಳುವುದಕ್ಕೆ ಇಚ್ಚೆಪಡುತ್ತೇನೆ. 1999–2000ರಲ್ಲಿ 16.25 ಕೋಟಿ, 2000–01ರಲ್ಲಿ 3.23 ಕೋಟಿ, 2001–02ರಲ್ಲಿ 2.70 ಕೋಟಿ, 2002–03ರಲ್ಲಿ 3.72ಕೋಟಿ, ಮತ್ತೆ ಎಕ್ಸ್‌ಪೋರ್ಟ್ ಆಗಲಿಲ್ಲ. 2003–04, 2004–05 2005–06 ಆಗಲಿಲ್ಲ. ಬೆಂಗಳೂರು ರೋಸ್ ಆನಿಯನ್ ನಮ್ಮ ಕಡೆ ಸಣ್ಣ ಈರುಳ್ಳಿಯನ್ನು ಬೆಳೆಯುತ್ತಾರೆ. ಅದರಲ್ಲೂ ಬೆಂಗಳೂರು ಗ್ರಾಮಾಂತರ, ಕೋಲಾರ, ತುಮಕೂರು ಗ್ರಾಮಾಂತರ, ಇಲ್ಲೆಲ್ಲಾ ಇದಕ್ಕೆ ಒಳ್ಳೆಯ ಬೆಲೆ ಸಿಗುತ್ತದೆ. ಇದರಲ್ಲಿ ನಾವು ಮೊದಲನೆ ಬಾರಿ ಕಳುಹಿಸಿದಾಗ 38.62 ಕೋಟಿ 2000–01. 2001–02 ರಲ್ಲಿ 48.35 ಕೋಟಿ ರೂಪಾಯಿ 2002–03 ರಲ್ಲಿ 39.38 ಕೋಟಿ ರೂಪಾಯಿ 2003–04ರಲ್ಲಿ 51.5 ಕೋಟಿ.ರೂಪಾಯಿ 2004–05ರಲ್ಲಿ 52.57 ಕೋಟಿ ರೂಪಾಯಿ ಗರ್ನ್ಸ್‌ಗೆ ಬೇರೆ ದೇಶಗಳಲ್ಲಿ ಬಹಳ ಬೇಡಿಕೆಯಿದೆ, ಯೂರೋಪ್ ದೇಶಗಳಲ್ಲಿ ಈ ಸಣ್ಣ ಸೌತೆಕಾಯಿಯನ್ನು ಕೆಲವರು ಉಪ್ಪಿನಕಾಯಿ ಹಾಕುತ್ತಾರೆ, ಕೆಲವರು ಹಾಗೆಯೇ ತಿನ್ನುತ್ತಾರೆಂದು ಹೇಳುತ್ತಾರೆ. 2001–02ರಲ್ಲಿ 120 ಕೋಟಿ ರೂಪಾಯಿ 2002–03ರಲ್ಲಿ 139 ಕೋಟಿ ರೂಪಾಯಿ 2003–04 ರಲ್ಲಿ 140.70 ಕೋಟಿ ರೂಪಾಯಿ 2004–05 ರಲ್ಲಿ 141.30 ಕೋಟಿ ರೂಪಾಯಿಗಳು. ಆಗಿವೆ. ಹೂವಿನ ಬಗ್ಗೆ ಕರ್ನಾಟಕಕ್ಕೆ ಸಂಬಂಧಿಸಿದಂತೆ ಹೇಳುವುದಾದರೆ ಇದನ್ನು ನಾವೆಲ್ಲರೂ ಕೂಡ ಗಮನಿಸಬೇಕು, ಇಷ್ಟೆಲ್ಲ stringent position ಎಕ್ಸ್‌ಪೋರ್ಟ್ ಮಾಡಲಿಕ್ಕೆ ಇದ್ದರೂ ಕೂಡ ಕರ್ನಾಟಕದಲ್ಲಿ ಇಷ್ಟು ಹೋಗಿದೆ, 1999–2000ರಲ್ಲಿ 40.66ಕೋಟಿ ರೂಪಾಯಿ 2000–01 ರಲ್ಲಿ 40.00 ಕೋಟಿ ರೂಪಾಯಿ 2001–02ರಲ್ಲಿ 40.00 ಕೋಟಿ ರೂಪಾಯಿ 2002–03 ರಲ್ಲಿ 43.00 ಕೋಟಿ ರೂಪಾಯಿ 2003–04 ರಲ್ಲಿ 44.00 ಕೋಟಿ ರೂಪಾಯಿ 2004–05 ರಲ್ಲಿ 50 ಕೋಟಿ ರೂಪಾಯಿ ಫ್ಲವರ್ಸ್ ಅನ್ನು ನಾವು ಎಕ್ಸ್‌ಪೋರ್ಟ್ ಮಾಡಿದ್ದೇವೆ. ಒಂದು ನಿಮಿಷ ಯಾರೂ ಮಾತನಾಡಬಾರದು, ಇವತ್ತು ಟೋಟಲ್ ಅಗ್ರಿಕಲ್ಚರ್ ಎಕ್ಸ್‌ಪೋರ್ಟ್ ಎಷ್ಟಾಗಿದೆಯೆಂದರೆ ಅಧ್ಯಕ್ಷರೆ, 2004–05 ರಲ್ಲಿ 6,02,638.62 ಕೋಟಿ, ಇವತ್ತು ಎಕ್ಸ್‌ಪೋರ್ಟ್ ಇಷ್ಟೆಲ್ಲಾ ಆಗುತ್ತಿದ್ದರೂ ಕೂಡ ನಮ್ಮ ಕರ್ನಾಟಕದ ಎಕ್ಸ್‌ಪೋರ್ಟ್ ಎಷ್ಟೆಂದರೆ 4.53 ಕೋಟಿ ರೂಪಾಯಿಗಳಷ್ಟು ಮಾತ್ರ, ಇದನ್ನು ಹೆಚ್ಚಿಸಬೇಕಾದರೆ ನಾವು ಅನೇಕ ಸಬ್ಸಿಡಿಗಳನ್ನು ಕೊಡಬೇಕು, ಮೊಟ್ಟಮೊದಲನೆಯದಾಗಿ ಪ್ಲೇನ್‌ನಲ್ಲಿ ಹೋಗಬೇಕಾದರೆ ಪಾಕಿಸ್ತಾನದಲ್ಲಿ ಹೇಗೆ ಸಬ್ಸಿಡಿ ಕೊಡುತ್ತಿದ್ದಾರೆ ಹಾಗೆ ನಮ್ಮ ದೇಶದಲ್ಲೂ ಸಬ್ಸಿಡಿ ಕೊಟ್ಟರೆ ಇದಕ್ಕೆ ಉತ್ತೇಜನ ಕೊಟ್ಟ ಹಾಗಾಗುತ್ತದೆ. ಹಾಗಾಗಿ ಇದಕ್ಕೆ ಹೆಚ್ಚಿನ ಆದ್ಯತೆಯನ್ನು ಕೊಡಬೇಕೆಂದು ಈ ಸಮಯದಲ್ಲಿ ಹೇಳಿ ಇವತ್ತು ನನಗೆ ಕೃಷಿ ಮತ್ತು ತೋಟಗಾರಿಕೆ ವಿಷಯದ ಮೇಲೆ ಚರ್ಚೆ ಮಾಡಲಿಕ್ಕೆ ಅವಕಾಶ ಕೊಟ್ಟಿರತಕ್ಕಂಥ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಆರಗ ಜ್ಞಾನೇಂದ್ರ (ತೀರ್ಥಹಳ್ಳಿ): ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಶ್ರೀನಿವಾಸಗೌಡರು ಹೇಳಿದರು, ಸಹಾಯಧನ ಎಷ್ಟೇ ಕೊಟ್ಟರೂ ಸಹ ಕೆಲವು ಕಂಪನಿಗಳು ಸಹಾಯಧನ

ಪಡೆಯಲಿಕ್ಕೋಸ್ಕರವೇ ಓಪನ್ ಆಗುತ್ತಿವೆ. ನಾವು ಪವರ್ ಟಿಲ್ಲರ್‌ಗೆ ಅದು ಐದು ಹೆಚ್.ಪಿ.ಮೋಟರ್‌ಗೆ 45,000–00 ರೂಪಾಯಿಗಳ ಪವರ್ ಟಿಲ್ಲರ್ ಕೊಡುತ್ತಿದ್ದೇವೆ. ಅದರ ಬೆಲೆ ಈಗ ಬಹಳ ಹೆಚ್ಚಾಗಿದೆ, ಅದರ ಬೆಲೆಯನ್ನು ಏರಿಸಿಕೊಂಡಿದ್ದಾರೆ. ಪಂಪ್‌ಸೆಟ್ ಖರೀದಿಗೆ ನಾವು ಸಬ್ಸಿಡಿ ಕೊಟ್ಟರೆ ಅದರೆ ಬೆಲೆ ಜಾಸ್ತಿಯಾಗುತ್ತದೆ. ನಮ್ಮ ಬೀಜಗಳಿಗೋಸ್ಕರ ಸಹಾಯಧನ ಕೊಡುತ್ತೇವೆ. ಇದ್ದಕಿದ್ದ ಹಾಗೆ ಮಾರುಕಟ್ಟೆಯಲ್ಲಿ ಬೀಜಗಳ ಧಾರಣೆಯೇ ಜಾಸ್ತಿಯಾಗುತ್ತದೆ. ಇದನ್ನು ಕಂಟ್ರೋಲ್ ಮಾಡದಿದ್ದರೆ ಯಾರಿಗೆ ಸಹಾಯಧನ ದೊರೆಯಬೇಕೋ ಅವರಿಗೆ ಸಹಾಯಧನ ದೊರೆಯುವುದಿಲ್ಲ. ಎಷ್ಟು ಕೋಟಿ ರೂಪಾಯಿಗಳನ್ನಾದರೂ ನೀವು ಕೊಡಿ, ಅವರ ಪಾಕೆಟ್‌ಗೆ ಸೇರುತ್ತದೆಯೇ ಹೊರತು ರೈತನಿಗೆ ಇದರಿಂದ ಏನೂ ಲಾಭವಾಗುವುದಿಲ್ಲ. ಎಲ್ಲೋ ಒಂದು ಕಡೆ ಇದನ್ನು ತಡೆಗಟ್ಟಲಿಕ್ಕೆ ಬೇಕಾಗುವ ವಿಶೇಷವಾದಂಥ ಪ್ರಯತ್ನ ಸರ್ಕಾರದ ಕಡೆಯಿಂದ ಆಗಬೇಕಾಗಿದೆ, ಉನ್ನತಾಧಿಕಾರಿಗಳು ಒಂದು ಕಡೆ ಕುಳಿತುಕೊಂಡು ಆಲೋಚನೆ ಮಾಡಿ ರೈತರಿಗೆ ನೇರವಾಗಿ ಸಹಾಯಧನ ಲಭ್ಯವಾಗಲಿಕ್ಕೆ ಹಾಗೂ ಈ ಕಂಪನಿಗಳು ಶೋಷಣೆ ಮಾಡದಿರುವಂತಾಗಬೇಕು. ನಮ್ಮ ಸಬ್ಸಿಡಿಗೋಸ್ಕರ ಬಾಯಿ ತೆರೆದುಕೊಂಡು ಹೊಸದಾಗಿ ಓಪನ್ ಆಗುವ ಕಂಪನಿಗಳನ್ನು ತಡೆಗಟ್ಟುವ ಕೆಲಸವಾಗದಿದ್ದರೆ, ನಮ್ಮ ಸಬ್ಸಿಡಿ ರೈತನ ಹೆಸರಿನಲ್ಲಿ ಖರ್ಚಾಗುತ್ತದೆ, ಆ ಹಣ ರೈತನಿಗೆ ಮುಟ್ಟದೆ ಆ ಕಂಪನಿಗಳಿಗೆ ಹೋಗಿ ಸೇರುತ್ತದೆ, ರೈತ ಹಾಗೆ ಇರಬೇಕಾಗುತ್ತದೆ. ಬೇರೆನಿಲ್ಲ.

ಶ್ರೀ ಕೆ. ಶ್ರೀನಿವಾಸಗೌಡ: ಮಾನ್ಯ ಅಧ್ಯಕ್ಷರೆ, ಒಂದು ನಿಮಿಷ ಪವರ್ ಟಿಲ್ಲರ್ ಬಗ್ಗೆ ಒಂದು ಮಾತು ಹೇಳುತ್ತೇನೆ. ಈಗಿನ ಕಾರ್ಯದರ್ಶಿಗಳು ಅದರ ವಿಷಯದಲ್ಲಿ ಬಹಳಷ್ಟು ದಿನ ನನ್ನ ಜೊತೆಗೆ ಇದ್ದರು, ಕಡೆಯಲ್ಲಿ ಮೂರು ತಿಂಗಳು ಕೆಲಸ ಮಾಡಿದ್ದರು. ಚೈನಾ ದೇಶದಿಂದ 15 ರಿಂದ 20,000 ರೂಪಾಯಿಗಳಿಗೆ ಟ್ರಾಕ್ಟರ್ ಸಿಗುತ್ತದೆ. ಆಗ ಅವರು ಬಹಳ ಕೆಲಸ ಮಾಡಿದ್ದರು, ಈಗೇನು ಮಾಡಿದ್ದಾರೋ ಗೊತ್ತಿಲ್ಲ, ಚೈನಾ ದೇಶದಿಂದ ಪವರ್ ಟಿಲ್ಲರ್ ಅನ್ನು ನಾವು ಇಂಪೋರ್ಟ್ ಮಾಡಿಕೊಂಡರೆ 15 ರಿಂದ 20,000/– ರೂಪಾಯಿಗಳಷ್ಟು ನಮಗೆ ಪ್ರಾಫಿಟ್ ಸಿಗುತ್ತದೆ. ನಾನು ಆಗ ನಮ್ಮ ಎಂ.ಡಿ. ಆಗಿದ್ದವರನ್ನೆಲ್ಲ ಕೂರಿಸಿ ಅವರೊಂದಿಗೆ ಚರ್ಚೆ ಮಾಡಿದ್ದೆ. ಅದರಲ್ಲಿಯೂ ಐ.ಎಸ್.ಐ ಮಾರ್ಕ್ ಮಾಡಲಿಕ್ಕೂ ಕೂಡ ಒಂದು ದೊಡ್ಡ ದಂಧೆ. ಹಾಗಾಗಿ ಕಾರ್ಯದರ್ಶಿಗಳಿಗೆ ಹೇಳುತ್ತಿದ್ದೇನೆ. ಅವರು ಮನಸ್ಸು ಮಾಡಿ ಆ ಪವರ್ ಟಿಲ್ಲರ್‌ಗಳನ್ನು ಖರೀದಿ ಮಾಡಿದರೆ ದೊಡ್ಡ ಉಪಕಾರವಾಗುತ್ತದೆ, ಸರ್ಕಾರಕ್ಕೂ ಹಣ ಉಳಿಯುತ್ತದೆ. ಮೊದಲು ಆ ಕೆಲಸವನ್ನು ಮಾಡಿಸಬೇಕು,

ಶ್ರೀ ಆರಗ ಜ್ಞಾನೇಂದ್ರ: ಒಂದು ಎರಡು ಸಾವಿರ ಖರೀದಿ ಮಾಡಿ ತಂದು ರೈತರಿಗೆ ಕೊಟ್ಟರೆ 45,000 ರೂಪಾಯಿಗಳಿಗೆ ಎರಡು ಪವರ್ ಟಿಲ್ಲರ್‌ಗಳನ್ನು ಕೊಟ್ಟುಬಿಡಬಹುದು.

ಶ್ರೀ ಕೆ. ಶ್ರೀನಿವಾಸಗೌಡ: ಮೊದಲು ಆ ರೀತಿ ಮಾಡಿದ್ದೆವು. ಈಗಲೂ ಸಹ ಹಾಗೆ ಖರೀದಿ ಮಾಡಿದರೆ ಯಥೇಚ್ಛವಾದಂತಹ ಹಣ ಸರ್ಕಾರಕ್ಕೆ ಉಳಿಯುತ್ತದೆ. ಬೇರೆ ಬೇರೆ ಸಬ್ಸಿಡಿಗಳಲ್ಲಿ ರೈತರಿಗೆ ಕೊಡುವುದಕ್ಕೆ ಅವಕಾಶವಾಗುತ್ತದೆ. ಅದರ ಬಗ್ಗೆ ನೀವು ಕಾರ್ಯದರ್ಶಿಗಳವರ ಬಳಿ ಕುಳಿತು ಚಾಕೌಟ್

ಮಾಡಿ, ಯಾವ ರೀತಿ ಮಾಡಬೇಕೆಂಬ ಬಗ್ಗೆ ಅವರಲ್ಲಿ ಮಾಹಿತಿಯಿದೆ, ಅದನ್ನು ಉಪಯೋಗಿಸಿಕೊಂಡು ಕೊಡುವಂಹ ಕೆಲಸವನ್ನು ಮಾಡಿ.

ಶ್ರೀ ಶಿವಾನಂದ ಎಸ್. ಪಾಟೀಲ್: ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಶ್ರೀನಿವಾಸಗೌಡರಲ್ಲಿ ನನ್ನದೊಂದು ವಿನಂತಿ, ಏಕೆಂದರೆ ತಾವು ಈಗ ಸಾವಯವ ಕೃಷಿ ಬಗ್ಗೆ ಮಾತನಾಡಿದಿರಿ, ಆರ್ಗ್ಯಾನಿಕ್ ಇನ್‌ಆರ್ಗ್ಯಾನಿಕ್ ಎರಡೂ ಕಡೆ ಮಾತನಾಡಿದಿರಿ. ಈಗ ಎಸ್.ಯು.ಪಿ.ಆರ್.ಇ.ಟಿ. ಕೊಡುತ್ತಿದ್ದಾರೆ 1999 ರಲ್ಲಿ ಯಾವ ರೇಟಿಗೆ ಕೊಡುತ್ತಿದ್ದಿರಿ, ಇವತ್ತು ಯಾವ ರೇಟಿಗೆ ಕೊಡುತ್ತಿದ್ದೀರಿ. ನೀವು ಒಂದು ಸ್ವಲ್ಪ ಸಬ್ಸಿಡಿ ಕೊಡಿ ಏಕೆಂದರೆ ನೀವು ಆ ಕಂಪನಿಗೆ ರಾಷ್ಟ್ರೀಯ ಅಧ್ಯಕ್ಷರಾಗಿದ್ದೀರಿ, ಬರೇ ಸರ್ಕಾರಕ್ಕೆ ಸಲಹೆ ಮಾಡಬೇಡಿ, ತಾವೂ ಕೂಡ ಎರಡು ಕಡೆ ಅಧ್ಯಕ್ಷರಾಗಿದ್ದೀರಿ. ಫರ್ಟಿಲೈಸರ್ಸ್ ಕೂಡ ಸಬ್ಸಿಡಿಯ ಮೂಲಕ ರೈತರಿಗೆ ಕೊಡಲಿಕ್ಕೆ ತಾವು ರಾಷ್ಟ್ರ ಮಟ್ಟದಲ್ಲಿ ಚಿಂತನೆ ಮಾಡಬೇಕು, ಏಕೆಂದರೆ ತಾವು ರಾಷ್ಟ್ರ ಮಟ್ಟದಲ್ಲಿ ಇದ್ದೀರಿ.

ಶ್ರೀ ಕೆ. ಶ್ರೀನಿವಾಸಗೌಡ: ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಶಿವಾನಂದ ಪಾಟೀಲರು ಹೇಳಿದ್ದಕ್ಕೆ ನಾನು ಹೇಳುತ್ತೇನೆ, ಈಗಾಗಲೇ, ಸಬ್ಸಿಡಿ ಕೊಟ್ಟ ಮೇಲೆ ನಾವು ರೈತರಿಗೆ ಸಹಾಯ ಮಾಡುತ್ತಿರುವುದು, ಕೇಂದ್ರ ಸರ್ಕಾರ ಸಬ್ಸಿಡಿ ಕೊಡುತ್ತಿದೆ, ಯೂರಿಯಾ, ಡಿ.ಐ.ಪಿ.ಗೆ, ಎನ್.ಪಿ.ಕೆ., ಪೊಟ್ಯಾಷಿಯಾಗೆ ಕೊಡುತ್ತಿದೆ, ಇವೆಲ್ಲದಕ್ಕೂ ಅವತ್ತು ಯೂಸರ್ಸ್ ಕಡಿಮೆಯಿದ್ದರು, ಇವತ್ತು ಯೂಸರ್ಸ್ ಜಾಸ್ತಿಯಾಗಿದ್ದಾರೆ. ಹಾಗಾಗಿ ಫ್ಯಾಕ್ಟರಿ ಲೆವೆಲ್‌ನಲ್ಲಿ ಸಬ್ಸಿಡಿ ಇಟ್ಟೇ ಕೊಡುವುದು, ಇಲ್ಲದಿದ್ದರೆ ನಿಮಗೆ 13 ಸಾವಿರ ಅಥವಾ 14,000/- ಆಗುತ್ತಿತ್ತು.

ಶ್ರೀ ಶಿವಾನಂದ ಎಸ್. ಪಾಟೀಲ್: ಕಾಸ್ಟ್ ಆಫ್ ಫರ್ಟಿಲೈಸರ್ಸ್ ಅವತ್ತಿಗೂ ಇವತ್ತಿಗೂ ಎಷ್ಟಾಗಿದೆ ನೀವು ಅದನ್ನು ಸ್ವಲ್ಪ ಅನಾಲೈಸ್ ಮಾಡಿ ಹೇಳಬೇಕು.

ಉಪಾಧ್ಯಕ್ಷರು: ಈಗ ಸದನವನ್ನು ನಾಳೆ ಬೆಳಿಗ್ಗೆ 11.00 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

(ಸದನವು ಸಂಜೆ 6 ಗಂಟೆ 15 ನಿಮಿಷಕ್ಕೆ ಮುಂದೂಡಲ್ಪಟ್ಟು ಪುನ: ದಿನಾಂಕ:28.06.2006 ರಂದು ಬುಧವಾರ ಬೆಳಿಗ್ಗೆ 11.00 ಗಂಟೆಗೆ ಸೇರಲು ನಿರ್ಣಯಿಸಿತು)

ದಿನದ ಪಟ್ಟಿಯಲ್ಲಿ ಸೇರಿಸಲಾದ ಚುಕ್ಕೆ ಗುರುತಿನ ಪ್ರಶ್ನೋತ್ತರಗಳು

135 (736) ಶ್ರೀ ಮಲ್ಲಿಕಾರ್ಜುನ ಸಿದ್ರಾಮಪ್ಪ ಖೂಬ (ಬಸವಕಲ್ಯಾಣ).: ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿರುವ ವಿದ್ಯುತ್ ಕಂಪನಿಗಳ ಸಂಖ್ಯೆ ಎಷ್ಟು; (ಎಸ್ಕಾಂಗಳು) ಇವುಗಳ ಕಾರ್ಯ ವ್ಯಾಪ್ತಿಗೆ ಬರುವ ಜಿಲ್ಲೆಗಳು ಯಾವುವು; (ವಿದ್ಯುತ್ ಕಂಪನಿಗಳ ಹೆಸರು ಮತ್ತು ಇವು ಯಾವ ದಿನಾಂಕದಿಂದ ಕೆಲಸ ನಿರ್ವಹಿಸುತ್ತಿರುವ ಬಗ್ಗೆ ವಿವರಗಳನ್ನು ಒದಗಿಸುವುದು);